# ಅಖಿಲ ಭಾರತ ಪತ್ರಿಕೆ

ಆಗಸ್ಟ್ 2016



## ಸನಾತನ ಜನ್ಮ

ಬೆಲೆ : 15/–



*The future is for those*
*who have the soul of a hero.*

\- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಸನಾತನ ಜನ್ಮ"


**ಅನು : ಡಾ. ಕೆ.ಎಸ್. ಆಮೂರ**

ಪ್ರಕಾಶ (ಕವಿತೆ) 3

**ಅನು : ಶ್ರೀ ಪುರುಷೋತ್ತಮ ಗಲಗಲಿ**

ನಮ್ಮ ಮಧ್ಯದಲ್ಲಿರುವ ದೈವೀ ಸಾನ್ನಿಧ್ಯ 6

**ಅನು : ಶ್ರೀ ವೀರೇಂದ್ರ ಸಿಂಪಿ**

ಅಗಸ್ಟ 15 ರ ಪ್ರಾಮುಖ್ಯತೆ 8

ಅಗಸ್ಟ ಹದಿನೈದರಂದಿನ ದರ್ಶನ 12

**ಅನು : ಡಾ. ಕೆ.ಎಸ್. ಆಮೂರ**

ಶ್ರೀ ಅರವಿಂದರು ತಮ್ಮ ಜನ್ಮದಿನಾಚರಣೆಯ ಸಂದರ್ಭಗಳಲ್ಲಿ ಮಾಡಿದ ಭಾಷಣಗಳು 19

ಅಗಸ್ಟ 15, 1947: ಭಾರತಕ್ಕೆ ಒಂದು ಸಂದೇಶ 44

**(All India Magazine)ದ ಸಂಪಾದಕರ ಟಿಪ್ಪಣಿ:**

ಶ್ರೀಮಾತೆಯವರು "ಶ್ರೀ ಅರವಿಂದರ ಜನ್ಮ" ಸನಾತನ ಜನ್ಮ ಎಂದು ತಿಳಿಯಪಡಿಸಿದ್ದಾರೆ. ಅವರು ಇನ್ನೂ ಮುಂದುವರಿದು "ಆ ಜನ್ಮದಿನ ಸಾರ್ವತ್ರಿಕ ಕ್ಷಮಾದಾನದ ಶ್ರೇಷ್ಠದಿನವಾಗಿದೆ" ಎಂದೂ ಕೂಡ ತಿಳಿಯಪಡಿಸಿದ್ದಾರೆ. ಶ್ರೀ ಅರವಿಂದರು ಜನ್ಮ ತಾಳಿದ ದಿನ ಅಗಸ್ಟ 15 ದೈವೀ ಪ್ರಾಮುಖ್ಯತೆ ಪಡೆದಿದೆ. ಶ್ರೀ ಅರವಿಂದರು ಪೃಥ್ವಿಯ ಮೇಲಿನ ಮನೆಗಾಗಿ ಆಯ್ದುಕೊಂಡ ಭಾರತ, ದೈವೀ ಕೃಪೆಯನ್ನು ಹಾಗೂ ಸಮಗ್ರ ಯೋಗವನ್ನು ಹೊರತರಲು ಶ್ರೀಮಾತೆಯವರು ಆಯ್ದುಕೊಂಡ ದೇಶ ಭಾರತ, ಅದರ ಸ್ವಾತಂತ್ರ್ಯದ ಕಾಣಿಕೆಯನ್ನು ಅದೇ ದಿನ ಎಂದರೆ ಅಗಸ್ಟ ಹದಿನೈದರಂದು ಪಡೆದುಕೊಂಡಿತು. ಆದಾಗ್ಯೂ ಭಾರತ ಹಾಗೂ ಮನುಕುಲ ಶ್ರೀ ಅರವಿಂದರ ಜನ್ಮದ ಅತ್ಯಮೋಘ ಪ್ರಾಧಾನ್ಯವನ್ನು ಅರಿವಿಗೆ ತಂದುಕೊಳ್ಳಲು ಸಾಗಿ ಹೋಗಬೇಕಾದ ಕಾಲ ಸುದೀರ್ಘವಾಗಿದೆ. ಈ ಸಂಚಿಕೆಯಲ್ಲಿ ಶ್ರೀ ಅರವಿಂದರ ಜನ್ಮ ದಿನದ ಮಹತ್ವಪೂರ್ಣ, ಸ್ವಾರಸ್ಯಕರ ಸಂಗತಿಗಳನ್ನು ಕೈಗೆತ್ತಿಕೊಂಡಿದ್ದೇವೆ. ಜಗತ್ತಿನ ಎಲ್ಲೆಡೆಯಲ್ಲಿ ಶ್ರೀ ಅರವಿಂದರ ಅನುಯಾಯಿಗಳು ಹಾಗೂ ಭಕ್ತರು ಈ ದಿನವನ್ನು ದರ್ಶನ ದಿನವೆಂದು ಆಚರಿಸುತ್ತಾರೆ.

*



## ಪ್ರಕಾಶ (ಕವಿತೆ)

ಪುರಾತನ ವಿಷಣ್ಣತೆಯಿಂದ ತೀವ್ರಗೊಂಡ ಗರ್ಭದಿಂದ
  ಸೂರ್ಯ ಉರುಳಿದ ಕಪ್ಪಾಗಿ ಬರಿದಾಗಿ,
ನಾನವನ ಕಪ್ಪಾದ ಎದೆ ಮುಚ್ಚಲು ನನ್ನ ಹೊಂಬಣ್ಣದ
  ಕೂದಲಿನ ಎಳೆಗಳಿಂದ ನಡುವಂಗಿಯನು ನೇಯುವವರೆಗೆ;

ಮತ್ತು ಅಂತರಿಕ್ಷದ ವಿಶಾಲ ಡೇರೆ ಗಾಳಿಯೊಂದಿಗಿನ
ಅದರ ಹೊಡೆತದೊಂದಿಗೆ ಮೇಲಕ್ಕೆದ್ದಾಗ,
ಅದರ ಅಪ್ರತಿಮ ನೀಲಿ ವರ್ಣವನು ನಾನು
ಸೀಸದ ಕಡ್ಡಿಯಿಂದ ಗುರುತು ಹಾಕಿಕೊಂಡೆ,
ಮತ್ತು ಅದರ ಸುತ್ತ ಥಳಥಳಿಸುವ ತಾರೆಗಳನಿರಿಸಿದೆ.

ಆನಂದ ಧಾಮದ ನಿಕೇತನಗಳ ಹೂವುಗಳನು ಹಾಗೂ ಅವುಗಳ
ಜೀವಂತ ಹಸಿರಿರುವ ಎಲೆಗಳನು ನಾ ಚಿತ್ರಿಸಿದೆ
ನಾನುಪಯೋಗಿಸಿದ ಬಣ್ಣಗಳು ಆನಂದ ಧಾಮದ ಕನ್ಯಾರಾಣಿಯ
ಪಾಪರಹಿತ ಕಣ್ಣುಗಳಿಗೆ ಸೇರಿದವುಗಳಾಗಿಹವು;
ಸತ್ಯ ಹೇಳುವ ಹೃದಯದಲಿ ಸೈತಾನನ ಕಲೆ ಮೃತ್ಯುವಿನ
ಮಂತ್ರ ಪಠಣವನ್ನು ಬಿಗಿದಿರಿಸಿದಾಗ,
ಮೊದಲು ಜನಿಸಿದ ಕಣ್ಣೀರಿನ ರಜತ ವರ್ಣದ ಗೋಲದಲಿ
ನಡುಗುತ್ತಿರುವ ಪೃಥ್ವಿಗೆ ನಾ ಪತನಗೊಂಡೆ.

ಶಾಪಗ್ರಸ್ತ ಜಗತ್ತಿನ ಮೇಲೆ ತೆರೆಗಳು ಭೇದಿಸಿಕೊಂಡು ನುಗ್ಗಿದಾಗ
ಅವುಗಳ ಕಡುಕೋಪದ ಕಾರ್ಯ ವೇಗವಾಗಿ ಚಲಿಸಿತ್ತು,
ಮತ್ತು ನಾವೆಯೊಳಗೆ ಒಂಟಿಯಾಗಿದ್ದ ಕೆಲವರು ಪ್ರಯತ್ನಪಟ್ಟು ನಿಜವಾಗಿ
ಮೃತರಾದವರ ಮಧ್ಯದೊಳಗಿಂದೆದ್ದು ಮುಂದುಗಡೆ ಬಂದಿಹರು,
ಬಿರುಗಾಳಿಯ ಕಪ್ಪು ಬಣ್ಣದ ಸುರುಳಿಯ ಹೆಸರು ಪಟ್ಟಿಯ ಮೇಲೆ
ದೇವನ ಶಾಂತಿಯ ಒಪ್ಪಿಗೆಯನು ನಾ ಬರೆಯುತ್ತಿದ್ದಂತೆ
ಮದುವೆಯ ಪ್ರಭೆ ಇರುವ ಆಶ್ಚರ್ಯಕರ ಮಿನುಗುಗಳಿಂದ
ಅವರ ವಿಪರೀತ ಭಯ ನಿಂತುಹೋಗುವಂತೆ ಆಜ್ಞಾಪಿಸಿದೆ.

ಪ್ರಜ್ಞಾಶೂನ್ಯ ಎದೆಯ ಮೇಲೆ ವಿಶ್ರಾಂತಿಗಾಗಿ ಒರಗಿಕೊಂಡ ಮಿತ್ರನ ಹಾಗೆ,
ರಾತ್ರಿಯ ವಿಷಣ್ಣ ಛಾಯೆ ನಿದ್ರಿಸಿಹುದು –
ಬೆಥಲೆಮಿನ ಆಡಂಬರರಹಿತ ಸ್ಥಳಗಳಲ್ಲಿ ಹಳ್ಳಿಗಾಡಿನ ಕುರುಬರು
ಏಕಾಂತದಲಿ ತಮ್ಮ ಜಾಗರಣೆ ಕೈಕೊಂಡಿರುವಾಗ,
ಮುಕ್ತಗೊಳಿಸುವ ಸ್ವರ್ಗದ ಯೋಜನೆಯ ಮುನ್ಸೂಚನೆಗಳನು

ಅವರ ದೃಷ್ಟಿಯ ಮುಂದೆ ನಾ ಬೆಳಗಿದಾಗ
ಮುಂಜಾವಿನ ಮಂತ್ರವನವರು ಪಠಿಸುತ್ತಿದ್ದಾಗ ದೈವೀ ಸಂರಕ್ಷಕ ಜನ್ಮ ತಾಳಿಹನು –
ಬಹಿಷ್ಕೃತ ಮಾನವನಿಗೆ ಸಂತಸವೇ ಸಂತಸ.

ಮೇಲರಿಮೆಯವರಿರಲಿ, ಕೀಳರಿಮೆಯವರಿರಲಿ ಸಮಾನ ಒಲವ ತೋರಿಸುವೆ,
ತಕ್ಕವರು, ತಕ್ಕವರಲ್ಲದವರು ಇವರೆಲ್ಲರ ಮೇಲೆ ಕೆಳಗಿಳಿದು ಬರುವೆ:
ಅಂಧಕಾರ, ಕಣ್ಣೀರುಗಳ ವ್ಯರ್ಥ ಗಗನಗಳಲಿ ಉರುಳುತಿಹ ಕುರುಡರೇ ಇರಲಿ,
ಸ್ನೇಹಿತನಾದ ನನ್ನ ಪವಿತ್ರ ಮಂದಹಾಸವನವರು ಭಾವನೆಗೆ
ತಂದುಕೊಳ್ಳುವರು.
ಅಲ್ಲದೆ ರಾಜರುಗಳ ವನಗಳಲಿ ಬೆಳೆದ ಗುಲಾಬಿ ಹೂವನು ಅಪ್ಪಿಕೊಳ್ಳುವ ತೆರದಿ
ಬೀಳುನೆಲದಲ್ಲಿ ಬೆಳೆದ ಹೂವನು ನನ್ನ ಪ್ರೇಮ ಅಪ್ಪಿಕೊಳ್ಳುವುದು.
ಬೆಳಗಿನ ಜಾವದಲಿ ಚಿಟ್ಟೆಯ ಶಿಬಿಕೆಯಿರುವಲ್ಲಿ ನಾ ಕಾಣಿಸಿಕೊಳ್ಳುವೆ,
ಅಗೋ ನೋಡಿರಿ! ಪತಂಗ ಸಂತಸದಿಂದ ರೆಕ್ಕೆಬಡಿಯುತಿರುವುದನು.

ತನ್ನ ಹೂವುಗಳನು ತ್ಯಜಿಸಿ ನಿಶೆ ಮುಂದೆ ಸಾಗಲು ಅದನ್ನು ಬೆನ್ನಟ್ಟಿ ಹೋಗುವಂತೆ,
ತರುಣ–ಹಗಲನ್ನು ಮುಂಜಾವಿನ ತೋಳುಗಳತ್ತ ಕರೆದೊಯ್ಯುವಂತೆ,
ಪ್ರಜ್ವಲ ಗಳಿಗೆಗಳಿಗೆ ನಾ ಆಜ್ಞಾಪಿಸುವವರೆಗೆ ಜನಶೂನ್ಯ ಬೆಳಗಿನ ಜಾವ
ಹತಾಶ ದುಃಖಿಯ ಹಾಗೆ ತನ್ನೆಲ್ಲ ಲಾವಣ್ಯದ ಜಂಬವನು ಮುಚ್ಚಿಡುತಿಹುದು.
ಉಲ್ಲಾಸಭರಿತ ಅಲೆಮಾರಿ ತನ್ನ ಪ್ರೇಮಿಯೆಂದು ನಿಶೆಯನ್ನು ಅರಸುತ್ತಿದ್ದಾಗ
ಮತ್ತು ತನ್ನ ಪರಿಮಳ ಬೀರುವ ನಿದ್ರೆಯಲಿ ಮುಳುಗಿದಾಗ
ಆ ಮೃದು ವಿರಾಮವನು ಪಶ್ಚಿಮದಿಂದ ಮೆಲುಗಾಳಿ ಬೀಸುವ
ಹಳದಿಕಿತ್ತಳೆ ಬಣ್ಣ, ಗುಲಾಬಿ ಬಣ್ಣಗಳಿರುವ ಪರದೆಗಳಲಿ ನಾ ಸುತ್ತಿಡುವೆ.

ಆಳವಾಗಿ ಕವಿದ ರಾತ್ರಿಯಲಿ ಮಗ್ನವಾದ ನನ್ನ ಪಹರೆಯಲಿ
ನಿದ್ರೆಮಾಡದಿರುವ ಕಣ್ಣಿನಿಂದ ನಾ ದಿಟ್ಟಿಸಿ ನೋಡುವೆ,
ನಾವಿಕನ ದಾರಿದೀಪವಾದ ನಕ್ಷತ್ರ
ಆಕಾಶದಿಂದ ಮರೆಯಾದಾಗ,
ಚಂಡಮಾರುತದ ರೆಕ್ಕೆಬಡಿತದಿಂದ ವೇಗಕ್ಕೊಳಗಾಗಿದ್ದರೂ ಕೂಡ
ನಿರ್ದಯಿ ಸಾಗರದಾದ್ಯಂತ ನನ್ನ ಮಾರ್ಗದರ್ಶನ ಪಡೆದು,

ಸಂಗಾತಿರಹಿತ ಕತ್ತಲೆಯಲಿರುವ ಅವನ ಏಕಾಂಗಿ ಹೊರಳಾಡುವ ನೌಕೆಯನು
ತರುವನವನು ಸುರಕ್ಷಿತವಾಗಿ ಆಶ್ರಯಧಾಮದತ್ತ.

ಮಂಜಿನಿಂದ ಥಳಥಳಿಸುವ ಬಳ್ಳಿಮನೆಗಳ ಮೇಲಿರುವ ಹೂವುಗಳನು,
ಹಸಿರುಗೂಡುಗಳೊಳಗೆ ಇರುವ ಹಕ್ಕಿಗಳನು ನಾ ಎಚ್ಚರಿಸುವೆ,
ತಮ್ಮ ಮುಂಜಾವಿನ ಕಾಂತಿಯಲಿ ಬಿಸಿಲು ಕಾಯಿಸುತಿರುವ
ಪರ್ವತ ಹಾಗೂ ಸಮತಲಗಳು ಮತ್ತೆ ಸೌಂದರ್ಯದಿಂದ ಪ್ರಕಾಶಿಸುವವು.
ಓ, ಕ್ಷಣಿಕ, ಬಿಟ್ಟು ಬಿಟ್ಟು ಬರುವ ನನ್ನ ಸಾನ್ನಿಧ್ಯ, ಇಷ್ಟೊಂದು
ಸಂತಸ ಕೊಡುವ ಅರ್ಹತೆಯನೀರೀತಿ ಪಡೆದಿರಲು,
ಪವಿತ್ರರಾದವರ ಮನೆಯ ಮೇಲೆ ದೇವತೆಯ ಮುಗುಳ್ನಗೆಯಿಂದ
ಸದಾ ಉಜ್ವಲವಾಗಿ ನೆಲೆಸಿರುವ ವೈಭವಗಳೆಂತಿರಬಹುದು!

**CWSA, 2/5–6** **– ಶ್ರೀ ಅರವಿಂದರು**

*

ಪ್ರವಾದಿಯಂತಹ ಈ ಕವಿತೆ 1883 ರಲ್ಲಿ ಪ್ರಕಟಗೊಂಡಿತ್ತು. ಇದು ಶ್ರೀ ಅರವಿಂದರು ತಮ್ಮ ಹತ್ತನೆಯ ವಯಸ್ಸಿನಲ್ಲಿ ಬರೆದು ಪ್ರಕಟಿಸಿದ ಮೊದಲ ಕವಿತೆ.

*

## ನಮ್ಮ ಮಧ್ಯದಲ್ಲಿರುವ ದೈವೀ ಸಾನ್ನಿಧ್ಯ


ಭಗವಂತನನ್ನು ಅಭಿವ್ಯಕ್ತಗೊಳಿಸುವ ಯಾವುದನ್ನಾದರೂ ಗುರುತಿಸಲು ಜನರು ಎಷ್ಟೊಂದು ಇಷ್ಟವಿಲ್ಲದವರಾಗಿರುತ್ತಾರೆಂದರೆ, ತಪ್ಪುಗಳನ್ನು ಕಂಡು–ಹಿಡಿಯಲು, ತೋರಿಕೆಯ ದೋಷಗಳನ್ನು ಶೋಧಿಸಲು ಅವರು ಸದಾ ಜಾಗರೂಕ ಬುದ್ಧಿಯುಳ್ಳವರಾಗಿರುತ್ತಾರೆ ಮತ್ತು ಹಾಗಾಗಿ ತಮ್ಮದೇ ಹಂತಕ್ಕಿಂತ ಉಚ್ಚವಾದದ್ದನ್ನು ತಮ್ಮ ಮಟ್ಟಕ್ಕೆ ಕೆಳಗಿಳಿಸುತ್ತಾರೆ. ತಮ್ಮನ್ನು ಅತಿಶಯಿಸುವುದನ್ನು ಕುರಿತು ಕ್ರೋಧಾವಿಷ್ಟರಾಗುತ್ತಾರೆ ಮತ್ತು ಮೇಲ್ಮೈಯಲ್ಲಿ ಕಂಡುಬರುವ ಕೊರತೆಗಳನ್ನು ಕಂಡುಹಿಡಿಯುವುದರಲ್ಲಿ ಯಶಸ್ವಿಯಾದಾಗ ಅವರು ಬಹಳ ಸಂತೋಷಪಟ್ಟುಕೊಳ್ಳುತ್ತಾರೆ. ಆದರೆ ಭಗವಂತನ ಸಾನ್ನಿಧ್ಯ ಪೃಥ್ವಿಯ ಮೇಲಿದ್ದಾಗ ಅದನ್ನು ತಮ್ಮ ಒರಟು ಭೌತಿಕ ಮನಸ್ಸಿನಿಂದ ಎದುರಿಸಿದರೆ ಅವರು

ಒರಟಾದುದನ್ನು ಭೇಟಿ ಮಾಡಬೇಕಾದ ನಿರ್ಬಂಧಕ್ಕೊಳಗಾಗುವರು ಎಂಬುದನ್ನು ಮರೆತಿರುತ್ತಾರೆ. ತಾವೇ ಸ್ವತಃ ಯಾವುದನ್ನು ನೋಡಲು ಕ್ಷಮತೆ ಇಲ್ಲದವರಾಗಿರುತ್ತಾರೋ ಇಲ್ಲವೆ ನೋಡುವುದನ್ನು ಇಷ್ಟಪಡುವುದಿಲ್ಲವೋ ಅಂತಹದನ್ನು ನೋಡುವ ಭರವಸೆ ಅವರಿಗಿರುವುದಿಲ್ಲ. ಭಗವಂತನ ಕ್ರಿಯೆಗಳ ಮೇಲ್ಮೈ ಬದಿಯನ್ನಷ್ಟೇ ಅವರು ಪರಿಗಣಿಸಿದಾಗ, ತಪ್ಪು ತೀರ್ಮಾನಕ್ಕೆ ಬರುವುದು ಖಂಡಿತ, ಏಕೆಂದರೆ ಅದನ್ನು ಮಾನವ ಚಟುವಟಿಕೆಗೆ ಹೋಲಿಸಬಹುದೆಂದು ಅವರಿಗೆ ತೋರಿಬರುವುದು ಹೋಲಿಸಲಾಗದಂತಹದು, ಅದು ಮಾನವ ಸಹಜವಲ್ಲದ ಮೂಲದಿಂದ ಮುಂದುವರಿದುಕೊಂಡು ಹೋಗುವುದಾಗಿರುತ್ತದೆ.

ಪೃಥ್ವಿಯ ಮೇಲೆ ಕಾರ್ಯಕೈಕೊಳ್ಳಲು ಪ್ರಕಟವಾಗಿರುವ ಭಗವಂತ ಸಾಮಾನ್ಯ ಜನರ ಹಾಗೆ ಕೈಕೊಳ್ಳುತ್ತಿರುವಂತೆ ತೋರಿಬರುತ್ತಾನೆ, ಆದರೆ ನಿಜವಾಗಿ ಹಾಗೆ ಮಾಡುತ್ತಿರುವುದಿಲ್ಲ. ಅಂತಹ ಸ್ಪಷ್ಟ ಹಾಗೂ ತೋರಿಕೆಗೆ ಕಂಡುಬರುವ ಪ್ರಮಾಣಬದ್ಧತೆ(standard)ಗಳಿಂದ ಅದರ ಮೌಲ್ಯಮಾಪನ ಮಾಡಲಾಗುವು–ದಿಲ್ಲ. ಆದರೆ ಜನರು ತಮ್ಮದೇ ಕೀಳಾಗಿರುವಿಕೆಯೊಡನೆ ಸಂಪೂರ್ಣವಾಗಿ ಪ್ರೇಮದಿಂದಿರುತ್ತಾರೆ ಮತ್ತು ಉಚ್ಚತರ ನೈಜತೆಗೆ ಅಧೀನವಾಗುವುದನ್ನಾಗಲಿ, ಆ ನೈಜತೆಯನ್ನು ಒಪ್ಪಿಕೊಳ್ಳುವುದನ್ನಾಗಲಿ ಅವರು ಸಹಿಸಿಕೊಳ್ಳುವುದಿಲ್ಲ. ದೋಷವನ್ನು ಹುಡುಕುವ ಈ ಆಸೆ, ಮನುಷ್ಯ ತನ್ನಲ್ಲಿರುವ ವಿಶಿಷ್ಟವಾದ ಏನೋ ಒಂದು ಉಚ್ಚತರ ನೈಜತೆ ಎಂದು ತನಗೆ ಹೇಳುವುದನ್ನು ದ್ವೇಷದಿಂದ ಕೂಡಿದ ಭಾವೋದ್ರೇಕದಿಂದ ಟೀಕಿಸುವುದು ಮತ್ತು ಸಂಶಯ ಪಡುವುದು ಇದೆಲ್ಲ ಮನುಕುಲದ ಮುದ್ರೆ(stamp)ಯೇ ಆಗಿರುತ್ತದೆ – ಅದು ಮನುಷ್ಯ ಮಾತ್ರನಾದವನನ್ನು ಗುರುತಿಸುತ್ತದೆ. ಇನ್ನೊಂದೆಡೆಗೆ ನಿಜವಾದುದಕ್ಕೆ, ಸುಂದರವಾದದ್ದಕ್ಕೆ, ಉದಾರವಾದದ್ದಕ್ಕೆ ಸ್ವಯಂಪ್ರೇರಿತ ಪ್ರಶಂಸೆ ಇದ್ದೆಡೆಯಲ್ಲೆಲ್ಲ ಭಗವಂತನ ವಿಶಿಷ್ಟವಾದ ಏನೋ ಒಂದರ ಅಭಿವ್ಯಕ್ತಿಯಿರುತ್ತದೆ. ಅದು ನಿಶ್ಚಿತವಾಗಿ ನಿಮ್ಮೊಳಗಿರುವ ಆತ್ಮವಾದ ಚೈತ್ಯಸತ್ತೆಯಿಂದಾದದ್ದು ಎಂಬುದನ್ನು ನೀವು ತಿಳಿದಿರಬೇಕು, ನೀವು ದೈವೀ ಮೂಲದ್ದೆಂದು ಭಾವನೆ ಮಾಡಿಕೊಂಡದ್ದಕ್ಕೆ ಪೂಜೆ ಸಲ್ಲಿಸಲು, ಪ್ರಶಂಸಿಸಲು ನಿಮ್ಮ ಹೃದಯ ಜಿಗಿದೆದ್ದು ಬಂದಾಗ ಭೌತಿಕ ಸತ್ತೆಯೊಂದಿಗೆ ಚೈತ್ಯದ ಸಂಪರ್ಕ ಉಂಟಾಗಿರುತ್ತದೆ.

**CWM, 14/221** – **ಶ್ರೀಮಾತೆ**

*



ಶ್ರೀ ಅರವಿಂದರಲ್ಲಿ ಯಾವುದನ್ನು ಕುರಿತು ನೀವು ಆರಾಧಿಸುತ್ತೀರೋ ಅದೇ ಭಗವಂತ (Divine).

**CWM, 13/27** **– ಶ್ರೀಮಾತೆ**

*

## ಅಗಸ್ಟ 15 ರ ಪ್ರಾಮುಖ್ಯತೆ

### ಶ್ರೀ ಅರವಿಂದರು ಜನ್ಮತಾಳಿದ್ದುದರ ಪ್ರಾಮುಖ್ಯತೆ

ಶ್ರೀ ಅರವಿಂದರ ಜನ್ಮ ಕುರಿತು ನಾನು ಹೇಳಿದ್ದರಲ್ಲಿಯ ಒಂದು ಪದಗುಚ್ಛ (phrase) ಕುರಿತು ಈ ಪ್ರಶ್ನೆಯಿದೆ. ಅದನ್ನು ಕುರಿತು ಹೇಳಿದ್ದು ಅವರ ಜನ್ಮದಿನದ ಸಾಯಂಕಾಲ ಸಮಯದಲ್ಲಾಗಿತ್ತು. ನಾನು ಅದನ್ನು "ಶಾಶ್ವತ ಜನ್ಮ" ಎಂದು ಕರೆದೆ. "ಶಾಶ್ವತ" ಎಂದರೇನು ಎಂಬ ಪ್ರಶ್ನೆಯನ್ನು ಕೇಳಲಾಗಿದೆ.

ಭೌತಿಕವಾಗಿ ಅದರರ್ಥ ಈ ಜನ್ಮದ ಪರಿಣಾಮಗಳು ಪೃಥ್ವಿ ಇರುವಷ್ಟು ದೀರ್ಘಕಾಲದವರೆಗೆ ಉಳಿದುಕೊಂಡಿರುತ್ತವೆ. ಶ್ರೀ ಅರವಿಂದರ ಜನ್ಮದ ಪರಿಣಾಮಗಳನ್ನು ಪೃಥ್ವಿ ಅಸ್ತಿತ್ವದಲ್ಲಿರುವವರೆಗೆ ಭಾವನೆಗೆ ತಂದುಕೊಳ್ಳಲಾಗುತ್ತದೆ.

ಮತ್ತು ಹಾಗಾಗಿ ನಾನು "ಶಾಶ್ವತ" ಎಂದು ಸ್ವಲ್ಪ ಕಾವ್ಯಮಯವಾಗಿ ಹೇಳಿದೆ.

ಮಾನಸಿಕವಾಗಿ ಆ ಜನ್ಮದ ನೆನಪು ಶಾಶ್ವತವಾಗಿ ಉಳಿದುಕೊಳ್ಳುತ್ತದೆ. ಯುಗ ಯುಗಾಂತರಗಳಲ್ಲಿ ಶ್ರೀ ಅರವಿಂದರ ಜನ್ಮವನ್ನು, ಅದರ ಎಲ್ಲ ಪರಿಣಾಮಗಳೊಂದಿಗೆ ನೆನಪಿಸಿಕೊಳ್ಳಲಾಗುವುದು.

ಚೈತ್ಯಾತ್ಮಿಕವಾಗಿ ಆ ಜನ್ಮ, ವಿಶ್ವದ ಇತಿಹಾಸದಲ್ಲಿ ಶಾಶ್ವತವಾಗಿ ಯುಗ ಯುಗಗಳಲ್ಲಿ ಮರುಕಳಿಸುತ್ತದೆ. ಈ ಜನ್ಮ ಪೃಥ್ವಿಯ ಇತಿಹಾಸದಲ್ಲಿ, ಕಾಲಕಾಲಕ್ಕೆ ಯುಗ ಯುಗಗಳಲ್ಲಿ ಸಂಭವಿಸುವ ಪ್ರಕಟಣೆಯಾಗಿರುತ್ತದೆ. ಅದರರ್ಥ ಜನ್ಮವೇ ಸ್ವತಃ ನವೀಕರಿಸಿಕೊಳ್ಳುತ್ತದೆ, ಪುನರಾವರ್ತಿಸುತ್ತದೆ, ಪುನರುತ್ಪಾದನೆಯಾಗುತ್ತದೆ, ಪ್ರತಿಸಲ ಬಹುಶಃ ಹೆಚ್ಚಿನದೇನನ್ನೋ – ಆ ಹೆಚ್ಚಿನದು ಹೆಚ್ಚು ಸಂಪೂರ್ಣ–ವಾದದ್ದನ್ನು, ಹೆಚ್ಚು ಪರಿಪೂರ್ಣವಾದದ್ದನ್ನು – ತರುತ್ತದೆ, ಆದರೆ ಅದು ಅವರೋಹಣದ ಅದೇ ಚಲನೆಯಾಗಿರುತ್ತದೆ, ಪ್ರಕಟಣೆಯಾಗಿರುತ್ತದೆ ಪಾರ್ಥಿವ ದೇಹದಲ್ಲಾಗುವ ಜನ್ಮವಾಗಿರುತ್ತದೆ.

ಮತ್ತು ಕೊನೆಯದಾಗಿ ಹೇಳುವುದಾದರೆ, ಕೇವಲ ಆಧ್ಯಾತ್ಮಿಕ ದೃಷ್ಟಿಕೋನದಿಂದ ಅದು ಪೃಥ್ವಿಯ ಮೇಲೆ ದೈವೀ ಶಾಶ್ವತವಾದವನ ಜನ್ಮ ಎನ್ನಬಹುದು. ಏಕೆಂದರೆ ಅವತಾರ ಭೌತಿಕ ರೂಪ ತಾಳಿದ ಪ್ರತಿಸಲ, ಅದು ದೈವೀ ಶಾಶ್ವತವಾದವನೇ ಜನ್ಮತಾಳುವುದಾಗಿರುತ್ತದೆ.

ಅದೆಲ್ಲವೂ "ಶಾಶ್ವತ ಜನ್ಮ" ಎಂಬ ಎರಡು ಶಬ್ದಗಳಲ್ಲಿ ಒಳಗೊಂಡಿದೆ.

**CWM, 8/178–79** **– ಶ್ರೀಮಾತೆ**

*

ಯಾರಾದರೂ, ಏನಾದರೂ ಶ್ರೀ ಅರವಿಂದರಿಗೆ ಸಹಾಯ ಸಲ್ಲಿಸಬಹುದೇ? ಸಹಾಯ ನೀಡುವವರು ಅವರು, ಅವರಿಗೆ ಸಹಾಯ ನೀಡಲಾಗುವುದಿಲ್ಲ.

**CWM, 17** **– ಶ್ರೀಮಾತೆ**

*

**ಒಂದು ನಿರ್ಣಾಯಕ ಘಟ್ಟ: ಭವಿಷ್ಯತ್ತಿನ ಕಾರ್ಯಕ್ಕಾಗಿ ಯೋಜನೆ**

ವೈಯಕ್ತಿಕವಾಗಿ ನನ್ನ ಸಾಧನೆಗಾಗಿ ಇಲ್ಲವೆ ಜೀವನಕ್ಕಾಗಿ ಅಗಸ್ಟ 15 ರ ದಿನ, ಸಾಮಾನ್ಯವಾಗಿ ನಿರ್ಣಾಯಕ ಘಟ್ಟ ಇಲ್ಲವೆ ಗಮನಾರ್ಹವಾದದ್ದು –

ನೇರವಲ್ಲದ ರೀತಿಯಲ್ಲಿ ಮಾತ್ರ ಅದು ಇತರರಿಗೆ ಹಾಗಿದೆ. ಈ ಸಲ ಅದು ನನಗೆ ಬಹಳ ಮಹತ್ವದ್ದಾಗಿತ್ತು. ನನ್ನ ವೈಯಕ್ತಿಕ ಸಾಧನೆ ಅದರ ಕೊನೆಯ ಕುರುಹನ್ನು ದೊರಕಿಸಿದೆ ಎಂದು ಹೇಳಬಹುದು ಮತ್ತು ದೀರ್ಘಕಾಲದಿಂದ ಸಿದ್ಧಿಸಿಕೊಳ್ಳುವಿಕೆ ಮತ್ತು ಪರಬ್ರಹ್ಮನಲ್ಲಿ ಹಲವಾರು ಗಂಟೆಗಳ ಕಾಲ ವಾಸಮಾಡಿರುವುದು ಇದೆಲ್ಲದರ ಮೂಲಕ ಒಂದು ಬಗೆಯ ಪರಾಕಾಷ್ಠೆ ತಲುಪಿದಂತಾಗಿದೆ. ಆಗಿನಿಂದ ನನ್ನಲ್ಲಿರುವ ಎಲ್ಲದರಲ್ಲಿ, ಅನ್ನಮಯ ಇಲ್ಲವೆ ಭೌತಿಕ ಆತ್ಮದ ಹೊರತಾಗಿ ಎಲ್ಲದರಲ್ಲಿ, ಅಹಂಮನ್ಯತೆ ಮೃತವಾಗಿದೆ, ಭೌತಿಕ ಆತ್ಮದ ಅಹಂಮನ್ಯತೆ ಇಡಿಯಾಗಿ ಮುಕ್ತಗೊಳ್ಳುವುದಕ್ಕಾಗಿ ಇನ್ನೂ ಹೆಚ್ಚಿನದನ್ನು ಸಿದ್ಧಿಸಿಕೊಳ್ಳುವವರೆಗೆ ಕಾದುಕೊಂಡಿರುತ್ತದೆ, ಆ ಇಡಿಯಾಗಿ ಮುಕ್ತಗೊಳ್ಳುವಿಕೆ ಪ್ರಾಸಂಗಿಕವಾಗಿ ಭೇಟಿ ಮಾಡುವವುಗಳು ಇಲ್ಲವೆ ಹಳೆಯ ಪ್ರತ್ಯೇಕಗೊಂಡಿದ್ದ ಅಸ್ತಿತ್ವದ ಸ್ಪರ್ಶಗಳು ಇವುಗಳಿಂದ ಆಗಬೇಕಾಗಿದೆ.

ನನ್ನ ಭವಿಷ್ಯತ್ತಿನ ಸಾಧನೆ ಪ್ರಾಣ, ವ್ಯಾವಹಾರಿಕ ಜ್ಞಾನ ಹಾಗೂ ಶಕ್ತಿ ಇವುಗಳನ್ನು ಕುರಿತಾಗಿದೆ – ಅದು ಸಾರಭೂತ ಜ್ಞಾನ ಹಾಗೂ ಸ್ವತಃ ಶಕ್ತಿ ಇವುಗಳನ್ನು ಕುರಿತಾದುದಲ್ಲ, ಏಕೆಂದರೆ ಅವು ನನ್ನಲ್ಲಿ ಈಗಾಗಲೇ ಇವೆ – ಆದರೆ ಅದೇ ಭೌತಿಕ ಆತ್ಮದಲ್ಲಿ ಸ್ಥಾಪಿತಗೊಂಡ ಜ್ಞಾನ ಹಾಗೂ ಶಕ್ತಿ ಮತ್ತು ನನ್ನ ಜೀವನದಲ್ಲಿಯ ಕಾರ್ಯ ಇವುಗಳನ್ನು ಕುರಿತಾಗಿ ಇವೆ. ನಾನು ಈಗ ಆ ಕಾರ್ಯ ಕುರಿತು ಹೆಚ್ಚು ಸ್ಪಷ್ಟವಾದ ವಿಚಾರಗಳನ್ನು ದೊರಕಿಸುತ್ತಿದ್ದೇನೆ, ಆ ವಿಚಾರ ಕುರಿತು ನಾನು ನಿನಗೆ ಸ್ವಲ್ಪಮಟ್ಟಿಗೆ ತಿಳಿಸಿಕೊಡಬಹುದು, ಏಕೆಂದರೆ ನೀನು ನನ್ನತ್ತ ಕೇಂದ್ರವೆಂದು ನೋಡುತ್ತಿರುವಿ, ನೀನು ಆ ಕೇಂದ್ರದಿಂದ ಏನು ಹೊರಸೂಸುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕು.

1. ಸನಾತನ ಧರ್ಮ ಹಾಗೂ ಅದರ ಎಲ್ಲ ಭಾಗಗಳನ್ನು ಕುರಿತು ಮಾನವ ಬುದ್ಧಿಮತ್ತೆಗೆ, ಹೊಸ ದೃಷ್ಟಿಕೋನದಿಂದ ಮರುವಿವರಣೆ ಕೊಡಬೇಕು. ಈ ಕಾರ್ಯ ಈಗಾಗಲೆ ಪ್ರಾರಂಭಗೊಂಡಿದೆ, ಅದರ ಮೂರು ನಾಲ್ಕಾಂಶ ಭಾಗವನ್ನು ಸ್ಪಷ್ಟವಾಗಿ ಕಾರ್ಯಗತಗೊಳಿಸಲಾಗಿದೆ. ಶ್ರೀಕೃಷ್ಣ ನನಗೆ ವೇದಗಳ ನಿಜವಾದ ಅರ್ಥವನ್ನು ತಿಳಿಸಿಕೊಟ್ಟಿದ್ದಾನೆ, ಅದಷ್ಟೇ ಅಲ್ಲ, ಆದರೆ ಅವನು ಭಾಷಾಶಾಸ್ತ್ರದ ಹೊಸ ವಿಜ್ಞಾನವನ್ನು ತೋರಿಸಿಕೊಟ್ಟಿದ್ದಾನೆ. ಆ ಶಾಸ್ತ್ರದಲ್ಲಿ ಮಾನವರ ಮಾತಿನ ವಿಧಾನಗಳನ್ನು ಹಾಗೂ ಮೂಲಗಳನ್ನು ತೋರಿಸಿಕೊಡಲಾಗಿದೆ, ಅದರಿಂದ ಹೊಸ ನಿರುಕ್ತವನ್ನು ರಚಿಸಬಹುದಾಗಿದೆ

ಮತ್ತು ಅದರ ಆಧಾರದ ಮೇಲೆ ವೇದಕ್ಕೆ ಹೊಸ ವ್ಯಾಖ್ಯಾನ ಕೊಡಬಹುದಾಗಿದೆ. ಹಾಗೆಯೇ ಅವನು ಉಪನಿಷತ್ತುಗಳಲ್ಲಿರುವ ಎಲ್ಲ ಅರ್ಥವನ್ನು ತೋರಿಸಿಕೊಟ್ಟಿದ್ದಾನೆ, ಈ ಅರ್ಥ ಭಾರತೀಯರಿಗಾಗಲಿ, ಯುರೋಪಿಯನ್ನರಿಗಾಗಿ ತಿಳಿದಿರಲಿಲ್ಲ. ಹಾಗಾಗಿ ನಾನು ಇಡೀ ವೇದಾಂತಕ್ಕೆ ಹಾಗೂ ವೇದಕ್ಕೆ ಮರುವಿವರಣೆ ಕೊಡಬೇಕಾಗಿದೆ, ಆ ವಿವರಣೆಯಿಂದ ಎಲ್ಲ ಧರ್ಮಗಳು ಹೇಗೆ ಮೇಲೆದ್ದು ಬರುತ್ತವೆ ಮತ್ತು ಎಲ್ಲೆಡೆಯಲ್ಲೂ ಒಂದೇ ಆಗಿರುತ್ತವೆ ಎಂಬುದು ತಿಳಿದುಬರುತ್ತದೆ. ಈ ರೀತಿಯಲ್ಲಿ ಭಾರತ ಜಗತ್ತಿನ ಎಲ್ಲ ಧಾರ್ಮಿಕ ಜೀವನದ ಕೇಂದ್ರವೆಂದು ಮತ್ತು ಸನಾತನ ಧರ್ಮದ ಮೂಲಕ ದೇವತಾವ್ಯಕ್ತಿಯ ಸಂಕಲ್ಪ ವಿಧಿಸಿದ (destined) ಸಂರಕ್ಷಕ ಎಂದು ಸಿದ್ಧಪಡಿಸಲಾಗುವುದು.

2. ವೈದಿಕ ಜ್ಞಾನದ ಆಧಾರದಿಂದ ಒಂದು ಯೌಗಿಕ ಸಾಧನೆಯನ್ನು ಸ್ಥಾಪಿಸಬೇಕಾಗಿದೆ, ಅದು ಆತ್ಮವನ್ನು ಮುಕ್ತಗೊಳಿಸುವುದಷ್ಟೇ ಅಲ್ಲ, ಆದರೆ ಪರಿಪೂರ್ಣ ಮನುಕುಲವನ್ನು ತಯಾರು ಮಾಡುತ್ತದೆ ಮತ್ತು ಸತ್ಯಯುಗ ನವೀಕರಣಗೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಆ ಕಾರ್ಯ ಈಗ ಪ್ರಾರಂಭವಾಗಬೇಕಾಗಿದೆ, ಆದರೆ ಕಲಿಯುಗ ಕೊನೆಗೊಳ್ಳುವವರೆಗೆ ಅದು ಪೂರ್ಣವಾಗದು.

3. ಭಾರತ ಕೇಂದ್ರವಾಗಿದ್ದು ಜಗತ್ತಿನಲ್ಲಿ ಅದರ ಸರಿಯಾದ ಸ್ಥಾನವನ್ನು ಪುನಸ್ಸ್ವಾಧೀನಪಡಿಸಿಕೊಳ್ಳುವಿಕೆಗಾಗಿ ಕಾರ್ಯ ಮಾಡಬೇಕಾಗಿದೆ, ಆದರೆ ಈ ಪುನಸ್ಸ್ವಾಧೀನಪಡಿಸಿಕೊಳ್ಳುವಿಕೆ ಮೇಲೆ ಹೇಳಿದ ಕಾರ್ಯದ ಭಾಗವಾಗಬೇಕು, ಮತ್ತು ಯೋಗವನ್ನು ಮಾನವ ಸಾಧನ ಹಾಗೂ ಉಪಕರಣಗಳಿಗೆ ಅನ್ವಯಿಸುವುದರ ಮೂಲಕ ಆಗಬೇಕು, ಹಾಗಿಲ್ಲದಿದ್ದರೆ ಅದು ಸಾಧ್ಯವಾಗದು.

4. ಪರಿಪೂರ್ಣ ಮನುಕುಲವನ್ನು ಉದ್ದೇಶದಲ್ಲಿಟ್ಟುಕೊಂಡಿರುವುದರಿಂದಾಗಿ ಸಮಾಜಕ್ಕೆ ಹೊಸರೂಪ ಕೊಡಬೇಕಾಗುವುದು, ಅದರಿಂದಾಗಿ ಅದು ಪರಿಪೂರ್ಣತೆಯನ್ನು ಒಳಗೊಳ್ಳಲು ಯೋಗ್ಯವಾಗುವುದು.

**CWSA, 36/177–78 (from a letter to Barin, Aug 1912)**

**– ಶ್ರೀ ಅರವಿಂದರು**

*

## ಕೊನೆಯ ಅವತಾರ ಮತ್ತು ಭೌತದ್ರವ್ಯದ ದೈವೀಕರಣ

**ಪ್ರಶ್ನೆ :** *ಶ್ರೀ ಅರವಿಂದರ ಜನ್ಮದಿನ ಮತ್ತು ಕ್ಯಾಥೋಲಿಕ ಚರ್ಚಿನವರು ಆಚರಿಸುವ ಕನ್ಯೆ ಮೇರಿಯ ಸದೇಹ ಸ್ವರ್ಗಾರೋಹಣದ ವಾರ್ಷಿಕೋತ್ಸವದ ದಿನ ಇವೆರಡಕ್ಕೆ ಏನಾದರೂ ಸಂಬಂಧವಿದೆಯೆ?*

**ಶ್ರೀಮಾತೆ :** ಹೌದು, ಅದನ್ನು ಶ್ರೀ ಅರವಿಂದರೇ ಸ್ವತಃ ಹೇಳಿದ್ದರು. ಕನ್ಯೆ ಮೇರಿಯ[1] ಸದೇಹ ಸ್ವರ್ಗಾರೋಹಣ ಭೌತದ್ರವ್ಯವನ್ನು ದೈವೀಕರಣಗೊಳಿಸಿದೆ. ಮತ್ತು ಇದು ಕೊನೆಯ ಅವತಾರದ ಗುರಿ[2].

**CWM, 8/268** **– ಶ್ರೀಮಾತೆ**

*

# ಅಗಸ್ಟ ಹದಿನೈದರಂದಿನ ದರ್ಶನ

## ಶ್ರೇಷ್ಠ ಅವರೋಹಣಗಳು ಹಾಗೆಯೇ ಶ್ರೇಷ್ಠ ಪ್ರತಿರೋಧಗಳು ಇರುವ ಅವಧಿ

**ಪ್ರಶ್ನೆ :** *ದರ್ಶನದ ಸಮಯದಲ್ಲಿ ದಿವ್ಯಾನಂದ, ದೈವೀ ಶಕ್ತಿ ಹಾಗೂ ದೈವೀ ಪ್ರಕಾಶಗಳಿರುವ ಭಾವನೆ ಬರುವುದರ ಬದಲಾಗಿ ಅತಿಯಾದ ಶುಷ್ಕತೆ ನನ್ನ ಅನುಭವಕ್ಕೆ ಬಂದಿತು.*

**ಶ್ರೀ ಅ :** ದಿವ್ಯಾನಂದ ಇಲ್ಲವೆ ದೈವೀ ಶಕ್ತಿ ಇಲ್ಲವೆ ದೈವೀ ಪ್ರಕಾಶ ನಿನ್ನಲ್ಲಿ ಅವರೋಹಣ ಮಾಡಲು ತೆರೆದುಕೊಂಡ ಸ್ಥಿತಿಯಲ್ಲಿ ನೀನಿರುವಿಯೋ ಇಲ್ಲವೆ ಪ್ರತಿರೋಧ ಮೇಲೆದ್ದು ಬರುವುದಕ್ಕೆ ಅನುವು ಮಾಡಿಕೊಡುವ ಸ್ಥಿತಿಯಲ್ಲಿ–ರುವಿಯೋ ಎಂಬುದರ ಮೇಲೆ ಅದು ಅವಲಂಬಿಸಿರುತ್ತದೆ. ಅಜ್ಞಾನದ್ದಾದ ಹಾಗೂ ಮಬ್ಬಾದ ಭೌತಿಕ ಪ್ರಜ್ಞೆ ಒಡ್ಡುವ ಪ್ರತಿರೋಧ ಅದಾಗಿದೆ, ಅದು ನಿನ್ನಲ್ಲಿ ಮೇಲಕ್ಕೆದ್ದು ಬಂದ ಹಾಗಿದೆ. ಅಗಸ್ಟ ಹದಿನೈದರ ಅವಧಿ ಶ್ರೇಷ್ಠ ಅವರೋಹಣ–

---

1. ಕ್ಯಾಥೋಲಿಕ ಚರ್ಚಿಗೆ ಸೇರಿದವರ ಒಂದು ಭಾಗ ಅಗಸ್ಟ 15 ರ ದಿನವನ್ನು ಮಾತೆ ಮೇರಿ ಸದೇಹ ಸ್ವರ್ಗಾರೋಹಣ ಮಾಡಿದ ದಿನವೆಂದು ಆಚರಿಸುತ್ತಾರೆ.
2. ಶ್ರೀ ಅರವಿಂದರ ಅವತಾರ, ಅವತಾರಗಳಲ್ಲಿ ಕೊನೆಯದೆಂದು ಸಾರಿ ಹೇಳಿದ್ದಾರೆ. ಆದರೆ ಬಹುಶಃ ಅವರದು ಮಾನವ ದೇಹದಲ್ಲಾಗುವ ಕೊನೆಯ ಅವತಾರ–ವಾಗಿರಬಹುದು.

**CWM, 10/253**

ಗಳಿಗಿರುವಂತೆ ಶ್ರೇಷ್ಠ ಪ್ರತಿರೋಧಗಳಿಗಾಗಿಯೂ ಕೂಡ ಇರುತ್ತದೆ. ಈ ಸಲದ ಹದಿನೈದರ ದಿನ ಅದಕ್ಕೆ ಹೊರತುಪಡಿಸಿದ್ದಾಗಿರಲಿಲ್ಲ.

**ನಿರೋದಬರಣ ಅವರೊಂದಿಗೆ ಪತ್ರ ವ್ಯವಹಾರ, ಪು. 57**

*

ಬಹಳಷ್ಟು ಸಲ ಸಂಭವಿಸುವುದು ಹೀಗಿದೆ: ದರ್ಶನದ ದಿನ ಹತ್ತಿರ ಬರುತ್ತಿದ್ದಂತೆ ವಿರೋಧೀ ಶಕ್ತಿಗಳು ತಮ್ಮನ್ನು ಒಟ್ಟಿಗೆ ಕೂಡಿಸಿಕೊಳ್ಳುತ್ತವೆ. ಅದು ವೈಯಕ್ತಿಕವಾಗಿ ಆಕ್ರಮಣ ಮಾಡುವುದಕ್ಕಿರಬಹುದು, ಇಲ್ಲವೆ ಸರ್ವಸಾಧಾರಣವಾಗಿ ವೈಯಕ್ತಿಕವಾಗಿ ಸ್ವೀಕರಿಸಬೇಕಾದದ್ದನ್ನು ಸ್ವೀಕರಿಸುವುದಕ್ಕೆ, ಮತ್ತು ಸರ್ವ–ಸಾಧಾರಣವಾಗಿ ಕೆಳಗಿಳಿಸಿ ತರಬೇಕಾದುದನ್ನು ಕೆಳಗಿಳಿಸಿ ತರುವುದಕ್ಕೆ ತಡೆ ಉಂಟು ಮಾಡುವುದಕ್ಕಾಗಿರಬಹುದು. ಹಾಗೆಯೇ ಬಹಳಷ್ಟು ಸಲ ದರ್ಶನದ ದಿನದ ನಂತರ ಬಲವತ್ತರವಾದ ಆಕ್ರಮಣವಿರುತ್ತದೆ, ಅದಕ್ಕೆ ಕಾರಣ ಕೈಕೊಂಡದ್ದನ್ನು ಆ ಶಕ್ತಿಗಳು ಇಲ್ಲವಾಗಿಸಲು ಬಯಸುತ್ತವೆ. ಕೈಕೊಂಡ ಕಾರ್ಯ ಮುಂದೆ ಸಾಗದಂತೆ ತಡೆಹಿಡಿಯಲು ಬಯಸುತ್ತವೆ. ವ್ಯಕ್ತಿಗೆ ಸಂಬಂಧಿಸಿದ್ದುದನ್ನು ಕುರಿತು ಹೇಳುವುದಾದರೆ, ಅವನು ಈ ಆಕ್ರಮಣಕ್ಕೆ ಒಳಗಾಗುವ ಆವಶ್ಯಕತೆ ಇಲ್ಲ, ಆ ಆಕ್ರಮಣದ ಸಹಜ ಗುಣದ ಬಗ್ಗೆ ಅರಿವುಳ್ಳವನಾದರೆ ಅವನು ಪ್ರತಿಕ್ರಿಯಿಸಿ ಅದನ್ನು ಹೊರಗೆಸೆಯಬಲ್ಲನು. ಇಲ್ಲವೆ ಅದಿನ್ನೂ ಒತ್ತಾಯ ತರುತ್ತಿದ್ದರೆ ಮನುಷ್ಯ ತನ್ನ ಸಂಕಲ್ಪ ಹಾಗೂ ನಂಬಿಕೆಗಳನ್ನು ದೃಢವಾಗಿ ಇರಿಸಿಕೊಂಡು, ಅದರಿಂದ ಹೊರಗೆ ಬರಬಲ್ಲನು, ಹೆಚ್ಚಿನ ತೆರೆದಿರಿಸಿಕೊಳ್ಳುವಿಕೆ ಹಾಗೂ ಪ್ರಗತಿ ಸಾಧಿಸಬಲ್ಲನು.

**CWSA, 35/524–25** **– ಶ್ರೀ ಅರವಿಂದರು**

*

**ಅಗಸ್ಟ 15 ರ ದರ್ಶನ ದಿನ ಕುರಿತು ಹೊಂದಿರಬೇಕಾದ ಸರಿಯಾದ ಮನೋಭಾವ**

**ಪ್ರಶ್ನೆ :** *ಅಗಸ್ಟ 15 ರ ದರ್ಶನ ದಿನ ಬರಲು ಇನ್ನು ಕೇವಲ ಹತ್ತು ದಿನಗಳು ಉಳಿದಿವೆ ಎಂದು ಯಾರೋ ಒಬ್ಬರು ನನಗೆ ಹೇಳಿದರು. ಪ್ರತಿದಿನವನ್ನೂ ಅಗಸ್ಟ 15 ರ ದಿನ ಎಂದು ಪರಿಗಣಿಸಬೇಕೆಂದು ನಾನು ಉತ್ತರ ನೀಡಿದೆ.*

**ಶ್ರೀ ಅ :** ಅದು ಸರಿಯಾದ ಮನೋಭಾವ. ಪ್ರತಿದಿನವನ್ನೂ ಆರೋಹಣವೊಂದು ಸಂಭವಿಸಲಿರುವ ದಿನ ಇಲ್ಲವೆ ಉಚ್ಚತರ ಪ್ರಜ್ಞೆಯೊಂದಿಗೆ ಸಂಪರ್ಕ

ಉಂಟಾಗಬಹುದಾದ ದಿನ ಎಂದು ಭಾವಿಸಬೇಕು, ಆಗ ಅಗಸ್ಟ 15 ರ ದಿನವೇ ಹೆಚ್ಚು ಯಶಸ್ವಿಯಾಗುವುದು.

*

ಅಗಸ್ಟ 15 ರ ದಿನವನ್ನು ಕುರಿತು ಹೇಳುವುದಾದರೆ, ಅದರ ಮೇಲೆ ಒತ್ತುಕೊಡುವುದು ಬೇಡ, ಅದು ವೈಯಕ್ತಿಕ ಸಂದರ್ಭಕ್ಕಿಂತ ಸಾರ್ವತ್ರಿಕ ರೀತಿಯದಾಗಿರುತ್ತದೆ – ವ್ಯಕ್ತಿಯ ವಿಷಯದಲ್ಲಿ ವರ್ಷದಲ್ಲಿ ಯಾವುದೇ ದಿನ ಅಗಸ್ಟ 15 ರ ದಿನವಾಗಬಹುದು, – ಎಂದರೆ ಜನ್ಮದಿನ ಇಲ್ಲವೆ ಆಂತರಿಕ ಸತ್ತೆಯಲ್ಲಿ ಏನೋ ಒಂದರ ಜನ್ಮದಿನವಾಗಬಹುದು. ಈ ಭಾವನೆಯೊಂದಿಗೆ ಮನುಷ್ಯ ಸಾಧನೆ ಕೈಕೊಳ್ಳಬೇಕು.

**CWSA, 36/523** **– ಶ್ರೀ ಅರವಿಂದರು**

*

ಶ್ರೀ ಅರವಿಂದರ ಜನ್ಮ ಶತಮಾನೋತ್ಸವವನ್ನು ಆಚರಿಸುವ ಜನರ ಆವಾಹನೆ ಅವರ ಸಾನ್ನಿಧ್ಯ ಹೆಚ್ಚು ಕ್ರಿಯಾಶೀಲವಾಗುವಂತೆ ಮತ್ತು ಪರಿಣಾಮಕಾರಿ–ಯಾಗುವಂತೆ ಮಾಡುತ್ತದೆ. ಆದರೆ ಅವರೊಂದಿಗೆ ಸತತ ಇರುವವರಿಗೆ ಅದು ಯಾವ ವ್ಯತ್ಯಾಸವನ್ನೂ ಉಂಟುಮಾಡುವುದಿಲ್ಲ.

ಅವರ ಸಮಾಧಿಯ ಸ್ಥಳದ ಮೇಲೆ ಏಕಾಗ್ರತೆ ವಹಿಸುವವರಿಗೆ ಅದೇ ಬಗೆಯ ಇಂದ್ರಿಯ ಗೋಚರ ಸಂಗತಿ ತೋರಿಬರುತ್ತದೆ: ಅವರು ಅಲ್ಲಿ ಯಾವಾಗಲೂ ಇದ್ದಾರೆ, ಆದರೆ ಕರೆ ಕೊಡುವವರಿಗೆ ಉತ್ತರ ನೀಡುವುದಕ್ಕೆ ಅವರ ಸಾನ್ನಿಧ್ಯ ಹೆಚ್ಚು ಕ್ರಿಯಾಶೀಲವಾಗುತ್ತದೆ.

**CWM, 17/372** **– ಶ್ರೀಮಾತೆ**

*

ಶ್ರೀ ಅರವಿಂದರ ಆಶೀರ್ವಾದ ಪಡೆದು ಅದರಿಂದ ಸಂತೋಷವಾದಾಗ ಏಕಾಗ್ರತೆಯಲ್ಲಿ ಉಳಿದುಕೊಳ್ಳುವುದು ಹೆಚ್ಚು ಒಳ್ಳೆಯದು, ಮತ್ತು ಆ ಸಂತೋಷವನ್ನು ಇತರರೊಡನೆ ಬೆರೆಯುವುದರ ಮೂಲಕ, ಅದರ ಬಗ್ಗೆ ಮಾತನಾಡುವುದರ ಮೂಲಕ ಚೆಲ್ಲಿಕೊಡುವುದರ ಬದಲಾಗಿ ಅದನ್ನು ಅಂತರಂಗದಲ್ಲಿ ಇರಿಸಿ ಬೀಗ ಹಾಕಿ ಕಾಪಾಡಿಕೊಂಡು ಬರುವುದು ಹೆಚ್ಚು ಒಳ್ಳೆಯದು.

**CWM, 16/86** **– ಶ್ರೀಮಾತೆ**

*

**ಜಗತ್ತು ಇನ್ನೂ ತಯಾರಾಗಿಲ್ಲ**

ದೈವೀ ಸತ್ಯದ ಈ ಜಗತ್ತನ್ನು ಶೂನ್ಯದಿಂದ ಸೃಷ್ಟಿಸಬೇಕಾಗಿತ್ತು ಎನ್ನುವ ಹಾಗಿಲ್ಲ. ಅದು ಅಲ್ಲಿದೆ, ಪದರಿನಲ್ಲಿ ನಮ್ಮದೇ ಸದ್ಯದ ಜಗತ್ತಿರುವ ಹಾಗಿದೆ. ಪ್ರತಿಯೊಂದೂ ಅಲ್ಲಿದೆ. ಆ ಸತ್ಯ ಜಗತ್ತಿನ ಸ್ಥಿತಿಯಲ್ಲಿ ನಾನು ಪೂರ್ತಿ ಎರಡು ದಿನಗಳ ಕಾಲ ಉಳಿದುಕೊಂಡಿದ್ದೆ, ಅಲ್ಲಿ ಪರಮ ಸೌಖ್ಯವಿತ್ತು. ಆ ಇಡೀ ಕಾಲದಲ್ಲಿ ಶ್ರೀ ಅರವಿಂದರು ನನ್ನ ಜೊತೆಗಿದ್ದರು – ನಾನು ನಡೆದಾಡಿದಾಗ, ಅವರು ನನ್ನೊಡನೆ ನಡೆದಾಡುತ್ತಿದ್ದರು, ನಾನು ಕುಳಿತುಕೊಂಡಾಗ ಅವರು ನನ್ನ ಹತ್ತಿರ ಕುಳಿತುಕೊಳ್ಳುತ್ತಿದ್ದರು. ದರ್ಶನ ದಿನವಾದ ಅಗಸ್ಟ 15 ರ ದಿನದಂದೂ ಕೂಡ ಅವರಲ್ಲಿದ್ದರು, ಸತತ ಉಳಿದುಕೊಂಡಿದ್ದರು. ಆದರೆ ಅವರಿದ್ದುದರ ಬಗ್ಗೆ ಅರಿವು ತಂದುಕೊಂಡವರು ಯಾರಿದ್ದಾರೆ? ಅತಿ ಕಡಿಮೆ ಜನ – ಒಬ್ಬರು ಅಥವಾ ಇಬ್ಬರು ಅದರ ಬಗ್ಗೆ ಭಾವನೆ ತಂದುಕೊಂಡರು. ನೋಡಿದವರಾರು? ಯಾರೂ ಇಲ್ಲ. ನಾನು ಈ ಎಲ್ಲ ಜನರನ್ನು, ಕಾರ್ಯದ ಕ್ಷೇತ್ರವನ್ನು ಶ್ರೀ ಅರವಿಂದರಿಗೆ ತೋರಿಸಿದೆ ಮತ್ತು "ಇಷ್ಟೊಂದು ಹತ್ತಿರವಿರುವ, ನಿಜವಾದ ಈ ಬೇರೆ ಜಗತ್ತು ನಮ್ಮ ಮಿಥ್ಯೆಯ ಜಗತ್ತಿನ ಸ್ಥಾನ ಪಡೆಯಲು ಬರುವುದೇ?" ಎಂದು ಕೇಳಿದೆ. ಅವರು ನೀಡಿದ ಉತ್ತರ ಕೇವಲ "ಇನ್ನೂ ತಯಾರಾಗಿಲ್ಲ" ಎಂದಾಗಿತ್ತು.

ಮತ್ತು ಆದಾಗ್ಯೂ ಈ ಜಗತ್ತಿನಿಂದ ಆ ಜಗತ್ತಿಗೆ ಸಾಗಿಹೋಗಲು ಬಹಳ ಕಡಿಮೆಯಾಗಿರುವ ಏನೋ ಒಂದು ಬೇಕಾಗಿರುತ್ತದೆ, ಇಲ್ಲವೆ ಆ ಇನ್ನೊಂದು ನಿಜವಾದ ಜಗತ್ತಾಗುವುದಿರುತ್ತದೆ. ಚಿಕ್ಕ ಕ್ಲಿಕ್ ಶಬ್ದ ಸಾಕಾಗಬಹುದು ಇಲ್ಲವೆ ಅದಕ್ಕೂ ಹೆಚ್ಚಾಗಿ ಆಂತರಿಕ ಮನೋಭಾವದಲ್ಲಿ ಸ್ವಲ್ಪ ಮಟ್ಟಿಗಿನ ಹಿಮ್ಮೊಗವಾಗುವಿಕೆ ಬೇಕಾಗಬಹುದು. ಅದನ್ನು ಹೇಳುವುದು ಹೇಗೆ? ಸಾಮಾನ್ಯ ಪ್ರಜ್ಞೆಯ ಗ್ರಹಿಕೆಗೆ ಅದು ಬಾರದಂತಿರುತ್ತದೆ, ಬಹಳ ಸ್ವಲ್ಪ ಆಂತರಿಕ ಹೊರಳುವಿಕೆಯಿಂದ (shift), ಗುಣಮಟ್ಟದಲ್ಲಿ ಬದಲಾವಣೆ ಸಾಕಷ್ಟಾಗಬಹುದು.

**ಅನುಯಾಯಿಯೊಂದಿಗೆ ಮಾತುಕತೆ ಅಕ್ಟೋಬರ 6, 1959**

*

ಅನುಯಾಯಿ ಆಗಿರುವವರು ಅವಶ್ಯವಾಗಿ ಆಶ್ರಮವಾಸಿ ಆಗಿರಬೇಕೆಂಬ ಸೂಚನೆ ಇರುವುದಿಲ್ಲ. ವಾಸ್ತವದಲ್ಲಿ ಆಶ್ರಮದಲ್ಲಿ ಇರುವವರಿಗಿಂತ ಹೆಚ್ಚಿನ

ಸಂಖ್ಯೆಯಲ್ಲಿರುವ ಅನುಯಾಯಿಗಳು ಆಶ್ರಮದ ಹೊರಗೆ ಜೀವಿಸುತ್ತಿದ್ದಾರೆ. ಆಶ್ರಮವಾಸಿ ಆಗಬೇಕಾದರೆ ಹಲವಾರು ಷರತ್ತುಗಳನ್ನು ಪಾಲಿಸಬೇಕಾಗುವುದು. ಆಶ್ರಮದ ಶಿಸ್ತುಪಾಲನೆಗೆ ಸರಿಹೊಂದಿಸಿಕೊಳ್ಳುವುದಕ್ಕಾಗಿ ಅನುಯಾಯಿ ಒಳ್ಳೆಯ ಆರೋಗ್ಯ ಹೊಂದಿರಬೇಕು, ಆರೋಗ್ಯ ಸರಿ ಇಲ್ಲದವರಿಗೆ ವಿಶಿಷ್ಟ ಆಹಾರ ನೀಡುವುದಕ್ಕಾಗಲಿ, ಸೇವೆ ಸಲ್ಲಿಸುವುದಕ್ಕಾಗಲಿ ವಿಶೇಷ ವ್ಯವಸ್ಥೆ ಆಶ್ರಮದಲ್ಲಿ ಇರುವುದಿಲ್ಲ. ದರ್ಶನಾಕಾಂಕ್ಷಿಗಳಾಗಿ ಆಶ್ರಮಕ್ಕೆ ಬಂದ ಜನರಿಗೆ ಅಂತಹ ವ್ಯವಸ್ಥೆಯನ್ನು ಸ್ವಲ್ಪ ಕಾಲದವರೆಗೆ ಮಾಡಿಕೊಡಬಹುದು, ಆದರೆ ಅನೇಕ ಕಾರಣಗಳಿಂದಾಗಿ ಅಂತಹ ವ್ಯವಸ್ಥೆಯನ್ನು ಶಾಶ್ವತವಾಗಿ ಮಾಡಲಾಗದು.

**CWM, 17/188** **– ಶ್ರೀಮಾತೆ**

*

**ಒಂದು ಅತ್ಯಂತ ಸೊಗಸಾದ ದರ್ಶನ**

... ಇಲ್ಲಿ ಅಗಸ್ಟ 15ರಂದು ಹತ್ತು ಗಂಟೆಗೆ ಧ್ಯಾನದ ಕಾರ್ಯಕ್ರಮವನ್ನು ಕೈಕೊಂಡಿದ್ದೆವು. ಹತ್ತು ಗಂಟೆಗೆ ಇನ್ನೂ ಹದಿನೈದು ನಿಮಿಷಗಳಿದ್ದಾಗ ನಾನು ಇಲ್ಲಿ ಮೇಜಿನ ಬಳಿ ಮೌನದಿಂದ ಕುಳಿತುಕೊಂಡಿದ್ದೆ ಮತ್ತು ನಂತರ ಶ್ರೀ ಅರವಿಂದರು ಬಂದರು ಎಂದು ಹೇಳಲಾರೆ, ಏಕೆಂದರೆ ಅವರು ಇಲ್ಲಿ ಸದಾ ಇದ್ದೇ ಇರುತ್ತಾರೆ, ಆದರೆ ಅವರು ತಮ್ಮನ್ನು ವಿಶೇಷ ರೀತಿಯಲ್ಲಿ ಪ್ರಕಟಗೊಳಿಸಿದರು... ಆ ಪ್ರಕಟಣೆ ಸೂಕ್ಷ್ಮ ಭೌತಿಕದಲ್ಲಿ ಮೂರ್ತರೂಪದಲ್ಲಾಗಿತ್ತು. ಅವರು ಎತ್ತರವಾಗಿ ಬೆಳೆದು ಪದ್ಮಾಸನ ಹಾಕಿಕೊಂಡು ಕುಳಿತರು, ಅವರ ದೇಹ ಆಶ್ರಮದ ಇಡೀ ಆವರಣ (compound) ವನ್ನು ವ್ಯಾಪಿಸಿತ್ತು, ಅದನ್ನು ಸ್ವಲ್ಪ ದಾಟಿಕೊಂಡು ಕೂಡ ಹೋಗಿತ್ತು. ಅದೆಷ್ಟರ ಮಟ್ಟಿಗೆಂದರೆ ಧ್ಯಾನ ಮಾಡುತ್ತಿದ್ದ ಜನರು ಮುಚ್ಚಿ ಹೋಗಿರಲಿಲ್ಲ, ಅವರು ಶ್ರೀ ಅರವಿಂದರ ದೇಹದೊಳಗಿದ್ದರು. ಅವರು ಆ ರೀತಿ ಕುಳಿತುಕೊಂಡಿದ್ದರು. ಸೂಕ್ಷ್ಮ ಭೌತಿಕದಲ್ಲಿ ಅವರ ಸಾನ್ನಿಧ್ಯದಿಂದ ಉಂಟಾದ ಘರ್ಷಣೆಯ ಭಾವನೆ ನನಗೆ ಬರುತ್ತಿತ್ತು, ಅದು ಭೌತಿಕದಲ್ಲಾಗುವ ಘರ್ಷಣೆಯ ಹಾಗೆಯೇ ಇತ್ತು. ನಾನು ಆ ರೀತಿ ಅವರು ಅಲ್ಲಿ ಕುಳಿತದ್ದನ್ನು ನೋಡಿದೆ, ಬಹಳ ಎತ್ತರವಾಗಿದ್ದರು, ಪರಿಪೂರ್ಣವಾಗಿ ಪ್ರಮಾಣಬದ್ಧವಾಗಿದ್ದರು; ಮತ್ತು ನಂತರ ಮೃದುವಾದ ರೀತಿಯಲ್ಲಿ ಅವರೋಹಣ ಮಾಡಲು ಪ್ರಾರಂಭಿಸಿದರು – ಈ ಅವರೋಹಣವೇ ಘರ್ಷಣೆ (friction) ಯನ್ನು ಉಂಟುಮಾಡಿತ್ತು, ಆ ಅವರೋಹಣ ಜನರಿಗೆ ಆಘಾತವನ್ನುಂಟು ಮಾಡುವ ರೀತಿಯದಾಗಿರಲಿಲ್ಲ.

ನಂತರ ಅವರು ಅಲ್ಲಿ ಅರ್ಧಗಂಟೆಗಿಂತಲೂ ಸ್ವಲ್ಪ ಹೆಚ್ಚು ಕಾಲ ನೆಲೆಸಿದ್ದರು ಹಾಗೂ ಉಳಿದುಕೊಂಡಿದ್ದರು, ಸಂಪೂರ್ಣವಾಗಿ ನಿಶ್ಚಲರಾಗಿದ್ದರು, ಆದರೆ ಅಲ್ಲಿದ್ದ ಜನರ ಮೇಲೆ ಪೂರ್ತಿಯಾಗಿ ಏಕಾಗ್ರತೆ ವಹಿಸಿದ್ದರು – ಆ ಜನರು ಅವರೊಳಗಿದ್ದರು.

ನಾನಿಲ್ಲಿ ಮುಗುಳ್ನಗುತ್ತ ಕುಳಿತಿದ್ದೆ, ಬಹುಮಟ್ಟಿಗೆ ನಿಜವಾಗಿ ನಗುತ್ತಲಿದ್ದೆ, ಎಲ್ಲೆಡೆಗೆ ಅವರಿಸಿರುವ ಭಾವನೆಯನ್ನು ನೀವು ತಂದುಕೊಳ್ಳಬಹುದಾಗಿತ್ತು. ಅಲ್ಲಿ ಹೆಚ್ಚಿನ ಮಟ್ಟದ ಶಾಂತಿಯಿತ್ತು; ಶಾಂತಿ, ಶಕ್ತಿ, ಸಾಮರ್ಥ್ಯಗಳು ಅದ್ಭುತ ರೀತಿಯಲ್ಲಿದ್ದವು. ಶಾಶ್ವತತೆ, ಭವ್ಯತೆ ಮತ್ತು ಪರಿಪೂರ್ಣತೆಗಳು ಇರುವ ಭಾವನೆಯಿತ್ತು. ಎಲ್ಲವೂ ನೆರವೇರಿಕೆ ಕಂಡುಕೊಂಡಿದೆ ಎಂದು ಹೇಳಬಹುದಾದ ಪರಿಪೂರ್ಣತೆಯಲ್ಲಿ ಮನುಷ್ಯ ಜೀವಿಸುತ್ತಿರುವ ಹಾಗಿರುವ ಭಾವನೆಯಿತ್ತು. ಅದು ಒತ್ತಾಯ ತರುತ್ತಲಿತ್ತು. ಅದನ್ನು ತಂದುಕೊಳ್ಳದವ ಸ್ಪಷ್ಟವಾಗಿ ಜಡತ್ವದಲ್ಲಿರುವ ಮನುಷ್ಯನಾಗಿದ್ದ.

ಮತ್ತು ನಂತರ ಅವರು ಒಮ್ಮೆಗೆ ಹೊರಟುಹೋದ ಹಾಗಿರಲಿಲ್ಲ, ಏನೋ ಒಂದು ಆವಿಯ ರೂಪದಲ್ಲಿ ಹಾರಿ ಹೋಗುತ್ತಿರುವ ಹಾಗೆ ಬಹಳ ನಿಧಾನಗತಿಯಿಂದ ಅವರು ಹೊರಟುಹೋದರು. ನಂತರ ವಿಷಯಗಳು ಸಾಮಾನ್ಯ ಸ್ಥಿತಿಗೆ ಮರಳಿ ಹೋದವು, ಅಲ್ಲಲ್ಲಿ ವೈವಿಧ್ಯಮಯ ಏಕಾಗ್ರತೆಗಳು ಹಾಗೂ ಚಟುವಟಿಕೆಗಳಿದ್ದವು. ...

ಕೆಲವರಿಗೆ ಅದರ ಬಗ್ಗೆ ಭಾವನೆ ಬಂದಿರಬಹುದು ಎಂದು ನನಗನಿಸುತ್ತದೆ. – ಅವರು ಅದನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳದೆ ಇರಬಹುದು; ಏಕೆಂದರೆ ಅವರಲ್ಲಿ ಸಮಗ್ರ ದೃಷ್ಟಿ ಇರಲಿಲ್ಲ, ಆದರೆ ತಮ್ಮಲ್ಲಿ ಅವರು ಅವರೋಹಣ ಮಾಡುತ್ತಿದ್ದ ಭಾವನೆ ತಂದುಕೊಂಡಿರಬಹುದು. ಏಕೆಂದರೆ ಅಪರಾಹ್ನದಲ್ಲಿ ಎಲ್ಲವೂ ಸಾಮಾನ್ಯ ಸ್ಥಿತಿಗೆ ಬಂದ ನಂತರ (ಶ್ರೀ ಅರವಿಂದರು ಸಹಜವಾಗಿ ಸದಾ ಇಲ್ಲಿರುತ್ತಾರೆ, ಆದರೆ ಆ ರೀತಿಯಲ್ಲಲ್ಲ), ಅಲ್ಲಿ ಒಂದು ಬಗೆಯ ವಿಷಾದದ ತರಂಗ ವಾತಾವರಣದಲ್ಲಿ ಹಾದುಹೋಗುತ್ತಿತ್ತು, ಯಾರೋ ಒಬ್ಬರು "ಓಹ್ ಈಗ ಸುಂದರವಾಗಿದ್ದ ಈ ಕಾರ್ಯ ಕೊನೆಗೊಂಡಿತು; ಅಗಸ್ಟ 15ರ ಕಾರ್ಯಕ್ರಮ ಮುಗಿಯಿತು!" ಎಂದು ಹೇಳುತ್ತಿದ್ದ ಹಾಗಿತ್ತು. ಆದರೆ ಅದು ನಾನು ವರ್ಣನೆ ಮಾಡಿದ ಹಾಗಿತ್ತು, ಹಾಗಿದ್ದ ಏನೋ ಒಂದಾಗಿತ್ತು.

ಮೂರ್ತರೂಪಕ್ಕಿಂತಲೂ ಹೆಚ್ಚಿನದಾಗಿತ್ತು. ಅದನ್ನು ಹೇಗೆ ಹೇಳಬೇಕೆಂಬುದು ನನಗೆ ತಿಳಿಯದು. ಅದರ ಸುತ್ತ ಪರಿಪೂರ್ಣತೆಯಿದ್ದ ಭಾವನೆಯಿತ್ತು.

ಬಹಳಷ್ಟು ಸಲ ನಾನು ಅವರನ್ನು ಅತಿಮಾನಸ ಪ್ರಕಾಶದಲ್ಲಿ ನೋಡಿದ್ದೇನೆ. ಅವರು ಮೇಲಿಂದ ಮೇಲೆ ಆ ರೀತಿಯಲ್ಲಿ ಬಂದಿದ್ದಾರೆ, (ನಾನು ಬಾಲ್ಕನಿ ದರ್ಶನ ನೀಡುವುದಕ್ಕೆ ಹೋದಾಗ ಬರುತ್ತಿದ್ದರು, ಕೆಲವೊಮ್ಮೆ ಸಮಾಧಿಯ ಮೇಲೆ ಇರುತ್ತಿದ್ದರು, ಬಹಳಷ್ಟು ಸಲ ಬರುತ್ತಿದ್ದರು.) ಆದರೆ ಅಂತಹದು ಮೊಟ್ಟಮೊದಲಿಗೆ ಆಗಿತ್ತು, ಅಲ್ಲಿ ಪರಿಮಾಣಗಳು ಭವ್ಯವಾಗಿದ್ದವು. ಕುಳಿತುಕೊಂಡು ಅವರು ಆಶ್ರಮದ ಆವರಣದಾಚೆಗೆ ಚಾಚಿಕೊಂಡು ಹೋಗಿದ್ದರು. ಮೂರ್ತಗೊಂಡಿದ್ದ ಅವರ ಬಗ್ಗೆ ಭೌತಿಕವಾಗಿ ಭಾವನೆ ತಂದುಕೊಳ್ಳುವಂತಿತ್ತು. ಅಲ್ಲಿ ಅದೆಂತಹ ಗಾಢನಂಬಿಕೆ, ಸಂತೋಷ, ನಿಶ್ಚಿತತೆ ಇದ್ದವೆಂದರೆ ಪ್ರತಿಯೊಂದು ಎಷ್ಟೊಂದು ನಿಸ್ಸಂದೇಹವಾದದ್ದಾಗಿತ್ತೆಂದರೆ ಅದು ಒಟ್ಟಿನಲ್ಲಿ ಎಲ್ಲವನ್ನೂ ಸಿದ್ಧಿಸಿಕೊಳ್ಳಲಾಗಿದೆ ಎನ್ನುವ ರೀತಿಯಲ್ಲಿತ್ತು. ಅಲ್ಲಿ ಯಾವುದೇ ಬಗೆಯ ತಳಮಳವಿರಲಿಲ್ಲ, ಕಾರ್ಯಗಳನ್ನು ಕೈಕೊಂಡು ಮುಗಿಸುವುದಕ್ಕಾಗಿರುವ ಉದ್ವಿಗ್ನತೆ ಇರಲಿಲ್ಲ. ...

ಅವರು ನಮಗೆ ಸುಂದರವಾದ ಕಾಣಿಕೆಯೊಂದನ್ನು ಕೊಟ್ಟಿದ್ದಾರೆ.

(ಮೌನ)

ಅವರ ಎಲ್ಲ ಮಾಧುರ್ಯ, ಎಲ್ಲ ಭವ್ಯತೆ, ಅವರ ಎಲ್ಲ ಸಾಮರ್ಥ್ಯ, ಎಲ್ಲ ಸ್ಥಿರತೆ ಅಲ್ಲಿದ್ದವು. ಅವರು ದೇಹದಲ್ಲಿ ಇದ್ದಾಗ ಇದ್ದುದಕ್ಕಿಂತ ಬಹಳ ಬಲವತ್ತರವಾಗಿದ್ದವು!

**ಅನುಯಾಯಿಯೊಬ್ಬನೊಡನೆ ಮಾತುಕತೆ, ಅಗಸ್ಟ 18, 1962 – ಶ್ರೀಮಾತೆ**

*

ಕಾದಿರಿಸಿಕೊಳ್ಳದೆ ತಮ್ಮ ಎಲ್ಲ ಭಾಗಗಳಲ್ಲಿ ತಮ್ಮನ್ನು ಕೊಟ್ಟುಕೊಳ್ಳುವವರಿಗೆ ಭಗವಂತ ತನ್ನನ್ನು ಕೊಟ್ಟುಕೊಳ್ಳುತ್ತಾನೆ. ಅವರಿಗೆ ಸ್ಥಿರತೆ, ಪ್ರಕಾಶ, ಸಾಮರ್ಥ್ಯ, ಸ್ವರ್ಗಸುಖ, ಸ್ವಾತಂತ್ರ್ಯ, ವೈಶಾಲ್ಯ. ಜ್ಞಾನದ ಎತ್ತರಗಳು, ಆನಂದದ ಸಾಗರಗಳು ಇವೆಲ್ಲ ಇರುತ್ತವೆ.

**CWSA, 35/837 – ಶ್ರೀ ಅರವಿಂದರು**

*

# ಶ್ರೀ ಅರವಿಂದರು ತಮ್ಮ ಜನ್ಮದಿನಾಚರಣೆಯ ಸಂದರ್ಭಗಳಲ್ಲಿ ಮಾಡಿದ ಭಾಷಣಗಳು

(ಆಯ್ದು ತೆಗೆದ ಭಾಗಗಳು Extracts)

**ತಾಳ್ಮೆ ಕಳೆದುಕೊಳ್ಳುವುದು ಬೇಡ, ನಿರಾಶೆಗೊಳಗಾಗುವುದು ಬೇಡ, ನಂಬಿಕೆ ಕಳೆದುಕೊಳ್ಳುವುದು ಬೇಡ**

ನನ್ನ ಬಾಲ್ಯ ಕಾಲದಲ್ಲಿ ನನ್ನ ಸಹಜ ಸಾಮರ್ಥ್ಯ ಪೂರ್ತಿ ಅಭಿವೃದ್ಧಿ ಹೊಂದುವುದಕ್ಕಿಂತ ಮೊದಲು ನನ್ನಲ್ಲಿ ಬಲವತ್ತರವಾದ ಪ್ರಚೋದನೆಯೊಂದು ಇರುವುದರ ಬಗ್ಗೆ ಅರಿವುಳ್ಳವನಾದೆ. ಆಗ ಅದೇನಾಗಿದೆ ಎಂಬುದು ನನಗೆ ತಿಳಿದಿರಲಿಲ್ಲ ನಾನು ವಯಸ್ಸಿನಲ್ಲಿ ದೊಡ್ಡವನಾಗುತ್ತಿದ್ದಂತೆ ಆ ಪ್ರಚೋದನೆ ಹೆಚ್ಚು ಹೆಚ್ಚಾಗಿ ಪ್ರಬಲವಾಗತೊಡಗಿತು ಮತ್ತು ನನ್ನ ಬಾಲ್ಯ ಕಾಲದ ದೌರ್ಬಲ್ಯ, ಭಯ, ಸ್ವಾರ್ಥ ಇತ್ಯಾದಿಗಳು ನನ್ನ ಮನಸ್ಸಿನಿಂದ ಮಾಯವಾಗತೊಡಗಿದವು. ನಾನು ಮಾತೃಭೂಮಿಗೆ ಮರಳಿಬಂದ ದಿನದಿಂದ ಆ ಪ್ರಚೋದನೆ ಶ್ರೇಷ್ಠ ಶಕ್ತಿಯೊಡನೆ ಮುನ್ನುಗ್ಗುತ್ತಿದೆ, ನನ್ನನ್ನು ಅಧೀನಕ್ಕೊಳಪಡಿಸಿದ ಸತ್ವಪರೀಕ್ಷೆಗಳು ಮತ್ತು ದಮನಗಳಿಂದಾಗಿ ನಾನಿರಿಸಿಕೊಂಡ ಉದ್ದೇಶ ಹಾಗೂ ಭಕ್ತಿ ಹೆಚ್ಚು ದೃಢೀಕರಣ–ಗೊಳ್ಳುತ್ತಿವೆ. ಭಗವಂತನ ಕೃಪೆಯಿಂದ ಸ್ವಲ್ಪ ದೈವೀ ಸಾಮರ್ಥ್ಯ ಮಾನವ ಸತ್ತೆಯಲ್ಲಿ ಪ್ರಕಟವಾದಾಗ ಅದನ್ನು ಅಭಿವೃದ್ಧಿಪಡಿಸುವ ಯಾವುದೇ ಪ್ರಯತ್ನ ರಾಷ್ಟ್ರೀಯ ಜೀವನಕ್ಕೆ ಹೊಸ ಶಕ್ತಿಯನ್ನು ಕೊಡುತ್ತದೆ. ನಿಮ್ಮ ಮಾತೆಯ ಪಾದಗಳಡಿಯಲ್ಲಿ ನಿಮ್ಮ ಆತ್ಮಾಹುತಿ (sacrifice) ಮಾಡಿಕೊಳ್ಳಬೇಕಾಗುವುದು. ಆದ್ದರಿಂದ ನಿಮ್ಮನ್ನು ದೃಢವಾದ ನಂಬಿಕೆಯಿಂದ, ಹೃತ್ಪೂರ್ವಕವಾಗಿ ಅವಳ ಸೇವೆಗೆ ನಿಮ್ಮನ್ನು ಅರ್ಪಿಸಿಕೊಳ್ಳಬೇಕು. ಸದ್ಯದ ಕ್ಷಣದಲ್ಲಿ ಮಾತೃಭೂಮಿಗೆ ಸೇವೆ ಸಲ್ಲಿಸುವುದು ನಮ್ಮ ಅತ್ಯುಚ್ಚ ಕರ್ತವ್ಯವಾಗಿದೆ. ಇದು ಈ ಕ್ರೌರ್ಯದ ಯುಗದಲ್ಲಿ ನಮ್ಮ ಕರ್ತವ್ಯವಾಗಬೇಕು. ಚೈತನ್ಯವನ್ನು ರಕ್ಷಿಸಿಕೊಂಡು ಬರುವ ಕಾಲ ಈಗ ಸನ್ನಿಹಿತವಾಗಿದೆ. ತಾಳ್ಮೆ ಕಳೆದುಕೊಳ್ಳುವುದು ಬೇಡ, ನಿರಾಶೆಗೊಳಗಾಗುವುದು ಬೇಡ, ನಂಬಿಕೆ ಕಳೆದುಕೊಳ್ಳುವುದು ಬೇಡ. ಸದ್ಯದ ಆಯಾಸ ಹಾಗೂ ನಿಷ್ಕ್ರಿಯತೆ ಇವು ಸ್ವಾಭಾವಿಕವಾದವುಗಳು, ಇವುಗಳಿರುವ ಉದಾಹರಣೆಗಳನ್ನು ಪ್ರತಿಯೊಂದು ದೇಶದ ಇತಿಹಾಸದಲ್ಲಿ ನೀವು ಕಂಡುಕೊಳ್ಳುತ್ತೀರಿ. ಪ್ರತಿಯೊಬ್ಬನೂ ಚೈತನ್ಯವನ್ನು ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಹೊಸ ಭರವಸೆ ಹಾಗೂ ಹುರುಪುಗಳೊಂದಿಗೆ

ಮಾತೆಯ ಪೂಜೆಗಾಗಿ ತಯಾರಾಗಿರಿ. ದೈವೀ ಸಾಮರ್ಥ್ಯ ಈ ದೇಶವನ್ನು ಹೊಸ ಸಾಮರ್ಥ್ಯದಿಂದ ತುಂಬಿದೆ.

ಈ ಸಾಮರ್ಥ್ಯ ಒಂದು ದಿನ ನಮ್ಮ ದೇಶವನ್ನು ಉನ್ನತ ಸ್ಥಿತಿಗೆ ಏರಿಸುವುದು.

(ಶ್ರೀ ಅರವಿಂದರು ಕೋಲ್ಕತ್ತಾ(Calcutta)ದ ತಮ್ಮ ನಿವಾಸದಲ್ಲಿ 15–8–1909 ರಂದು ಮಾಡಿದ ಭಾಷಣ. ಅಂದು ಅವರದು 37ನೆಯ ಜನ್ಮದಿನವಾಗಿತ್ತು.)

**CWSA, 8/179** **– ಶ್ರೀ ಅರವಿಂದರು**

*

**ಅತಿಮಾನಸ ದೈವೀ ಸತ್ಯದ ಅವರೋಹಣಕ್ಕೆ ಒಂದು ಸಂಕೇತ**

ಮೊದಲು ನನ್ನ ಭೌತಿಕ ಜನ್ಮದಿನದ ಘಟನೆಯನ್ನು ಪ್ರಾಣಿಕ ರೀತಿಯಲ್ಲಿ ವಿಧಿವತ್ತಾಗಿ ಆಚರಿಸಲಾಗುತ್ತಿತ್ತು. ಅದರಲ್ಲಿ ಆಂತರಿಕ ದೈವೀ ಸತ್ಯದ ಬೀಜವಿರುತ್ತಿತ್ತು, ಆದರೆ ಪ್ರಕಟಣೆ ಪ್ರಾಣಿಕವಾಗಿರುತ್ತಿತ್ತು. ಈಗ ಆ ದಿನವನ್ನು ಅದು ಸಂಕೇತಿಸುವ ದೈವೀ ಸತ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಆಚರಿಸಬೇಕೆಂದು ನಾನು ಬಯಸುತ್ತೇನೆ.

ನಮ್ಮೆಲ್ಲರ ಜೀವನದಲ್ಲಿ ಅವರೋಹಣ ಮಾಡಿ ಬರಬೇಕಾದ ಅತಿಮಾನಸ ದೈವೀ ಸತ್ಯದ ಬಗ್ಗೆ ನೀವು ತಿಳಿದುಕೊಂಡಿದ್ದೀರಿ. ಈ ದಿನ ಆ ದೈವೀ ಸತ್ಯದ ಸಂಕೇತ ಹೊಂದಿದೆ. ಆದರೆ ಅದು ಕೆಳಗಿಳಿದು ಬರುವುದಕ್ಕೆ ಅನೇಕ ಅಡೆತಡೆಗಳಿವೆ. ಮನಸ್ಸು ಎಂಬುದಿದೆ, ಮೇಲ್ಗಡೆಯಿಂದ ಬರುವ ದೈವೀ ಸತ್ಯವನ್ನು ಮಾನಸಿಕ ವಿಚಾರಗಳು ಹಿಡಿದುಕೊಳ್ಳುತ್ತವೆ ಮತ್ತು ಅದನ್ನು ತಮ್ಮದೇ ಗುರಿಗಳಿಗಾಗಿ ಉಪಯೋಗಿಸಲು ಪ್ರಯತ್ನಿಸುತ್ತವೆ. ಉದಾಹರಣೆಗೆ ಪ್ರಾಣಿಕ ಇಲ್ಲವೆ ಪ್ರಾಣ–ಶಕ್ತಿ ಇದೆ, ಅದು ಉಚ್ಚತರ ದೈವೀ ಶಕ್ತಿಯನ್ನು ಹಿಡಿದುಕೊಳ್ಳುತ್ತದೆ ಮತ್ತು ತನ್ನನ್ನು ಅಶುದ್ಧ ಕ್ರಿಯೆಗಳಲ್ಲಿ ಚೆಲ್ಲಿಕೊಡಲು ಬಯಸುತ್ತದೆ. ಕೆಳಗಿಳಿದು ಬರುತ್ತಿರುವ ದೈವೀ ಸತ್ಯ ಮಾನಸಿಕವಾದದ್ದಲ್ಲ, ಆದರೆ ಅತಿಮಾನಸದ್ದಾಗಿದೆ. ಅದು ಸರಿಯಾಗಿ ಕಾರ್ಯಕೈಕೊಳ್ಳಲು ಶಕ್ತವಾಗಬೇಕಾದರೆ ಎಲ್ಲ ನಿಮ್ನತರ ಉಪಕರಣಗಳು ಅತಿಮಾನಸೀಕರಣಗೊಳ್ಳಬೇಕು. ನಿಮ್ನತರ ಶಕ್ತಿಗಳು ಉಚ್ಚತರ ದೈವೀ ಸತ್ಯವನ್ನು ತಮ್ಮ ಸರ್ವಸಾಧಾರಣ ಚಲನೆಗಳ ಸಮಾಧಾನಕ್ಕಾಗಿ ಉಪಯೋಗಿಸಲು ಬಯಸುತ್ತವೆ. ಮನುಷ್ಯ ತನ್ನ ಜೀವನದಲ್ಲಿ ದೊರಕುವ ಇಂದ್ರಿಯ ಭೋಗದ ಸಂತೋಷ ಪಡೆಯುತ್ತಿದ್ದಾಗ ಇಲ್ಲವೆ ತನ್ನ ಸ್ವಾರ್ಥಪರ

ಗುರಿಗಳಿಗಾಗಿ ತನ್ನ ಜೀವನವನ್ನು ವ್ಯಯಿಸುತ್ತಿದ್ದಾಗ, ನಿಜವಾಗಿ ಈ ವಿಶ್ವಂಭರ ಶಕ್ತಿಗಳು ಅವನ ಮೂಲಕ ಹಾಗೂ ಅವನಲ್ಲಿ ಆ ಸಂತೋಷವನ್ನು ಪಡೆದು–ಕೊಳ್ಳುತ್ತಿರುತ್ತವೆ.

ಈ ಉಚ್ಚತರ ದೈವೀ ಸತ್ಯ, ಅದರ ಪರಿಶುದ್ಧತೆಯಲ್ಲಿ, ಕಾರ್ಯಕೈಕೊಳ್ಳಲು ಶಕ್ತವಾಗಬೇಕಾದರೆ ಮನುಷ್ಯ ಮೇಲ್ಗಡೆಗಿರುವ ದೈವೀ ಸಾಮರ್ಥ್ಯಕ್ಕೆ ತನ್ನನ್ನು ತೆರೆದಿರಿಸಿಕೊಳ್ಳಬೇಕು, ಅರ್ಪಿಸಿಕೊಳ್ಳಬೇಕು ಮತ್ತು ದೈವೀ ಸತ್ಯದ ಮಾರ್ಗದಲ್ಲಿ ನಿಂತು ಅಡ್ಡಬರುವುದೆಲ್ಲವನ್ನು ತೆಗೆದು ಹಾಕಬೇಕು. ಶರಣಾಗತಿ ಮಾಡಿ–ಕೊಳ್ಳುವುದಕ್ಕೆ ಬೇಕಾದ ಕ್ಷಮತೆ ಈ ಮೂರು ವಿಷಯಗಳನ್ನು ಒಳಗೊಂಡಿರುತ್ತದೆ.

ಈ ಎಲ್ಲ ವರ್ಷಗಳ ಕಾಲ ಈ ಅಡೆತಡೆಗಳನ್ನು ಎದುರಿಸಿ ಅವುಗಳನ್ನು ತೆಗೆದು ಹಾಕಲು, ಮಾರ್ಗವನ್ನು ತಯಾರು ಮಾಡಿ ಅದನ್ನು ನಿರ್ಮಲ–ವಾಗಿರಿಸಲು ನಾನು ಕಾರ್ಯ ಮಾಡುತ್ತ ಬಂದಿದ್ದೇನೆ, ಅದರಿಂದಾಗಿ ಆ ಕಾರ್ಯ ನಿಮಗೆ ಬಹಳ ಕಠಿಣವಾಗುವುದಿಲ್ಲ. ಆ ಕಾರ್ಯದಲ್ಲಿ ನಿಮಗೆ ನನ್ನ ಸಹಾಯ ಸಲ್ಲಿಸುವುದನ್ನು ಕುರಿತು ಹೇಳುವುದಾದರೆ ಸಹಾಯವನ್ನು ಸ್ವೀಕರಿಸುವ ನಿಮ್ಮ ಕ್ಷಮತೆಯ ಮೇಲೆ ಎಲ್ಲವೂ ಅವಲಂಬಿಸಿರುತ್ತದೆ. ನೀವು ತೆಗೆದುಕೊಳ್ಳ–ಬಹುದಾದಷ್ಟು ಸಹಾಯವನ್ನು ನಾನು ಕೊಡಬಲ್ಲೆ. ನಿಜವಾದ ಆಧ್ಯಾತ್ಮಿಕ ಶರಣಾಗತಿ ಬೇರೆ ವಿಷಯ, ಆದರೆ ನಿಮ್ಮಲ್ಲಿ ಯಾರಾದರೂ ಅದನ್ನು ಸ್ವಲ್ಪಮಟ್ಟಿಗಾದರೂ ಅನುಭವಕ್ಕೆ ತಂದುಕೊಂಡಿದ್ದರೆ, ಅದನ್ನು ಕುರಿತು ಮಸುಕಾದ ಚಿಂತನವನ್ನು ಕೈಕೊಂಡಿದ್ದರೆ, ಆಗ ದಿನಾಂಕ 15 ರ ಉದ್ದೇಶಕ್ಕೆ ಸೇವೆ ಸಲ್ಲಿಸಲಾಗಿರುತ್ತದೆ.

**ಶ್ರೀ ಅರವಿಂದರೊಡನೆ ಮಾತುಕತೆಗಳು, ಎ.ಬಿ.ಪುರಾಣಿ ದಾಖಲಿಸಿದ್ದು.**
**ಪು.297, 15–8–1923**

*

**ಪೃಥ್ವಿಯ ಆಳದಲ್ಲಿ ಅಗೆಯುವುದು**

ನಾನು ಸದ್ಯ ಅತಿಮನಸ್ಸನ್ನು ಭೌತಿಕ ಪ್ರಜ್ಞೆಯಲ್ಲಿ, ಭೌತದ್ರವ್ಯಕ್ಕಿಂತಲೂ ಕೆಳಗಿನ ಸ್ತರದಲ್ಲಿ ಕೆಳಗಿಳಿಸಿ ತರುವುದರಲ್ಲಿ ಕಾರ್ಯನಿರತನಾಗಿದ್ದೇನೆ. ಭೌತಿಕವಾದದ್ದು ಸ್ವಭಾವತಃ ಜಡವಾಗಿದ್ದು ಪ್ರಜ್ಞೆಯುಳ್ಳದ್ದಾಗಲು ಬಯಸುವುದಿಲ್ಲ, ಬದಲಾಗುವುದಕ್ಕೆ ಅದಕ್ಕೆ ಇಷ್ಟವಿಲ್ಲದೆ ಇರುವುದರಿಂದ ಅದು ಹೆಚ್ಚಿನ ಪ್ರತಿರೋಧವನ್ನು ಒಡ್ಡುತ್ತದೆ.

ವೇದ “ಪೃಥ್ವಿಯನ್ನು ಅಗೆದ ಹಾಗೆ” ಎಂದು ಹೇಳುತ್ತಿರುವಂತೆ ಮನುಷ್ಯನಿಗೆ ಭಾವನೆ ಬರುತ್ತದೆ. ಅದು ಅಕ್ಷರಶಃ ಮೇಲ್ಗಡೆಗಿರುವ ಅತಿಮನಸ್ಸಿನಿಂದ ಕೆಳಗಿರುವ ಅತಿಮನಸ್ಸಿನವರೆಗೆ ಅಗೆಯುವುದಾಗಿದೆ. ಸತ್ತೆ ಪ್ರಜ್ಞೆಯುಳ್ಳದ್ದಾಗಿದೆ ಮತ್ತು ಮೇಲ್ಗಡೆಯಿಂದ ಕೆಳಗಡೆಗೆ ಸತತ ಚಲನೆಯಿರುತ್ತದೆ. ವೇದ ಅದನ್ನು “ಎರಡು ತುದಿಗಳು” ಎಂದು ಕರೆಯುತ್ತದೆ – ದೈತ್ಯಪ್ರಾಣಿ(dragon)ಯ ಶಿರ ಹಾಗೂ ಬಾಲ, ಅವು ಪ್ರಜ್ಞೆಯನ್ನು ಸಂಪೂರ್ಣಗೊಳಿಸುತ್ತವೆ ಮತ್ತು ಸುತ್ತುವರಿಯುತ್ತವೆ. ಭೌತದ್ರವ್ಯ ಅತಿಮಾನಸೀಕರಣಗೊಳ್ಳುವವರೆಗೆ ಮಾನಸಿಕ ಹಾಗೂ ಪ್ರಾಣಿಕವಾದವುಗಳು ಕೂಡ ಪೂರ್ತಿಯಾಗಿ ಅತಿಮಾನಸೀಕರಣಗೊಳ್ಳುವುದಿಲ್ಲ ಎಂಬುದನ್ನು ನಾನು ಕಂಡುಕೊಳ್ಳುತ್ತಿದ್ದೇನೆ. ಹಾಗಾಗಿ ಭೌತಿಕವಾದದ್ದನ್ನು ಒಪ್ಪಿಕೊಳ್ಳಬೇಕು ಹಾಗೂ ಪರಿವರ್ತನೆಗೆ ಒಳಪಡಿಸಬೇಕು. ಪ್ರತಿಯೊಂದು ಸ್ತರದ ಮೇಲಾಗುವ ಜನ್ಮದ ನಂತರ ಇನ್ನೊಂದು ಜನ್ಮ ಕುರಿತಾದ ಈ ವಿಚಾರ ಆ ವಿಧಾನ ಸಂಕೀರ್ಣವಾಗುವಂತೆ ಮಾಡುತ್ತದೆ. ನಾನು ಅತಿಮನಸ್ಸಿನ ಅತ್ಯುಚ್ಚ ಸ್ತರ(layer)ವನ್ನು ಭೌತಿಕ ಪ್ರಜ್ಞೆಯಲ್ಲಿ ಕೆಳಗಿಳಿಸಿ ತರಲು ಪ್ರಯತ್ನಿಸುತ್ತಿದ್ದೇನೆ.

ಅಂತರ್ಬೋಧೆಯ ಮನಸ್ಸಿನ ಚಟುವಟಿಕೆಗಳ ಮೂರು ಬಗೆಗಳಿಗೆ ಅನುಗುಣವಾಗಿ ಅತಿಮನಸ್ಸಿನ ಮೂರು ಸ್ತರಗಳಿವೆ. ಮೊದಲನೆಯದನ್ನು ವಿವರಣಾತ್ಮಕ ಅತಿಮನಸ್ಸು ಎಂದು ಕರೆದಿದ್ದೇನೆ, ಅದನ್ನು ವಿವರಣಾತ್ಮಕ ಎಂದು ಕರೆಯುವುದೇಕೆಂದರೆ ಮಾನಸಿಕ ಸ್ತರದ ಮೇಲೆ ಸಾಧ್ಯತೆ ಎಂದಿರುವುದು ಅತಿಮಾನಸ ಸ್ತರದ ಮೇಲೆ ಸಾಧ್ಯಗೊಳಿಸುವ ಸಾಮರ್ಥ್ಯವಾಗುತ್ತದೆ. ವಿವರಣಾತ್ಮಕ ಅತಿಮನಸ್ಸು ಸಾಧ್ಯಗೊಳಿಸುವ ಎಲ್ಲ ಸಾಮರ್ಥ್ಯಗಳನ್ನು ನಿಮ್ಮ ಮುಂದಿರಿಸುತ್ತದೆ. ಅದು ಭೌತಿಕ ಸ್ತರದ ಮೇಲೆ ನಿಜವಾಗಿ ಸಂಭವಿಸುವ ಘಟನೆಗಳ ಮೂಲಕಾರಣವನ್ನು ತೋರಿಸುತ್ತದೆ. ಅಂತರ್ಬೋಧೆ ಅತಿಮಾನಸ ಮೌಲ್ಯವನ್ನು ಪಡೆದಾಗ ಅದು ವಿವರಣಾತ್ಮಕ ಅತಿಮನಸ್ಸಾಗುತ್ತದೆ.

ಪ್ರಾತಿನಿಧ್ಯದ ಅತಿಮನಸ್ಸೆಂದು ನಾನು ಕರೆದಿದ್ದು ನಂತರ ಬರುತ್ತದೆ. ಅದು ಸಾಧ್ಯತೆಯ ಸಾಮರ್ಥ್ಯಗಳ ವಾಸ್ತವ ಚಲನೆಯನ್ನು ಪ್ರತಿನಿಧಿಸುತ್ತದೆ ಮತ್ತು ಯಾವುದು ಕಾರ್ಯಾಚರಣೆ ಮಾಡುತ್ತದೆಂಬುದನ್ನು ತೋರಿಸುತ್ತದೆ. ಸ್ಫೂರ್ತಿ ಅದರ ಅತಿಮಾನಸದ ಮೌಲ್ಯದಲ್ಲಿ ಬದಲಾದಾಗ ಅದು ಈ ಪ್ರಾತಿನಿಧ್ಯದ ಅತಿಮನಸ್ಸಾಗುತ್ತದೆ. ಇದು ಅತ್ಯುಚ್ಚ ಅತಿಮನಸ್ಸಲ್ಲ. ಕಾರ್ಯನಿರತವಾದ ಸಾಧ್ಯತೆಯ ಸಾಮರ್ಥ್ಯಗಳ ಬಗ್ಗೆ ನಿಮಗೆ ತಿಳಿದಿದೆ ಮತ್ತು ಬಹಳಷ್ಟು ಸಂದರ್ಭಗಳಲ್ಲಿ ಏನು ಸಂಭವಿಸಬಹುದು ಎಂಬುದನ್ನು ಹೇಳಬಹುದು ಇಲ್ಲವೆ

ಯಾವುದೊಂದು ವಿಷಯ ಹೇಗೆ ಸಂಭವಿಸಿತು ಇಲ್ಲವೆ ಸಂಭವಿಸಬಲ್ಲದು ಎಂಬುದನ್ನೂ ಹೇಳಬಹುದು. ಆದರೆ ಅಲ್ಲಿ ನಿಶ್ಚಿತತೆ ಇಲ್ಲದೆ ಇರಬಹುದು.

ಕೊನೆಯಲ್ಲಿ ದಿವ್ಯ ಜ್ಞಾನಕ್ಕೆ ಅನುರೂಪವಾದ ಆಜ್ಞಾರ್ಥಕ ಅತಿಮನಸ್ಸಿದೆ, ಅದರ ವಿರುದ್ಧ ಯಾವುದೂ ನಿಲ್ಲಲಾರದ್ದರಿಂದ ಅದು ಯಾವಾಗಲೂ ಸತ್ಯವಾಗಿರುತ್ತದೆ. ಅದು ತನ್ನದೇ ಅಂತರ್ನಿಹಿತ ಸಾಮರ್ಥ್ಯದಿಂದ ನೆರವೇರಿಕೆ ಕಂಡುಕೊಳ್ಳುತ್ತದೆ.

ಇವೆಲ್ಲವುಗಳಲ್ಲಿ ಭಿನ್ನತೆ ಕಂಡುಕೊಳ್ಳಬೇಕಾಗಿದೆ ಮತ್ತು ಆಜ್ಞಾರ್ಥಕ ಅತಿಮನಸ್ಸನ್ನು ಭೌತಿಕದಲ್ಲಿ ಕೆಳಗಿಳಿಸಿ ತರಬೇಕಾಗಿದೆ. ಹೀಗೆ ಮೇಲೆ ಕೆಳಗೆ ಸಾಗಿಹೋಗುವ ಸತತ ಚಲನೆಯಿದೆ. ಇಡೀ ಸತ್ತೆಯನ್ನು ಪ್ರಜ್ಞಾಪೂರ್ಣ–ಗೊಳಿಸಲಾಗಿದೆ, ಆದರೆ ಯಾವುದೇ ಶಕ್ತಿ ಭೌತಿಕದ ಮೇಲೆ ಆಕ್ರಮಣ ಮಾಡದಂತಾಗುವುದು ಅವಶ್ಯವಾಗಿದೆ. ನಂತರ ಎರಡನೆಯ ವಿಷಯವೆಂದರೆ ಆಜ್ಞಾರ್ಥಕ ಅತಿಮನಸ್ಸನ್ನು ಆಂತರಿಕ ವಿಷಯಗಳ ಮೇಲೆ ಪ್ರಯೋಗಿಸುವುದಾಗಿದೆ. ಹಾಗೆಯೇ ಬಾಹ್ಯ ವಿಷಯಗಳ ಮೇಲೆಯೂ ಕೂಡ ಪ್ರಯೋಗಿಸುವುದಾಗಿದೆ. ಸದ್ಯ ಅತಿಮಾನಸ ಸಾಮರ್ಥ್ಯದ ಮೂಲಕ ದೇಹದ ಮೇಲೆ ಆಕ್ರಮಣ ಮಾಡಬಹುದಾದ ಯಾವುದೇ ಶಕ್ತಿಯನ್ನು ಹೊರಗೆ ಚೆಲ್ಲಿಕೊಡಬಹುದು. ಮತ್ತು ಆ ವಿಧಾನ ಪೂರ್ತಿಗೊಂಡಾಗ, ಯಾವುದೇ ಪ್ರಜ್ಞೆಯುಳ್ಳ ಶಕ್ತಿ ದೇಹದ ಮೇಲೆ ಆಕ್ರಮಣ ಮಾಡುವುದು ಸಾಧ್ಯವಾಗುವುದಿಲ್ಲ. ಇದೆಲ್ಲದರಲ್ಲಿ ನಾನು ಒಂದು ಬಗೆಯ ಕಾರ್ಯಕ್ರಮವನ್ನು ಅನುಸರಿಸುತ್ತಿದ್ದೇನೆ, ನಾನು ಪಾಂಡಿಚೇರಿಗೆ ಬಂದಾಗ ನನಗಾಗಿ ಅದನ್ನು ವಿಧಿಸಲಾಗಿತ್ತು.

**ಅದೇ ಗ್ರಂಥ, ಪು. 298–300, 15–8–1923**

*

**ಯೋಗದ ಗುರಿ ಹಾಗೂ ಯೋಗಕ್ಕಾಗಿ ಇರುವ ಷರತ್ತುಗಳು**

**ಶ್ರೀ ಅರವಿಂದರು:** ಈ ದಿನ ನನ್ನಿಂದ ಭಾಷಣವನ್ನು ನಿರೀಕ್ಷಿಸಲಾಗಿದೆ. ನಾನು ನಿಶ್ಚಲ ನೀರವತೆಯಲ್ಲಿರುವ ದೈವೀ ಪ್ರಜ್ಞೆಯ ಮೂಲಕ ತಿಳಿಸಿಕೊಡುವುದಕ್ಕೆ ಆದ್ಯತೆ ನೀಡುತ್ತೇನೆ, ಏಕೆಂದರೆ ಭಾಷಣ ಮನಸ್ಸಿಗೆ ಸಂಬೋಧಿಸುತ್ತದೆ, ಅದು ಹಾಗಿರುವಾಗ ನಿಶ್ಚಲ ನೀರವತೆಯಲ್ಲಿರುವ ದೈವೀ ಪ್ರಜ್ಞೆಯ ಮೂಲಕ ಆಳಾತಿ ಆಳದಲ್ಲಿರುವ ಏನೋ ಒಂದನ್ನು ತಲುಪಬಹುದು. ನಾವು ಒಟ್ಟಿಗೆ ಯೋಗ–ವೊಂದನ್ನು ಆಚರಿಸುತ್ತಿದ್ದೇವೆ, ಅದು ಇತರ ವಿಧಾನಗಳಿಗಿಂತ ಭಿನ್ನವಾಗಿದೆ, ಆ

ವಿಧಾನಗಳನ್ನೂ ಯೋಗಗಳೆಂದು ಕರೆಯಲಾಗುತ್ತದೆ. ಹಳೆಯ ವಿಧಾನದ ಪ್ರಕಾರ ನಾವು ಬುದ್ಧಿಯನ್ನು, ಭಾವನೆಯನ್ನು ಇಲ್ಲವೆ ಸಂಕಲ್ಪವನ್ನು ಅತ್ಯುತ್ತಮ–ವಾದವುಗಳೆಂದು ಆಯ್ಕೆ ಮಾಡಿಕೊಳ್ಳಬೇಕು ಇಲ್ಲವೆ ಪುರುಷ ಹಾಗೂ ಪ್ರಕೃತಿ ಎಂದರೆ ಪ್ರಜ್ಞಾಪೂರ್ಣ ದಿವ್ಯಾತ್ಮ ಮತ್ತು ಪ್ರಕೃತಿ ಇವರನ್ನು ಭಿನ್ನವಾಗಿರುವಂತೆ ನೋಡಬೇಕು. ಅದರ ಮೂಲಕ ನಾವು ದೈವೀ ಜ್ಞಾನದ ಅನಂತತೆಯತ್ತ, ಎಲ್ಲವನ್ನೂ ಪ್ರೇಮದಿಂದ ನೋಡುವವನತ್ತ, ಸೌಂದರ್ಯದಿಂದ ಕೂಡಿದವನತ್ತ ಇಲ್ಲವೆ ಅನಂತ ಅವೈಯಕ್ತಿಕ ದೈವೀ ಸಂಕಲ್ಪದತ್ತ ಇಲ್ಲವೆ ನಮ್ಮ ಮನಸ್ಸು, ಭಾವನಾತ್ಮಕ ಸತ್ತೆ, ಇಲ್ಲವೆ ಸಂಕಲ್ಪ ಇಲ್ಲವೆ ವೈಯಕ್ತಿಕ ಪುರುಷ ಇವೆಲ್ಲವುಗಳಾಚೆಗೆ ಇರುವ ನಿಶ್ಚಲ ನೀರವತೆಯಲ್ಲಿರುವ ಬ್ರಹ್ಮನ್‌ನತ್ತ ತಲುಪುತ್ತೇವೆ.

ನಮ್ಮ ಯೋಗ ಅವೈಯಕ್ತಿಕವಾದ ಜ್ಞಾನ, ಸಂಕಲ್ಪ ಇಲ್ಲವೆ ಆನಂದ ಇವುಗಳನ್ನು ಅನಂತವಾಗಿ ಹೊಂದಿದ್ದನ್ನು ಗುರಿಯಾಗಿರಿಸಿಕೊಂಡಿರುವುದಿಲ್ಲ, ಆದರೆ ಮಾನವನ ಸೀಮಿತ ಅನಂತ ಜ್ಞಾನದಾಚೆಗಿರುವ ಪರಮೋಚ್ಚ ದೈವೀ ಸತ್ತೆಯನ್ನು, ಮತ್ತು ನಮ್ಮ ವೈಯಕ್ತಿಕ ಸಂಕಲ್ಪದ ಮೂಲವಾದ ದೈವೀ ಸಾಮರ್ಥ್ಯವನ್ನು ಮತ್ತು ಮೇಲ್ಮೈ ಚಲನೆಗಳಿಂದ ಹಿಡಿದುಕೊಳ್ಳಲಾಗದ ಆನಂದವನ್ನು ಸಿದ್ಧಿಸಿಕೊಳ್ಳುವುದನ್ನು ಗುರಿಯಾಗಿರಿಸಿಕೊಂಡಿರುತ್ತದೆ.

ನಾವು ಸಿದ್ಧಿಸಿಕೊಳ್ಳಬಯಸುವ ಪರಮೋಚ್ಚ ಸತ್ತೆ ಅವೈಯಕ್ತಿಕ ಅನಂತ–ವಾದದ್ದಲ್ಲ, ಆದರೆ ಅದು ದೈವೀ ವ್ಯಕ್ತಿವಿಶಿಷ್ಟತೆಯಾಗಿರುತ್ತದೆ, ಅದನ್ನು ಸಿದ್ಧಿಸಿಕೊಳ್ಳುವುಕ್ಕಾಗಿ ನಾವು ನಮ್ಮದೇ ನಿಜವಾದ ದೈವೀ ಸತ್ತೆಯ ಬಗ್ಗೆ ಅರಿವುಳ್ಳವರಾಗಬೇಕು. ನೀವು ನಿಮ್ಮ ಆಂತರಿಕ ಸತ್ತೆಯನ್ನು ಅರಿತುಕೊಂಡಿರಬೇಕು. ಈ ದೈವೀ ವ್ಯಕ್ತಿವಿಶಿಷ್ಟತೆ ಆಂತರಿಕ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಸತ್ತೆಯಾಗಿರುವುದಿಲ್ಲ ಮತ್ತು ಅದರ ಪ್ರಜ್ಞೆಯನ್ನು ಹಾಗೆ ಬಹಳಷ್ಟು ಸಲ ತಪ್ಪಾದ ರೀತಿಯಲ್ಲಿ ವರ್ಣಿಸಲಾಗಿದೆ, ಆದರೆ ಅದು ನಿಮ್ಮ ನಿಜವಾದ ದೈವೀ ಸತ್ತೆ, ಅದು ಅತ್ಯುಚ್ಚವಾದದ್ದರೊಂದಿಗೆ ನೇರವಾಗಿ ಸಂಸರ್ಗದಲ್ಲಿರುತ್ತದೆ. ಮನುಷ್ಯ ಪ್ರಕೃತಿಯಲ್ಲಿ ಕ್ರಮೇಣ ಅಭಿವೃದ್ಧಿ ಹೊಂದುವುದರ ಮೂಲಕ ಬೆಳೆಯುತ್ತಾನೆ ಮತ್ತು ಪ್ರತಿಯೊಬ್ಬನೂ ಅತಿಮನಸ್ಸಿನಲ್ಲಿ ತನ್ನ ದೈವೀ ವ್ಯಕ್ತಿವಿಶಿಷ್ಟತೆಯನ್ನು ಸಿದ್ಧಿಸಿ–ಕೊಳ್ಳಬೇಕು. ಪ್ರತಿಯೊಬ್ಬನೂ ಸಾರದಲ್ಲಿ ಭಗವಂತನೊಡನೆ ಏಕವಾಗಿರುತ್ತಾನೆ, ಆದರೆ ಸ್ವಭಾವದಲ್ಲಿ ಪ್ರತಿಯೊಬ್ಬನೂ ಪರಮೋಚ್ಚ ದೈವೀ ಸತ್ತೆಯ ಭಾಗಶಃ ಪ್ರಕಟಣೆಯಾಗಿರುತ್ತಾನೆ.

ನಮ್ಮ ಯೋಗದ ಗುರಿ ಹೀಗಿರುವುದರಿಂದ ನಾವು ಜೀವನದತ್ತ ಹೊರಳಿ ಅದನ್ನು ಪರಿವರ್ತನೆಗೆ ಒಳಪಡಿಸಲು ಬಯಸುತ್ತೇವೆ. ಹಳೆಯ ಯೋಗಗಳು ಜೀವನವನ್ನು ಪರಿವರ್ತನೆಗೊಳಪಡಿಸುವುದರಲ್ಲಿ ವಿಫಲವಾದವು, ಏಕೆಂದರೆ ಅವು ಮನಸ್ಸಿನಾಚೆಗೆ ಸಾಗಿ ಹೋಗಲಿಲ್ಲ, ಅವು ಮನಸ್ಸಿನ ಒಂದು ಅನುಭವವನ್ನು ಹಿಡಿದುಕೊಂಡು ಅದನ್ನು ಜೀವನಕ್ಕೆ ಅನ್ವಯಿಸಲು ಹೋದಾಗ ಅದನ್ನು ಒಂದು ಸೂತ್ರವನ್ನಾಗಿ ಮಾಡಿದವು. ಉದಾಹರಣೆಗೆ ದೈವೀ ಅನಂತನಾದವನನ್ನು ಕುರಿತಾದ ಅನುಭವ ಇಲ್ಲವೆ ವಿಶ್ವಂಭರ ದೈವೀ ಪ್ರೇಮ ಕುರಿತಾದ ಅನುಭವ.

ಹಾಗಾಗಿ ನಮ್ಮ ಸತ್ತೆ, ಎಲ್ಲ ಸ್ತರಗಳ ಬಗ್ಗೆ ಮತ್ತು ಉಚ್ಚತರ ಪ್ರಕಾಶ, ಸಾಮರ್ಥ್ಯ ಹಾಗೂ ಆನಂದ ಇವುಗಳನ್ನು ಕೆಳಗಿಳಿಸಿ ತಂದು ಜೀವನದ ಅತ್ಯಂತ ಬಾಹ್ಯ ವಿವರಗಳ ಮೇಲೆ ಆಳಿಕೆ ನಡೆಸುವುದನ್ನು ಕುರಿತು ನಾವು ಪ್ರಜ್ಞೆಯುಳ್ಳ–ವರಾಗಬೇಕು. ಪ್ರಕೃತಿಯಲ್ಲಿ ನಡೆದು ಹೋಗುತ್ತಿರುವುದರ ಬಗ್ಗೆ, ಅತ್ಯಂತ ಚಿಕ್ಕ ಚಲನೆ ಕುರಿತು, ಹಾಗೆಯೇ ಅತ್ಯಂತ ಬಾಹ್ಯ ಕ್ರಿಯೆ ನಮ್ಮ ಗಮನಕ್ಕೆ ಬರದೆ ಉಳಿದುಕೊಳ್ಳದಂತೆ ಅವಲೋಕನ ಮಾಡಬೇಕು. ಈ ವಿಧಾನ ತುಲನಾತ್ಮಕವಾಗಿ ಮಾನಸಿಕ ಹಾಗೂ ಪ್ರಾಣಿಕ ಸ್ತರಗಳಲ್ಲಿ ಸುಲಭವಾಗಿರುತ್ತದೆ. ಆದರೆ ಭೌತಿಕಾತ್ಮಿಕ–ಪ್ರಾಣಿಕ ಹಾಗೂ ಭೌತಿಕ ಸ್ತರಗಳಲ್ಲಿ ಅಜ್ಞಾನದ ಸಾಮರ್ಥ್ಯಗಳು ತಮ್ಮ ತೊನೆದಾಟವನ್ನು ಹಿಡಿದುಕೊಂಡಿರುತ್ತವೆ, ಪೂರ್ತಿ ಶಕ್ತಿಯಿಂದ ಆಳಿಕೆ ನಡೆಸುತ್ತವೆ, ಶಾಶ್ವತ ನಿಯಮಗಳೆಂದು ಅವು ನಂಬಿರುವುದನ್ನು ಪಟ್ಟುಹಿಡಿದು ಉಳಿಸಿಕೊಳ್ಳುತ್ತವೆ, ಉಚ್ಚತರ ದೈವೀ ಪ್ರಕಾಶ ಸಾಗಿ ಬರುವುದನ್ನು ತಡೆಗಟ್ಟುತ್ತವೆ, ತಮ್ಮ ನಿಶಾನೆಯನ್ನು ಮೇಲಕ್ಕೆತ್ತಿ ಹಿಡಿದುಕೊಂಡಿರುತ್ತವೆ. ಅಲ್ಲಿಯೇ ಅಂಧಕಾರದ ಸಾಮರ್ಥ್ಯಗಳು ಸತ್ತೆಯ ಮೇಲೆ ಮತ್ತೆ ಮತ್ತೆ ಮುಸುಕು ಹಾಕುತ್ತವೆ, ಭೌತಿಕಾತ್ಮಿಕ–ಪ್ರಾಣಿಕ (physico-vital) ವನ್ನು ತೆರೆದಿರಿಸಿದಾಗಲೂ ಕೂಡ ಭೌತಿಕ ಸತ್ತೆಯ ನಿಮ್ನ ಸ್ತರಗಳಿಂದ ಬರುತ್ತವೆ. ಭೌತಿಕಾತ್ಮಿಕ–ಪ್ರಾಣಿಕ ಮತ್ತು ಭೌತಿಕ ಇವು ಉಚ್ಚತರ ದೈವೀ ನಿಯಮವನ್ನು ಒಪ್ಪಿಕೊಳ್ಳುವುದಿಲ್ಲ, ಪಟ್ಟುಹಿಡಿಯುತ್ತವೆ. ಅವು ತಮ್ಮ ಪಟ್ಟುಹಿಡಿಯುವಿಕೆಯನ್ನು ಬೌದ್ಧಿಕ ಮತ್ತು ಇತರ ಸಮರ್ಥನೆಗಳ ಮೂಲಕ ನಡೆಸುವ ಲೀಲೆಯನ್ನು ಸಮರ್ಥಿಸಿಕೊಳ್ಳುತ್ತವೆ. ಮತ್ತು ಹೀಗೆ ವಿವಿಧ ವೇಷಗಳಡಿಯಲ್ಲಿ ಸಾಧಕನನ್ನು ಮೋಸಗೊಳಿಸಲು ಪ್ರಯತ್ನಿಸುತ್ತವೆ.

ಸರ್ವಸಾಧಾರಣವಾಗಿ ಪ್ರಾಣಿಕ ಸತ್ತೆ ಬಹಳ ಸಹನೆಯಿಲ್ಲದ್ದಾಗಿರುತ್ತದೆ ಮತ್ತು ಕಾರ್ಯಗಳನ್ನು ತೀವ್ರಗತಿಯಿಂದ ಭೌತಿಕಾತ್ಮಿಕ–ಪ್ರಾಣಿಕ ಮತ್ತು ಭೌತಿಕ

ಸ್ತರಗಳಲ್ಲಿ ಕೈಕೊಳ್ಳುವುದನ್ನು ಬಯಸುತ್ತದೆ, ಆದರೆ ಇದಕ್ಕೆ ಬಹಳ ಜೋರಾದ ಪ್ರತಿಕ್ರಿಯೆಗಳಿರುತ್ತವೆ, ಹಾಗಾಗಿ ಮಾನಸಿಕ ಹಾಗೂ ಪ್ರಾಣಿಕ ಸತ್ತೆಗಳು ಉಚ್ಚತರ ದೈವೀ ಪ್ರಕಾಶ ಹಾಗೂ ಸಾಮರ್ಥ್ಯಗಳನ್ನು ಹಿಡಿದುಕೊಳ್ಳುವುದರ ಬದಲಾಗಿ ಉಚ್ಚತರ ಸಾಮರ್ಥ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳುವಂತಾಗುತ್ತದೆ. ಭಾಗಶಃ ಪರಿವರ್ತನೆಯಿಂದ ನಾವು ಸಮಾಧಾನದಿಂದ ವಿಶ್ರಾಂತಿಯಲ್ಲಿ ಉಳಿದುಕೊಳ್ಳ–ಬಾರದು. ನಾವು ಉಚ್ಚತರ ದೈವೀ ಸಾಮರ್ಥ್ಯವನ್ನು ಕೆಳಗಿಳಿಸಿ ಭೌತಿಕ ಸ್ತರಕ್ಕೆ ತರಬೇಕು ಮತ್ತು ಜೀವನದ ಅತ್ಯಂತ ಬಾಹ್ಯ ವಿವರಗಳ ಮೇಲೆ ಅದರ ಮೂಲಕ ಆಳಿಕೆ ನಡೆಸಬೇಕು. ಮನಸ್ಸು ಅವುಗಳ ಮೇಲೆ ಆಳಿಕೆ ನಡೆಸಲಾರದು. ನಮ್ಮ ಸದ್ಯದ ಸ್ವಭಾವವನ್ನು ಪರಿವರ್ತನೆಗೆ ಒಳಪಡಿಸಲು ನಾವು ಉಚ್ಚತರ ದೈವೀ ಪ್ರಕಾಶ, ಸಾಮರ್ಥ್ಯ ಹಾಗೂ ಆನಂದ ಇವುಗಳಿಗೆ ಕರೆಕೊಡಬೇಕು. ಇದಕ್ಕೆ ಸತ್ತೆಯ ಪ್ರತಿಯೊಂದು ಭಾಗದಲ್ಲಿ ಸಾರಭೂತ ಪೂರ್ತಿ ನಿಷ್ಕಾಪಟ್ಯ ಅವಶ್ಯವಿರುತ್ತದೆ, ಅಂತಹ ನಿಷ್ಕಾಪಟ್ಯ ದೈವೀ ಸತ್ತೆಯಲ್ಲಿ ನಡೆದು ಹೋಗುತ್ತಿರುವುದನ್ನೆಲ್ಲ ಸ್ಪಷ್ಟವಾಗಿ ನೋಡಬಲ್ಲದು ಮತ್ತು ಅದಕ್ಕೆ ದೈವೀ ಸತ್ಯವಲ್ಲದೆ ಬೇರೇನೂ ಬೇಕಾಗಿರುವುದಿಲ್ಲ.

ಮೇಲಿನಿಂದ ಕೆಳಗಿಳಿದು ಬರುತ್ತಿರುವ ಹಾಗೂ ಜೀವನದ ಅತ್ಯಂತ ಚಿಕ್ಕ ವಿವರದ ಮೇಲೆ ಆಳಿಕೆ ನಡೆಸುವ ದೈವೀ ಪ್ರಕಾಶದ ಎರಡನೆಯ ಷರತ್ತೆಂದರೆ ಮನುಷ್ಯ ಅತಿಮನಸ್ಸಿನಲ್ಲಿರುವ ಈ ದೈವೀ ವ್ಯಕ್ತಿವಿಶಿಷ್ಟತೆಯ ಬಗ್ಗೆ ಅರಿವುಳ್ಳವನಾಗಬೇಕು.

ಅನುಭವಗಳೊಂದಿಗೆ ಸಮಾಧಾನಪಟ್ಟುಕೊಳ್ಳುವ ಪ್ರವೃತ್ತಿ ಕೆಲವೊಮ್ಮೆ ಸಾಧಕನಲ್ಲಿರುತ್ತದೆ. ಕೇವಲ ಅನುಭವಗಳೊಂದಿಗೆ ಮನುಷ್ಯ ತೃಪ್ತಿ ಪಡೆದು ವಿರಾಮದಲ್ಲಿ ಉಳಿದುಕೊಳ್ಳಬಾರದು.

ಇನ್ನೊಂದು ವಿಷಯವೆಂದರೆ, ಇಲ್ಲಿ ನಾವು ಅದೇ ದೈವೀ ಸತ್ಯವನ್ನು ಬೆಂಬತ್ತುವುದಕ್ಕಾಗಿ ಕೊಟ್ಟುಕೊಂಡವರಾಗಿ ಎಲ್ಲರೂ ಒಟ್ಟಿಗಿದ್ದೇವೆ, ಒಂದು ಬಗೆಯ ಒಗ್ಗಟ್ಟಿನತ್ತ ತಲುಪಿದ್ದೇವೆ. ಅದರಿಂದಾಗಿ ನಾವು ಪರಸ್ಪರರಿಗೆ ಸಹಾಯ ಮಾಡಬಹುದು ಇಲ್ಲವೆ ಪ್ರಗತಿ ಹಿಂದೆ ಬೀಳುವಂತೆ ಮಾಡಬಹುದು.

ನಮ್ಮನ್ನು ಉಚ್ಚತರ ದೈವೀ ಪ್ರಕಾಶಕ್ಕೆ ತೆರೆದಿರಿಸಿಕೊಳ್ಳುವುದು ಮತ್ತು ಪರಿಪೂರ್ಣ ಶರಣಾಗತಿ ಇವು ಸತ್ತೆಯ ಪರಿವರ್ತನೆಗಾಗಿ ಇರುವ ಷರತ್ತುಗಳು. ಇದು ಪರಿವರ್ತನೆ ಆಗುವಂತೆ ಮಾಡುತ್ತದೆ, ಹಾಗಾಗಲೆಂದು ಇಡಿಯಾದ ನಿಷ್ಕಾಪಟ್ಯವಿದ್ದರೆ, ದೈವೀ ಪ್ರಕಾಶಕ್ಕೆ ತೆರೆದಿಟ್ಟುಕೊಂಡಿದ್ದರೆ, ಶರಣಾಗತಿಯಿದ್ದರೆ

ಮತ್ತು ಎಲ್ಲ ಸ್ತರಗಳ ಮೇಲೆ ಕ್ರಮೇಣ ಬೆಳವಣಿಗೆ ಆಗುತ್ತಿದ್ದರೆ ನೀವು ಈ ಯೋಗದ ಆದರ್ಶ ಸಾಧಕರಾಗಬಲ್ಲಿರಿ.

**ಅದೇ ಗ್ರಂಥ, ಪು. 305–07. Aug 15, 1924 – ಶ್ರೀ ಅರವಿಂದರು**

*

**ಮೃತ್ಯು ಮತ್ತು ಅಮರತ್ವ ಇವುಗಳನ್ನು ಕುರಿತು ಪ್ರಶ್ನೆ**

**ಅನುಯಾಯಿ :** *ನಿಮ್ಮ ಸದ್ಯದ ಸಾಧನೆಯ ಹಂತದಲ್ಲಿ ಮೃತ್ಯು ಕುರಿತಾದ ಪ್ರಶ್ನೆಗೆ ನಿಮ್ಮ ನಿಲುವು ಏನಾಗಿದೆ?*

**ಶ್ರೀ ಅ :** ನನ್ನದೇ ಸಂದರ್ಭದಲ್ಲಿ?

**ಅನುಯಾಯಿ :** *ಹೌದು.*

**ಶ್ರೀ ಅ :** ಮೂರು ವಿಷಯಗಳು ಅದಾಗುವಂತೆ ಮಾಡಬಹುದು.

1. ಪ್ರಚಂಡ ವಿಸ್ಮಯ ಮತ್ತು ಅಪಘಾತ
2. ವಯಸ್ಸಿನಿಂದಾಗುವ ಕ್ರಿಯೆ
3. ನನ್ನದೇ ಆಯ್ಕೆ, ಈ ಕಾಲದಲ್ಲಿ ಅದನ್ನು ಕೈಕೊಳ್ಳಲು ಸಾಧ್ಯವಿಲ್ಲ ಎಂದು ಕಂಡುಕೊಂಡಾಗ ಇಲ್ಲವೆ ಈ ಕಾಲದಲ್ಲಿ ಅದನ್ನು ಕೈಕೊಳ್ಳಲು ಸಾಧ್ಯವಿಲ್ಲ ಎಂದು ಏನೋ ಒಂದು ಪ್ರಮಾಣ ಒದಗಿಸಿದಾಗ ನಾನು ಮೃತ್ಯುವನ್ನು ಆಯ್ದುಕೊಳ್ಳಬಹುದು.

**ಅನುಯಾಯಿ :** *ಪ್ರಾಣಿಕ ಸತ್ತೆ ಸ್ಥಿರತೆ, ಸಾಮರ್ಥ್ಯ ಹಾಗೂ ಆನಂದ ಇವೆಲ್ಲವನ್ನೂ ಹೊಂದಿರುವಾಗ ದೇಹವೂ ಕೂಡ ಅಮರತ್ವ ಪಡೆಯುವುದು ಎಂಬ ವಿಚಾರವಿದೆ.*

**ಶ್ರೀ ಅ :** ಅದಕ್ಕೆ ಕಾರಣ ಪ್ರಾಣಿಕ ತನ್ನದೇ ಮಿನುಗನ್ನು ಭೌತಿಕದ ಮೇಲೆ ಚೆಲ್ಲಿಕೊಡುವುದಾಗಿರುತ್ತದೆ. ಪ್ರಾಣಿಕ ಪುರುಷ ಅಮರನಾಗಿರುತ್ತಾನೆ ಮತ್ತು ಆ ವಿಷಯ ದೇಹದಲ್ಲಿ ಅಮರತ್ವದ ಭಾವನೆಯನ್ನು ಸೃಷ್ಟಿ ಮಾಡುತ್ತದೆ, ಆದರೆ ಅದು ನಿಜವಾದ ವಿಜಯವಲ್ಲ. ಚಾಂದೋಡದ ಸ್ವಾಮಿ ಬ್ರಹ್ಮಾನಂದರು ಮೂರು ನೂರು ವರ್ಷಗಳ ಕಾಲ ಜೀವಿಸಿದ್ದರು, ಹಾಗಾಗಿ ಅವರು ವಾಸ್ತವದಲ್ಲಿ ವಯಸ್ಸಿನ ಕ್ರಿಯೆಯಿಂದ ಮುಕ್ತರಾಗಿದ್ದರು, ಆದರೆ ಒಂದು ದಿನ ಕೊಳಕಾದ ಕಬ್ಬಿಣದ ಮೊಳೆ ಅವರನ್ನು ಚುಚ್ಚಿತು, ಅದರಿಂದಾದ ಗಾಯದಿಂದಾಗಿ ಅವರು ಸಾವನ್ನಪ್ಪಿದರು. ಭೌತಿಕ ಸ್ತರದಲ್ಲಿ ನೀವು ಕಾರ್ಯಗತಗೊಳಿಸಿರದ ಏನೋ ಒಂದು ಸಂಭವಿಸುತ್ತದೆ

ಮತ್ತು ನಿಮ್ಮ ವಿಜಯ ಸಂಪೂರ್ಣವಾಗಿಲ್ಲ ಎಂದು ಅದು ನಿಮಗೆ ತೋರಿಸಿ–ಕೊಡುತ್ತದೆ. ಆ ಕಾರಣದಿಂದಾಗಿ ಆ ವಿಧಾನ ದೀರ್ಘಕಾಲ ತೆಗೆದುಕೊಳ್ಳುತ್ತದೆ. ನೀವು ಉಚ್ಚತರ ದೈವೀ ಪ್ರಜ್ಞೆಯನ್ನು ದೇಹದ ಪ್ರತಿಯೊಂದು ಅಣುವಿನಲ್ಲಿ ಸ್ಥಾಪಿಸಬೇಕು, ಹಾಗಿಲ್ಲದಿದ್ದರೆ ನಿಮ್ನತರ ಭೌತಿಕ ಸತ್ತೆಯಲ್ಲಿ ಅಡಗಿಕೊಂಡ ಏನೋ ಒಂದು ನಿಮ್ಮ ದೃಷ್ಟಿಯಿಂದ ತಪ್ಪಿಸಿಕೊಂಡಿರುತ್ತದೆ, ಅದು ವಿರೋಧೀ ಶಕ್ತಿಗಳಿಗೆ ತಿಳಿದಿರುತ್ತದೆ, ಆಗ ಅವು ಆ ದುರ್ಬಲ ಸ್ಥಾನದ ಮೂಲಕ ಆಕ್ರಮಣ ಮಾಡಬಲ್ಲವು. ಅವು ಪರಿಸ್ಥಿತಿಗಳ ಸಂಯೋಜನೆಯನ್ನು ಸೃಷ್ಟಿಸಬಲ್ಲವು, ಅದರಿಂದಾಗಿ ಕಾರ್ಯಗತಗೊಳಿಸಿರದ ವಿಷಯ ಮೇಲೆದ್ದು ಬರುತ್ತದೆ, ನೀವು ಅದನ್ನು ನಿಯಂತ್ರಿಸುವ ಮೊದಲೇ ಅವು ನಿಯಂತ್ರಣದಾಚೆಗೆ ಇರುತ್ತವೆ. ಆ ಸಂದರ್ಭದಲ್ಲಿ ಅವು ನಿಮ್ಮನ್ನು ನಾಶಮಾಡಬಲ್ಲವು.

**ಅನುಯಾಯಿ :** *ಭೌತಿಕ ಅಷ್ಟೊಂದು ಹಟಮಾರಿ ಹಾಗೂ ಮಬ್ಬಾದದ್ದು ಏಕೆ ಆಗಿರುತ್ತದೆ?*

**ಶ್ರೀ ಅ :** ಸರಿ, ಅದು ಅದರ ಸ್ವಭಾವ. ವ್ಯವಸ್ಥೆಗೊಳಪಡಿಸಿದ್ದು ಹಾಗಿದೆ. ಭೌತಿಕ ಹಾಗಿರದೆ ಇದ್ದರೆ ಅದನ್ನು ಬಹಳ ಸುಲಭವಾಗಿ ಮಾಡಬಹುದಾಗಿತ್ತು ಮತ್ತು ಕಲ್ಪಗಳು ಮನ್ವಂತರಗಳು ಸಾಗಿ ಹೋಗುವುದಕ್ಕಿಂತ ಮೊದಲೇ ಅದನ್ನು ಕೈಕೊಳ್ಳಬಹುದಾಗಿತ್ತು. ಅದು ಸರಳವಾಗಿ ಕೈಗೂಡಲಿ ಎಂಬುದನ್ನು ಭಗವಂತ ಬಯಸುವುದಿಲ್ಲ.

**ಅನುಯಾಯಿ :** *ಅದು ಯಾವಾಗ ಮುಕ್ತಾಯಗೊಳ್ಳುತ್ತದೆ?*

**ಶ್ರೀ ಅ :** ನಾನು ಭವಿಷ್ಯ ನುಡಿಯಬೇಕೆಂದು ಬಯಸುತ್ತಿರುವಿಯಾ? ಅದು ಇಡಿಯಾಗಿ ನನ್ನ ಮೇಲೆ ಅವಲಂಬಿಸಿಲ್ಲ. ಮನುಷ್ಯನಿಗೆ ತಿಳಿದಿರುವುದರಲ್ಲಿ ಕಾಲದ ವಿಷಯ ಕೊನೆಯದಾಗಿದೆ. ಮಿತಿಯನ್ನಿರಿಸುವುದರಿಂದ ಅದನ್ನು ಇನ್ನೂ ಹೆಚ್ಚು ಕಾಲ ಮುಂದೆ ಹೋಗುವಂತೆ ಮಾಡುವ ಸಂಭವವಿರುತ್ತದೆ: "ಸ್ವರಾಜ್ಯವನ್ನು ಒಂದು ವರ್ಷದಲ್ಲಿ ಗಳಿಸುವುದು" ಎಂಬಂತಿರುತ್ತದೆ. ಅಲ್ಲದೆ ಕ್ರಿಯೆಯಲ್ಲಿ ಭಾಗವಹಿಸುವ ಯೋಗಿಗೆ ಎಲ್ಲವನ್ನೂ ಪರಮೋಚ್ಚನಿಂದ ತೋರಿಸಿಕೊಡ–ಲಾಗಿರುವುದಿಲ್ಲ. ಕೇವಲ ವಿಶ್ವಂಭರ ಪರಿಸ್ಥಿತಿಗಳು ತಯಾರಾದಾಗ ಅವನಿಗೆ ಎಲ್ಲ ವಿಷಯಗಳನ್ನು ತೋರಿಸಿಕೊಡಲಾಗುವುದು, ಅದು ಹಾಗಿರುವಾಗ ಆಸಕ್ತಿರಹಿತ–ನಾದವನು ಹೆಚ್ಚಿನ ವಿಷಯಗಳನ್ನು ನೋಡುತ್ತಾನೆ. ವಿಶ್ವಂಭರ ಸ್ಥಿತಿಗಳು ತಯಾರಾಗುವವರೆಗೆ, ಅವು ಆಜ್ಞಾರ್ಥಕ ನಿರ್ಧಾರವನ್ನು ತೆಗೆದುಕೊಂಡು ಕೆಳಗೆ

ಬರುವವರೆಗೆ ಪರಮೋಚ್ಚನು ಪ್ರತಿಯೊಂದು ವಿವರವನ್ನು ನಿರ್ಧರಿಸಿರುವುದಿಲ್ಲ. ಈ ನಡುವೆ ಎಲ್ಲವೂ ವಿಶ್ವಂಭರ ಶಕ್ತಿಗಳ ಕಾರ್ಯಗತಿಯಾಗಿರುತ್ತದೆ. ಎಲ್ಲ ಕಾಲದಲ್ಲಿ ಪರಮೋಚ್ಚನು ಅದನ್ನು ತಿಳಿದುಕೊಂಡಿರುವುದಿಲ್ಲ ಎಂದಲ್ಲ. ವಿಶ್ವಂಭರ ಶಕ್ತಿಗಳು ಕಾರ್ಯಗತಗೊಳಿಸಿದ್ದುದು ಪರಮೋಚ್ಚನ ನಿರ್ಧಾರದಿಂದಲೇ ಆಗಿರುತ್ತದೆ.

**ಅನುಯಾಯಿ :** *ಭೌತಿಕಕ್ಕೆ ಸಂಬಂಧಿಸಿದ ಹಾಗೆ ವಿಶ್ವಂಭರ ಪರಿಸ್ಥಿತಿಗಳು ನೆರವೇರಿಕೆ ಕಂಡುಕೊಂಡಿವೆಯೆ?*

**ಶ್ರೀ ಅ :** ಭೌತಿಕ ಪ್ರಜ್ಞೆ ಕುರಿತು ಹೇಳುವುದಾದರೆ ಸರ್ವಸಾಮಾನ್ಯ ಷರತ್ತುಗಳು ನೆರವೇರಿಕೆ ಕಂಡುಕೊಂಡಿವೆ, ಆದರೆ ಈ ಅತ್ಯಂತ ಭೌತದ್ರವ್ಯದ ಸ್ತರ ಉಳಿದುಕೊಂಡಿದೆ, ಮತ್ತು ಅತ್ಯಂತ ಅಪಾಯಕಾರಿಯಾದದ್ದು.

**ಅನುಯಾಯಿ :** *ಅದು ಅತ್ಯಂತ ಅಪಾಯಕಾರಿಯಾಗಿರುವುದು ಏಕೆ?*

**ಶ್ರೀ ಅ :** ಏಕೆಂದರೆ ಅದು ಘನ ಸ್ವರೂಪದ್ದಾಗಿದೆ, ಒತ್ತಾಗಿ ಸೇರಿಸಿದ್ದಾಗಿದೆ ಮತ್ತು ಅದು ತನ್ನದೇ ದ್ರವ್ಯವನ್ನು ಪೂರ್ತಿಯಾಗಿ ಬಿಟ್ಟುಕೊಡಲು ತಿರಸ್ಕರಿಸಬಹುದು. ಅದು ತರ್ಕಕ್ಕೆ ಅತಿ ಕಡಿಮೆ ಮಟ್ಟದಲ್ಲಿ ತೆರೆದುಕೊಂಡಿರುತ್ತದೆ ಮತ್ತು ಅದರೊಡನೆ ವ್ಯವಹರಿಸುವಾಗ ನಿಮಗೆ ಅತ್ಯುಚ್ಚ ದೈವೀ ಸಾಮರ್ಥ್ಯ ಬೇಕಾಗುತ್ತದೆ. ಅಲ್ಲದೆ ಇಡೀ ವಿಶ್ವದ ಸ್ಥಾಪಿತಗೊಂಡ ಇಡೀ ಸಂಸ್ಕಾರ ನಿಮ್ಮ ಪ್ರಯತ್ನದ ವಿರುದ್ಧವಿದೆ. ಮೇಲ್ಗಡೆಯಿಂದ ದೈವಿಕವಾದ ಏನೋ ಒಂದು ಅವರೋಹಣ ಮಾಡಬೇಕು ಮತ್ತು ಅಡೆತಡೆಗಳನ್ನು ತೆಗೆದು ಹಾಕಬೇಕು.

**ಅದೇ ಗ್ರಂಥ, ಪು. 311. 15–8–1924**

*

**ಅತಿಮಾನಸ ಕುರಿತು ಕೆಲವು ತಪ್ಪು ಕಲ್ಪನೆಗಳು**

ನಮ್ಮ ಯೋಗ ಅತಿಮಾನಸ ಸತ್ತೆ, ಅತಿಮಾನಸ ಜಗತ್ತು ಮತ್ತು ಅತಿಮಾನಸ ಸ್ವಭಾವ ಹಾಗೂ ಜೀವನದಲ್ಲಿ ಅವೆಲ್ಲವುಗಳ ಪ್ರಕಟಣೆ ಇವುಗಳನ್ನು ಶೋಧಿಸುವುದನ್ನು ಗುರಿಯಾಗಿರಿಸಿಕೊಂಡಿದೆ. ಆದರೆ ಮೇಲೆದ್ದು ಬರಬಹುದಾದ ಸರ್ವಸಾಧಾರಣ ತಪ್ಪುಗಳ ವಿರುದ್ಧ ನಮ್ಮನ್ನು ರಕ್ಷಿಸಿಕೊಳ್ಳಬೇಕು. ಅಣಿಮಾ, ಗರಿಮಾ ಸಿದ್ಧಿಗಳು, ಇಲ್ಲವೆ ಭೌತಿಕ ಕಾರ್ಯ ವಿಧಾನಗಳನ್ನು ನಿಯಂತ್ರಿಸುವುದು, ರೋಗಗಳನ್ನು ನಿವಾರಣೆ ಮಾಡುವುದು ಇಂತಹವೆಲ್ಲ ಅತಿಮಾನಸ ಭೌತಿಕಕ್ಕೆ ಸೇರಿವೆ ಎಂದು ಜನರು ಯೋಚಿಸುತ್ತಾರೆ. ಬಹಳಷ್ಟು ಸಂದರ್ಭಗಳಲ್ಲಿ ಈ

ಸಾಮರ್ಥ್ಯಗಳನ್ನು ಅವು ಇರುವ ತಳಶಾಯಿ (subliminal) ಸತ್ತೆಗೆ ತಿಳಿದೋ, ತಿಳಿಯದೆಯೋ ತೆರೆದುಕೊಂಡ ಜನರು ದೊರಕಿಸಿರುತ್ತಾರೆ. ಅತಿಮಾನಸದ ಇಲ್ಲವೆ ಯೋಗದ ಬಗ್ಗೆ ಕಿಂಚಿತ್ತೂ ತಿಳಿದಿರದ ಜನರಲ್ಲಿ ಇಂತಹ ಸಾಮರ್ಥ್ಯಗಳು ಕಂಡುಬರುವ ಹಲವಾರು ನಿದರ್ಶನಗಳಿವೆ.

ಗತಕಾಲದಲ್ಲಿ ಈ ಯೋಗವನ್ನು ಲೆಕ್ಕಕ್ಕಿಡಲು ಸಾಧ್ಯವಿಲ್ಲದಷ್ಟು ಸಲ ಪ್ರಯತ್ನಿಸಲಾಗಿದೆ ಮತ್ತು ದೈವೀ ಪ್ರಕಾಶ ಮತ್ತೆ ಮತ್ತೆ ಅವರೋಹಣ ಮಾಡುತ್ತಿತ್ತು ಮತ್ತು ಹಿಂದೆ ಸರಿದುಕೊಂಡು ಹೋಗುತ್ತಿತ್ತು ಎಂಬ ಒಂದು ವಿಚಾರವಿದೆ. ಇದು ಸರಿ ಎಂದು ತೋರಿಬರುವುದಿಲ್ಲ. ಅತಿಮಾನಸ ಭೌತಿಕ ದೇಹವನ್ನು ಕೆಳಗಿಳಿಸಿ ತರಲಾಗಿಲ್ಲ ಎಂಬುದನ್ನು ನಾನು ಕಂಡುಕೊಂಡಿದ್ದೇನೆ, ಹಾಗಿಲ್ಲದೆ ಹೋದರೆ ಅದು ಅಲ್ಲಿ ಉಳಿದುಕೊಂಡಿರುತ್ತಿತ್ತು. ಹಾಗಾಗಿ ನಾವು ನಮ್ಮ ಪ್ರಯತ್ನವನ್ನು ಕಡೆಗಣಿಸಬಾರದು, ಮತ್ತು ಅದನ್ನು ಸಿದ್ಧಿಸಿಕೊಳ್ಳುವ ಮಾರ್ಗದಲ್ಲಿ ಅಡೆತಡೆಗಳನ್ನು ಚೆಲ್ಲಿಕೊಡಬಾರದು.

ಕಟ್ಟಕಡೆಯ ಪರಿವರ್ತನೆಯ ಸ್ವಭಾವ ಹೇಗಿರಬಹುದು ಎಂದು ಹೇಳುವ ಕಾಲ ಇನ್ನೂ ಕೂಡಿಬಂದಿಲ್ಲ. ಹಳೆಯ ಯೋಗಿಗಳು ತಮ್ಮ ಜೀವನದಲ್ಲಿ ಪ್ರಕಟಪಡಿಸಿದ್ದು ಹೆಚ್ಚಿನ ಮಟ್ಟದಲ್ಲಿ ಭೌತಿಕ ಕಾರ್ಯವಿಧಾನಗಳ ಮೇಲೆ ಪ್ರಾಣಿಕ ನಿಯಂತ್ರಣ ಪಡೆಯುವುದಾಗಿತ್ತು. ಭೌತಿಕ ದ್ರವ್ಯದ ಮೇಲೆ ಹಾಗೂ ಕಾರ್ಯವಿಧಾನಗಳ ಮೇಲೆ ಪ್ರಾಣಿಕ ಸಿದ್ಧಿಯನ್ನು ಪಡೆಯುವುದು ನಮ್ಮ ಗುರಿಯಾಗಿಲ್ಲ. ನಮ್ಮ ಇಡೀ ಸತ್ತೆ ಅದರ ಪ್ರಕಟಣೆಯ ಎಲ್ಲ ಸ್ತರಗಳ ಮೇಲೆ ಸಂಪೂರ್ಣ ಪರಿವರ್ತನೆಗೆ ಒಳಗಾಗುವಂತೆ ಮಾಡಲು ಪ್ರಯತ್ನಿಸುತ್ತಿದ್ದೇವೆ. ಹಳೆಯ ಶಿಸ್ತುಪಾಲನೆಗಳಲ್ಲಿ ಗುರಿ ಪರಿವರ್ತನೆಯಾಗಿರಲಿಲ್ಲ ಇಲ್ಲವೆ ಭೌತಿಕ ಸತ್ತೆಯ ಮೇಲೆ ವಿಜಯ ಪಡೆಯುವುದಾಗಿರಲಿಲ್ಲ. ಅದರ ಮೇಲೆ ಯಾವುದೇ ಬಗೆಯ ನೇರವಾದ ಹಿಡಿತವನ್ನು ಅವರು ಹೊಂದಿರಲಿಲ್ಲ. ಇದು ವೇದಾಂತದ ಗೀಳು ಹಿಡಿದದ್ದರಿಂದ ಆಗಿರುವ ತಪ್ಪು. ಏಕೈಕ ದೈವೀ ಪ್ರಜ್ಞೆ ಇದೆ ಎಂಬುದು ನಿಜ, ಆದರೆ ಆ ಸಿದ್ಧಿಯೊಂದಿಗೆ ನಿಂತುಬಿಡಬಾರದು. ನಾನು ಇದೀಗ ಹೇಳಿದ ಹಾಗೆ ನಾವು ಇಡೀ ಸತ್ತೆಯನ್ನು ಪರಿವರ್ತನೆಗೆ ಒಳಪಡಿಸಬೇಕು.

ನಮ್ಮ ಯೋಗ ಪ್ರಜ್ಞಾಪೂರ್ಣ ಉತ್ಕ್ರಾಂತಿಗಾಗಿ ಒಂದು ಪ್ರಯತ್ನವಾಗಿದೆ ಎಂಬ ವಿಚಾರವಿದೆ. ಇಲ್ಲಿ ದಿವ್ಯಾತ್ಮ ಭೌತದ್ರವ್ಯದಲ್ಲಿ ತೊಡಗಿಕೊಂಡಿದೆ (involved) ಮತ್ತು ಅದಕ್ಕೆ ಅಧೀನವಾಗಿರುವಂತೆ ತೋರಿಬರುತ್ತದೆ.

ಉತ್ಕ್ರಾಂತಿಯ ವಿಧಾನದ ಮೂಲಕ ಪ್ರಾಣಿಕ ಸತ್ತೆ ಮತ್ತು ಮಾನಸಿಕ ಸತ್ತೆ ಇವು ಇಲ್ಲಿ ಪ್ರಕಟಗೊಂಡ ಅಸ್ತಿತ್ವದಲ್ಲಿ ಬಂದಿವೆ. ಮನಸ್ಸಿನಿಂದ ಅತಿಮಾನಸದೆಡೆಗೆ ಉತ್ಕ್ರಾಂತಿ ಹೊಂದುವುದಕ್ಕಾಗಿ ನಮ್ಮ ಪ್ರಯತ್ನವಿದೆ.

ತೈತ್ತಿರೀಯ ಉಪನಿಷತ್ತು ಹೇಳುವ ಪ್ರಕಾರ ಪ್ರಾಣಿಕದಲ್ಲಿ ಭೌತಿಕವಾದದ್ದನ್ನು, ಮಾನಸಿಕದಲ್ಲಿ ಪ್ರಾಣಿಕವಾದದ್ದನ್ನು, ಅತಿಮಾನಸ ಮತ್ತು ದೈವೀ ಪ್ರಜ್ಞೆಯಾದುದರಲ್ಲಿ ಮಾನಸವಾದದ್ದನ್ನು ಕೈಗೆತ್ತಿಕೊಳ್ಳಲಾಗಿದೆ. ಇನ್ನೊಂದು ಉಪನಿಷತ್ತು ಹೇಳುವ ಪ್ರಕಾರ ಅತಿಮನಸ್ಸನ್ನು ಸಿದ್ಧಿಸಿಕೊಂಡ ಮನುಷ್ಯ ದೈವೀ ಸೂರ್ಯನ ದ್ವಾರದ ಮೂಲಕ ತಪ್ಪಿಸಿಕೊಂಡು ಹೋಗುತ್ತಾನೆ. ಅತಿಮನಸ್ಸಿಗೆ ಏರಿ ಹೋದ ನಂತರ ಪ್ರಜ್ಞಾಪೂರ್ಣ ಅವರೋಹಣ ಮಾಡುವ ವಿಚಾರ ಅಲ್ಲಿಲ್ಲ.

ಹಾಗೆಯೇ ನಮ್ಮ ಸಾಧನೆಯಲ್ಲಿ ಆರೋಹಣ ಮಾಡುವ ಚಲನೆಯಿದೆ ಎಂಬುದನ್ನು ನಾವು ಗಮನಿಸುತ್ತೇವೆ, ಆದರೆ ಅದೇ ಇಡೀ ವಿಷಯವಲ್ಲ, ನಾವು ಮತ್ತೆ ಅವರೋಹಣ ಮಾಡಬೇಕು ಮತ್ತು ಪ್ರಜ್ಞಾಪೂರ್ವಕವಾಗಿ ಅತಿಮಾನಸ ಪ್ರಕಾಶವನ್ನು ದೈವೀ ಸತ್ಯವನ್ನು, ದೈವೀ ಸಾಮರಸ್ಯವನ್ನು ಕೆಳಗಿಳಿಸಿ ತರಬೇಕು, ಹಾಗೆ ಕೆಳಗಿಳಿಸಿ ತಂದದ್ದು ನಮ್ಮ ಸ್ವಭಾವವನ್ನು ಎಂದರೆ ನಮ್ಮ ಮನಸ್ಸು, ಪ್ರಾಣ ಹಾಗೂ ದೇಹಗಳನ್ನು ಪರಿವರ್ತನೆಗೆ ಒಳಪಡಿಸಬೇಕು.

ಈ ಯೋಗವನ್ನು ಪ್ರತಿಯೊಬ್ಬನೂ ಆಚರಿಸಬಹುದು ಎಂಬ ವಿಚಾರವಿದೆ, ಆದರೆ ಅದು ಭಾಗಶಃ ಸತ್ಯವಾದದ್ದು. ಈ ಯೋಗವನ್ನು ಆಚರಿಸಿರೆಂದು ಎಲ್ಲರಿಗೂ ಕರೆ ಕೊಡಲಾಗಿರುವುದಿಲ್ಲ. ಎಲ್ಲರಿಗೂ ಈ ಯೋಗದ ಆಚರಣೆಗಾಗಿ ಸುಪ್ತ ಕ್ಷಮತೆ ಇರುತ್ತದೆಂದು ಹೇಳಬಹುದು. ಆದರೆ ಅದು ಕೇವಲ ಒಂದು ಮಟ್ಟದವರೆಗೆ ಯೋಗಾಚರಣೆಗಾಗಿ ತಯಾರಿ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಮನಸ್ಸನ್ನು ವಿಶಾಲವಾಗುವಂತೆ ವಿಸ್ತರಿಸಿಕೊಳ್ಳುವಿಕೆ, ಪ್ರಾಣಿಕ ಸ್ವಭಾವದ ನಿಮ್ನತರ ಚಟುವಟಿಕೆಗಳನ್ನು ತಿರಸ್ಕರಿಸುವುದು, ಇದೆಲ್ಲದಕ್ಕಿಂತ ಹೆಚ್ಚು ಕಠಿಣವಾದ ಕಾರ್ಯವೆಂದೆ ಭೌತಿಕ ಸತ್ತೆಯಲ್ಲಿ ಬದಲಾವಣೆ ಆಗುವಂತೆ ಮಾಡುವುದು ಇದೆಲ್ಲವನ್ನು ಕುರಿತು ಎಲ್ಲರೂ ಪ್ರಯತ್ನ ಮಾಡಲಾರರು. ಮೊದಲು ನಮ್ಮ ಎಲ್ಲ ಸತ್ತೆ ಅತಿಮಾನಸದ ಸ್ವಭಾವದಲ್ಲಿ ಪರಿವರ್ತನೆ ಹೊಂದುವುದನ್ನು ಬಯಸುತ್ತೇವೆ. ಆದರೆ ಅದಿಷ್ಟೇ ಎಲ್ಲವೂ ಅಲ್ಲ, ಆ ಸಾಮರ್ಥ್ಯಕ್ಕೆ ಕರೆಕೊಟ್ಟು ಅದನ್ನು ಬಾಹ್ಯ ಜೀವನದ ಮೇಲೆ ಚೆಲ್ಲಿಕೊಡುವು– ದಿರುತ್ತದೆ, ಅಲ್ಲಿಯೂ ಕೂಡ ದೈವೀ ಸತ್ಯವನ್ನು ಮತ್ತು ದೈವೀ ಸಾಮರಸ್ಯವನ್ನು

ಸ್ಥಾಪಿಸಬೇಕಾಗಿರುತ್ತದೆ. ಕಟ್ಟಕಡೆಯ ಪರಿವರ್ತನೆ ಎಂತಹದಾಗಬಹುದು ಎಂಬುದನ್ನು ಹೇಳಲು ಕಾಲ ಇನ್ನೂ ಕೂಡಿಬಂದಿಲ್ಲ. ಕಾಲ ಒದಗಿ ಬಂದಾಗ ಅದು ತನ್ನನ್ನು ತಾನೇ ತೆರೆದು ತೋರಿಸುವುದು. ನೀವು ದೈವೀ ಸತ್ಯಕ್ಕೆ ಹೆಚ್ಚು ಹೆಚ್ಚಾಗಿ ತೆರೆದಿರಿಸಿ–ಕೊಳ್ಳಿರಿ ಎಂದು ನಿಮ್ಮನ್ನು ಒತ್ತಾಯದಿಂದ ಬೇಡಲಾಗಿದೆ. ಇನ್ನುಳಿದದ್ದೆಲ್ಲ ಪರಮೋಚ್ಚ ಈಶ್ವರನ ಸಂಕಲ್ಪದ ಪ್ರಕಾರ ತಾನೇ ಕಾರ್ಯಗತವಾಗುವುದು.

**ಅದೇ ಗ್ರಂಥ, ಪು. 315. 15–8–1925**

*

**ಅತಿಮಾನಸ ಯೋಗ ಮತ್ತು ಜಗತ್ತಿನ ಪರಿಸ್ಥಿತಿಗಳು**

ನಾನು ಯಾವುದೇ ಸಂಪರ್ಕ, ಸಂಬಂಧ ಇರದ ಯೋಗವನ್ನು ಆಚರಿಸುತ್ತಿಲ್ಲ. 'ಯೋಗ ಮತ್ತು ಅದರ ಉದ್ದೇಶಗಳು' ಗ್ರಂಥದಲ್ಲಿ ಮನುಕುಲವನ್ನು ಕುರಿತು ಬರೆದಿದ್ದ ಬಹಳ ನಿಂದನೆಗೊಳಗಾದ ವಾಕ್ಯದ ಹಿನ್ನೆಲೆಯಲ್ಲಿ ಸತ್ಯವಿತ್ತು, ಆದಾಗ್ಯೂ ಅದರ ಬಗ್ಗೆ ನನಗೆ ಅರಿವುಂಟಾಗಿರಲಿಲ್ಲ. ಮನುಕುಲಕ್ಕಾಗಿ ನನ್ನ ಯೋಗವಿಲ್ಲ ಎಂಬುದು ಸತ್ಯ, ಆದರೆ ಅದು ನನಗಾಗಿಯೂ ಇಲ್ಲ. ಸಹಜವಾಗಿ ನಾನು ಸಿದ್ಧಿಯನ್ನು ಪಡೆಯುವುದು, ಇತರರು ಅಂತಹ ಸಿದ್ಧಿಯನ್ನು ಪಡೆಯಲು ಶಕ್ತರಾಗುವುದಕ್ಕೆ ಪೂರ್ವಭಾವಿ ಷರತ್ತಾಗಿರುತ್ತದೆ. ನನ್ನದೇ ಮುಕ್ತಿ ಹಾಗೂ ಪರಿಪೂರ್ಣತೆಗಳನ್ನು ಅರಸುತ್ತಿದ್ದರೆ ನನ್ನ ಯೋಗ ಬಹಳ ಕಾಲದ ಹಿಂದೆಯೇ ಮುಕ್ತಾಯಗೊಳ್ಳುತ್ತಿತ್ತು.

**ಅನುಯಾಯಿ :** *ನಿಮ್ಮ ಮಧ್ಯಾಹ್ನದ ಭಾಷಣದಲ್ಲಿ ಭೌತಿಕ ಸ್ತರದ ಮೇಲೆ ಈ ಮೊದಲು ಯಾರೂ ಕಾರ್ಯ ಕೈಕೊಂಡಿಲ್ಲ ಎಂದು ಹೇಳಿದಿರಿ.*

**ಶ್ರೀ ಅ :** ಅದನ್ನು ಕುರಿತು ಗತಕಾಲದಲ್ಲಿ ಯಾರೂ ಪ್ರಯತ್ನ ಮಾಡಿಲ್ಲ ಎಂದು ನಾನು ಹೇಳಲಿಲ್ಲ. ಪ್ರಯತ್ನಗಳನ್ನು ಕೈಕೊಳ್ಳಲಾಗಿತ್ತು, ಆದರೆ ಭೌತಿಕ ಸ್ತರದಲ್ಲಿ ಸ್ಥಿರವಾಗಿ ಉಳಿದುಕೊಳ್ಳುವಂತಹದನ್ನು ಸಿದ್ಧಿಸಿಕೊಂಡಿರಲಿಲ್ಲ, ಮೂಲಭೂತವಾದ ಏನನ್ನೂ ಸ್ಥಾಪಿಸಲಾಗಿರಲಿಲ್ಲ. ಅದನ್ನು ಸ್ಥಾಪಿಸಲಾಗಿದ್ದರೆ, ಸಿದ್ಧಿ ಎಷ್ಟೇ ಭಾಗಶಃವಾಗಿದ್ದರೂ ಅದು ಅಲ್ಲಿ ಇದ್ದುಕೊಂಡಿರುತ್ತಿತ್ತು. ನಿಮಗೆ ತಿಳಿದ ಹಾಗೆ ಸಿದ್ಧಿ ಎಷ್ಟೇ ಅಪರಿಪೂರ್ಣವಾಗಿದ್ದರೂ ಅದು ಮನಸ್ಸಿನ ಸ್ತರದಲ್ಲಿದೆ, ಅದು ಪ್ರಾಣಿಕ ಸ್ತರದಲ್ಲಿರುವುದನ್ನೂ ಕಂಡುಕೊಳ್ಳುತ್ತೀರಿ, ಆದರೆ ಅಂತಹದೇನನ್ನೂ ಭೌತಿಕ ಸ್ತರದಲ್ಲಿ ಕಂಡುಕೊಳ್ಳುವುದಿಲ್ಲ.

**ಅನುಯಾಯಿ :** *ಅದರರ್ಥ ಭೌತಿಕ ಸ್ತರದ ಮೇಲೆ ಅತಿಮನಸ್ಸನ್ನು ಕೆಳಗಿಳಿಸಿ ತರುವುದಕ್ಕೆ ಅವಶ್ಯವಾದ ವಾತಾವರಣವನ್ನು ಸೃಷ್ಟಿಸಬೇಕಾಗಿದೆಯೆ?*

**ಶ್ರೀ ಅ :** ಅದೇ ಇಡೀ ಪ್ರಯತ್ನವಾಗಿದೆ. ಅದನ್ನು ಈ ಕಾಲದಲ್ಲಿ ಕಾರ್ಯಗತ–ಗೊಳಿಸಬೇಕೆಂದಿದ್ದರೆ ಅವಶ್ಯವಾದ ಪರಿಸ್ಥಿತಿಯನ್ನು ಸೃಷ್ಟಿಸುವ ಪ್ರಯತ್ನದಲ್ಲಿ ನೀವು ಸಹಾಯ ಮಾಡಬೇಕು. (ತಮ್ಮೆಡೆಗೆ ಬೆರಳು ಮಾಡಿ ತೋರಿಸುತ್ತ) ಅಲ್ಲಿ ಕೇಂದ್ರವಿದೆ. ಅದರಿಂದ ನೀವು ತೆಗೆದುಕೊಳ್ಳಬಹುದು. ಆದರೆ ನಾವು ಯಶಸ್ವಿ–ಯಾಗಬೇಕಾದರೆ ನಾವೆಲ್ಲ ಒಂದು ಬದಿಗಿರಬೇಕು. ವಿರೋಧೀ ಸೂಚನೆಗಳಿಗೆ ನೀವು ಆಸ್ಪದ ನೀಡಿದರೆ ನಿಮ್ಮದೇ ಪ್ರಗತಿಯನ್ನು ಹಾಗೆಯೇ ಸರ್ವಸಾಧಾರಣ ಮುನ್ನಡೆಯನ್ನು ಕುಂಠಿತಗೊಳಿಸುತ್ತೀರಿ.

**ಅನುಯಾಯಿ :** *ಭೌತಿಕ ಸ್ವಭಾವದ ಪ್ರತಿರೋಧವನ್ನು ತಗ್ಗಿಸಲು ಏನು ಮಾಡಬೇಕು?*

**ಶ್ರೀ ಅ :** ಸತ್ಯಕ್ಕಾಗಿ ನಿಮ್ಮಲ್ಲಿ ಸಮಗ್ರ ಅಭೀಪ್ಸೆ ಇರಬೇಕು. ಸಹಜವಾಗಿ ಸಾಧನೆಯಲ್ಲಿ ಕೆಲವು ಸಮಯಗಳಿರುತ್ತವೆ, ಆಗ ಮನಸ್ಸು ನಿರಾಶೆಗೊಳಗಾಗುತ್ತದೆ, ಮತ್ತು ಉಚ್ಚತರ ದೈವೀ ಸಾನ್ನಿಧ್ಯದ ಮೇಲೆ ಪರದೆ ಬಿದ್ದಂತಿರುತ್ತದೆ. ಅಂತಹ ಸಮಯದಲ್ಲಿ ಅಭೀಪ್ಸೆ ಮತ್ತು ನಂಬಿಕೆ ಮನುಷ್ಯನಿಗೆ ಆಧಾರ ನೀಡುತ್ತವೆ – ನಂಬಿಕೆ ಶ್ರೀ ರಾಮಕೃಷ್ಣರು ಹೇಳಿದ ಹಾಗೆ ಕುರುಡಾಗಿರಬೇಕು. ನಿಜ ಹೇಳುವುದಾದರೆ ಆ ನಂಬಿಕೆ ಕುರುಡಾಗಿ–ರುವುದಿಲ್ಲ. ಆತ್ಮದ ನೆನಪು ಕುರುಡಾಗಿರುತ್ತದೆ. ರೋಗವೊಂದನ್ನು ನಿವಾರಣೆ ಮಾಡುವುದಕ್ಕೆ ಕೂಯೆ(coué)ಗೆ ನಂಬಿಕೆ ಅವಶ್ಯವಾಗಿದ್ದರೆ, ಅತಿಮನಸ್ಸನ್ನು ಕೆಳಗಿಳಿಸಿ ತರುವುದಕ್ಕೆ ಅದು ಇನ್ನೂ ಹೆಚ್ಚಿನ ರೀತಿಯಲ್ಲಿ ಅವಶ್ಯವಾಗಿರುತ್ತದೆ.

**ಶ್ರೀ ಅರವಿಂದರೊಡನೆ ಸಾಯಂಕಾಲದ ಮಾತುಕತೆಗಳು**
**ಎ.ಬಿ. ಪುರಾಣಿ ದಾಖಲಿಸಿದ್ದು (ETABP) ಪು. 318–19, 15–8–1925**

*

ದೈವೀ ಪ್ರೇಮ, ದೈವೀ ಸೌಂದರ್ಯ ಹಾಗೂ ದಿವ್ಯಾನಂದ ಇವುಗಳನ್ನು ಜಗತ್ತಿನಲ್ಲಿ ತರುವುದು, ನಿಜವಾಗಿ, ನಮ್ಮ ಯೋಗದ ಶಿಖರ ಹಾಗೂ ಸಾರವಾಗಿದೆ. ಆದರೆ ಅದಕ್ಕೆ ಆಧಾರವಾಗಿ, ಬುನಾದಿಯಾಗಿ ಹಾಗೂ ರಕ್ಷಕನಾಗಿ ದೈವೀ ಸತ್ಯ – ನಾನು ಅತಿಮನಸ್ಸು ಎಂದು ಕರೆದದ್ದು – ಹಾಗೂ ಅದರ ದೈವೀ ಸಾಮರ್ಥ್ಯ ಇವು ಬರದೇ ಹೋದರೆ ಆ ಕಾರ್ಯ ಅಸಾಧ್ಯವಾಗುತ್ತದೆ ಎಂದು ನನಗೆ ಯಾವಾಗಲೂ ತೋರಿಬಂದಿದೆ.

**CWSA, 35/832** **– ಶ್ರೀ ಅರವಿಂದರು**

*

**ವಿಶ್ವಂಭರ ಪರಿಸ್ಥಿತಿಗಳು ತಯಾರು ಮಾಡಿಕೊಂಡಿರುವುದರ ಕುರುಹುಗಳು**

**ಅನುಯಾಯಿ :** *ಅತಿಮನಸ್ಸು ಕೆಳಗಿಳಿದು ಬರುವುದಕ್ಕಾಗಿ ವಿಶ್ವಂಭರ ಪರಿಸ್ಥಿತಿಗಳು ಮೊದಲಿದ್ದುದಕ್ಕಿಂತ ಹೆಚ್ಚಿನ ತಯಾರು ಮಾಡಿಕೊಂಡಿರುವವೇ?*

**ಶ್ರೀ ಅ :** ಮೊದಲನೆಯದಾಗಿ ಭೌತಿಕ ಜಗತ್ತುಗಳ ಬಗೆಗಿರುವ ಜ್ಞಾನ ಎಷ್ಟೊಂದು ಹೆಚ್ಚಾಗಿದೆ ಎಂದರೆ ಅದು ತನ್ನದೇ ಬಂಧನಗಳನ್ನು ಮುರಿದು ಹಾಕುವ ಅಂಚಿನಲ್ಲಿದೆ.

ಎರಡನೆಯದಾಗಿ ಜಗತ್ತಿನಲ್ಲೆಲ್ಲ ಬಾಹ್ಯ ಹಾಗೂ ಆಂತರಿಕ ಮಾನಸಿಕ, ಬಾಹ್ಯ ಹಾಗೂ ಆಂತರಿಕ ಪ್ರಾಣಿಕ, ಬಾಹ್ಯ ಹಾಗೂ ಆಂತರಿಕ ಭೌತಿಕ ಇವುಗಳ ನಡುವಿರುವ ಪರದೆಯನ್ನು ಹರಿದು ಹಾಕುವ ಪ್ರಯತ್ನವಿದೆ.

ಮೂರನೆಯದಾಗಿ ಪ್ರಾಣಿಕ, ಹಿಂದೆಂದೂ ಕಂಡುಕೊಂಡಿರದ ಹಾಗೆ, ತನ್ನ ಹಿಡಿತವನ್ನು ಭೌತಿಕದ ಮೇಲೆ ಸಾಧಿಸಲು ಪ್ರಯತ್ನಿಸುತ್ತದೆ. ಅದು ಉಚ್ಚತರ ದೈವೀ ಸತ್ಯ ಕೆಳಗಿಳಿದು ಬಂದಾಗಲೆಲ್ಲ ತೋರಿಬರುವ ಕುರುಹು; ಅದು ವಿರೋಧೀ ಪ್ರಾಣಿಕ ಜಗತ್ತನ್ನು ಮೇಲ್ಮೈಗೆ ಚೆಲ್ಲಿಕೊಡುತ್ತದೆ, ಮತ್ತು ನೀವು ಎಲ್ಲ ಬಗೆಯ ಪ್ರಾಣಿಕ ಪ್ರಕಟಣೆಗಳನ್ನು ನೋಡುತ್ತೀರಿ, ಹುಚ್ಚು ಹಿಡಿದವರ ಸಂಖ್ಯೆಯಲ್ಲಿ ಹೆಚ್ಚಳ, ಭೂಕಂಪಗಳು ಇತ್ಯಾದಿಗಳಿರುತ್ತವೆ. ವಿಮಾನ, ರೈಲ್ವೆ, ತಂತಿರಹಿತ ಸುದ್ದಿ ತಲುಪಿಸುವ ಯಂತ್ರ (wireless telegraphy) ಇತ್ಯಾದಿ ವೈಜ್ಞಾನಿಕ ಶೋಧಗಳಿಂದಾಗಿ ಜಗತ್ತು ಹೆಚ್ಚು ಹೆಚ್ಚಾಗಿ ಒಟ್ಟುಗೂಡುತ್ತಿದೆ. ಇಂತಹ ಒಟ್ಟುಗೂಡುವಿಕೆ ಅತ್ಯುಚ್ಚ ದೈವೀ ಸತ್ಯ ಕೆಳಗಿಳಿದು ಬರುವುದಕ್ಕೆ ಷರತ್ತಾಗಿರುತ್ತದೆ, ಹಾಗೆಯೇ ಅದು ನಮಗೆ ತೊಂದರೆಯನ್ನೂ ಕೂಡ ಉಂಟುಮಾಡುತ್ತದೆ.

ನಾಲ್ಕನೆಯದಾಗಿ ಹೆಚ್ಚಿನ ಸಂಖ್ಯೆಯಲ್ಲಿರುವ ಜನರ ಮೇಲೆ ಪ್ರಚಂಡ ಪ್ರಾಣಿಕ ಪ್ರಭಾವ ಬೀರುವ, ಅಧಿಕಾರ ನಡೆಸುವ ಜನರ ಸಂಖ್ಯೆಯಲ್ಲೂ ಹೆಚ್ಚಳ ಕಂಡುಬರುತ್ತದೆ.

ಈಗ ವಿಶ್ವಂಭರ ಪರಿಸ್ಥಿತಿಗಳು ಹೆಚ್ಚು ತಯಾರಾಗಿವೆ ಎಂದು ತೋರಿಸಿಕೊಡುವುದಕ್ಕೆ ಇವು ಕೆಲವು ಕುರುಹುಗಳಾಗಿವೆ. ಸಹಜವಾಗಿ ಗತಕಾಲದ ಪ್ರಯತ್ನಗಳಿಗಾಗಿ ಪರಿಸ್ಥಿತಿಗಳು ಹೇಗಿದ್ದವು ಎಂಬುದರ ಬಗ್ಗೆ ನಮಗೇನೂ ತಿಳಿದುಬರುವುದಿಲ್ಲ. ಆದರೆ ಈಗ ನಾವು ನೋಡಬಹುದಾದುದರಷ್ಟರ ಮಟ್ಟಿಗೆ ಪ್ರಯತ್ನವನ್ನು ಸಮರ್ಥಿಸುವುದಕ್ಕೆ ಅಲ್ಲಿ ಪರಿಸ್ಥಿತಿಗಳಿವೆ.

**ಅದೇ ಗ್ರಂಥ, ಪು. 322–23, 15–8–1925**

*

**ಜಗತ್ತಿನ ಶಕ್ತಿಗಳ ಬಗ್ಗೆ ಜ್ಞಾನ ಅವಶ್ಯವಿದೆ**

**ಅನುಯಾಯಿ :** *ಜಗತ್ತಿನ ಶಕ್ತಿಗಳ ಬಗೆಗಿನ ಜ್ಞಾನ, ಯೋಗದ ಅವಶ್ಯವಾದ ಭಾಗವಾಗಿದೆ ಎಂದು ನೀವು ಪರಿಗಣಿಸುವಿರಾ?*

**ಶ್ರೀ ಅ :** ಹೌದು! ನೀವು ಜಗತ್ತಿನ ಶಕ್ತಿಗಳೊಡನೆ ವ್ಯವಹರಿಸಬೇಕಾಗುತ್ತದೆ, ಏಕೆಂದರೆ ಅವು, ವಿಶೇಷವಾಗಿ ವಿರೋಧೀ ಶಕ್ತಿಗಳು, ತಾವಿರುವುದರ ಭಾವನೆ ತಂದುಕೊಡುತ್ತವೆ. ಹಾಗೆಯೇ ಸಹಾಯಕವಾಗುವ ಶಕ್ತಿಗಳ ಬಗೆಗೂ ತಿಳಿದುಕೊಂಡಿರಬೇಕು. ಸಹಜವಾಗಿ ನೀವು ಅಭಿವೃದ್ಧಿ ಪಡೆದ ಹಾಗೆ ಅವುಗಳ ಬದಿ ಸಂಪೂರ್ಣವಾಗಿ ಬದಲಾಗುತ್ತದೆ. ಜಗತ್ತಿನ ಈ ಶಕ್ತಿಗಳ ಚಲನೆ ನಿಮ್ನತರ ಸ್ತರಗಳು ಮೇಲಿಂದ ಪ್ರಾರಂಭವಾಗುವುದಿಲ್ಲ, ಹೆಚ್ಚು ಮೇಲ್ಗಡೆಗಿರುವಲ್ಲಿಂದ ಪ್ರಾರಂಭವಾಗುತ್ತದೆ. ಎಲ್ಲ ನಿರ್ಧಾರಗಳನ್ನು ಹೆಚ್ಚು ಮೇಲ್ಗಡೆಗಿರುವಲ್ಲಿ ಕೈಕೊಳ್ಳಲಾಗುತ್ತದೆ, ಅದು ಸತ್ಯವಾದದ್ದು, ಆದರೆ ಅವುಗಳಿಗೆ ಸಂಬಂಧಿಸಿದ ಸ್ತರಗಳಿಗೆ ತಿಳಿದುಕೊಳ್ಳುವುದಕ್ಕೆ ಅನುವು ಮಾಡಿಕೊಡಲಾಗಿರುವುದಿಲ್ಲ. ಪರದೆ–ಯೊಂದನ್ನು ನಡುವೆ ಸೇರಿಸಲಾಗಿರುತ್ತದೆ, ಮತ್ತು ಪ್ರತಿಯೊಂದು ಸ್ತರ ತನ್ನದೇ ನಿರ್ಧಾರವನ್ನು ಮಾಡಲು ಮುಕ್ತವಾಗಿರುತ್ತದೆ. ಸ್ಪರ್ಧಿಸುತ್ತಿರುವ ಶಕ್ತಿಗಳಿಗೆ ಹೋರಾಟ ಕುರಿತು ನಿರ್ಧರಿಸುವುದನ್ನು ಬಿಟ್ಟುಕೊಡಲಾಗಿರುತ್ತದೆ. ನಿರ್ಧಾರಿತ ಹೊರಳುವಿಕೆಯನ್ನು ಕೈಕೊಂಡಾಗ ಮಾತ್ರ ಅತ್ಯುಚ್ಚ ನಿರ್ಧಾರದ ಬಗ್ಗೆ ತಿಳಿವಳಿಕೆ ಮಾಡಿಕೊಡಲಾಗುವುದು. ನಿಮ್ನತರ ಜ್ಞಾನವನ್ನು ದೊರಕಿಸುವ ಪ್ರಯತ್ನ ಮಾಡುವುದರ ಮೂಲಕ ನಿಮ್ಮಲ್ಲಿ ಶ್ರೇಷ್ಠತರ ಜ್ಞಾನ ಬೆಳೆಯಲು ಸಹಾಯ ಮಾಡಬಲ್ಲಿರಿ.

ಸರಿ, ನೀವು ಆ ಪ್ರಯತ್ನಕ್ಕೆ ಏಕಮುಖ (one-pointed) ಅಭೀಪ್ಸೆಯೊಂದಿಗೆ ಸಹಾಯ ಮಾಡಬಲ್ಲಿರಿ. ಆದರ್ಶದ ನೆರವೇರಿಕೆಯ ಮಾರ್ಗದಲ್ಲಿ ಅಡ್ಡ ನಿಲ್ಲುವ ಪ್ರತಿಯೊಂದನ್ನೂ ತಿರಸ್ಕರಿಸಬೇಕು. ಆದರೆ ಅದನ್ನು ಕೈಕೊಳ್ಳುವುದರ ಬದಲಾಗಿ ವಿರೋಧೀ ಶಕ್ತಿಗಳ ಸೂಚನೆಗಳನ್ನು ಒಪ್ಪಿಕೊಳ್ಳುತ್ತ, ಅವುಗಳ ಮಂತ್ರವನ್ನು ಜಪಿಸುತ್ತ ಹೋದರೆ ಅವು ನಿಮಗೆ ಹಾಗೂ ಇತರರಿಗೆ ಅದು ಸಾಧ್ಯವಿಲ್ಲ ಎಂಬ ವಿಚಾರ ಕೊಡುತ್ತವೆ, ಆಗ ನೀವು ಆ ವಿರೋಧೀ ಶಕ್ತಿಗಳಿಗೆ ಸಹಾಯ ಸಲ್ಲಿಸುತ್ತೀರಿ.

**ಅದೇ ಗ್ರಂಥ, ಪು. 323, 15–8–1925**

*

## ಎಲ್ಲ ಭಾಗಗಳ ಕ್ರಿಯಾಶೀಲ ಸಹಕಾರ ಅವಶ್ಯವಿದೆ

ಅಗಸ್ಟ 15 ರ ದಿನವನ್ನು ಕುರಿತು ನಾನು ಕೆಲವು ಮಾತುಗಳನ್ನು ಹೇಳಲಿದ್ದೇನೆ. ... ಉದ್ದೇಶವೇನು, ಯೋಗ ಎಂತಹದು ಇದೆಲ್ಲ ನಿಮಗೆ ತಾತ್ವಿಕವಾಗಿ ತಿಳಿದಿದೆ. ಅದು ದೈವೀ ಪ್ರಜ್ಞೆ, ದೈವೀ ಸಾಮರ್ಥ್ಯ, ದೈವೀ ಪ್ರಕಾಶ ಹಾಗೂ ದೈವೀ ನೈಜತೆ ಇವೆಲ್ಲವುಗಳನ್ನು ಕೆಳಗಿಳಿಸಿ ತರುವುದಿದೆ, ಅದು ಸಾಮಾನ್ಯ ಮನುಷ್ಯನಿಗೆ ತೃಪ್ತಿ ಕೊಡುವಂತಹದಕ್ಕಿಂತ ಭಿನ್ನವಾಗಿರುತ್ತದೆ. ಆ ದೈವೀ ನೈಜತೆ ಪೃಥ್ವೀ ಪ್ರಜ್ಞೆಯನ್ನು ಮೇಲಕ್ಕೆತ್ತುವುದಕ್ಕಾಗಿ ಹಾಗೂ ಪ್ರತಿಯೊಂದನ್ನು ಪರಿವರ್ತನೆಗೆ ಒಳಪಡಿಸುವು–ದಕ್ಕಾಗಿ ಇದೆ.

ಅದನ್ನು ಕುರಿತು ಮೇಲ್ಗಡೆಯಲ್ಲಿ ನಿರ್ಧಾರವಿರದಿದ್ದರೆ ಅದು ಸಂಭವಿಸ–ಲಾರದು. ಆದರೆ ಹಾಗೆಯೇ ಪೃಥ್ವೀ ಪ್ರಜ್ಞೆಯೇ ಸ್ವತಃ ಅದರ ಕೆಲವೊಂದು ಭಾಗದಲ್ಲಿ, ಇಲ್ಲಿ ನಿಮ್ನತರ ಸ್ತರಗಳ ಮೇಲೆ ವಾಸಿಸುವ ಕೆಲವರಲ್ಲಿ ಸ್ವೀಕರಿಸಲು ತಯಾರಾಗಿರದಿದ್ದರೆ ಅದು ಸಾಧ್ಯವಾಗದು. ಒಮ್ಮೆ ಈ ಪ್ರಜ್ಞೆ ಹಾಗೂ ಸಾಮರ್ಥ್ಯ ಅವರೋಹಣ ಮಾಡಿದ ಮೇಲೆ ಅದು ಎಲ್ಲ ಕಾಲಕ್ಕೆ, ಪ್ರತಿಯೊಂದು ದಿನ ಅದನ್ನು ಸ್ವೀಕರಿಸಲು ತಯಾರಾಗಿರುವವರಿಗೆ ಅಲ್ಲಿರುತ್ತದೆ.

ಆದರೆ ಈ ದಿನಕ್ಕೆ ನಾವು ವಿಶೇಷ ಮಹತ್ವವನ್ನು ಅಂಟಿಸಿದ್ದೇವೆ. ಮತ್ತು ಅದು ಸಂಕೇತಿಸುವ ದೈವೀ ಸತ್ಯದ ಪ್ರಕಾಶದಲ್ಲಿ ನಾವು ಜೀವಿಸಿದರೆ ಅದಕ್ಕೆ ಸಮರ್ಥನೆ ದೊರಕುತ್ತದೆ. ಈ ದಿನಕ್ಕಾಗಿ ನಾವು ವ್ಯಕ್ತಿಯ ಹಾಗೂ ಸರ್ವಸಾಧಾರಣ ಪ್ರಗತಿಯ ಹಂತದಲ್ಲಿ ಒಂದು ಗುರುತನ್ನಿರಿಸಬಹುದು. ಈ ದಿನ ಮುಡಿಪಾಗಿರಿಸಿಕೊಳ್ಳುವಿಕೆಯ, ಸ್ವ–ಪರೀಕ್ಷೆ ಮಾಡಿಕೊಳ್ಳುವ, ಭವಿಷ್ಯತ್ತಿನಲ್ಲಿಯ ಮುನ್ನಡೆಗಾಗಿ ತಯಾರಿಮಾಡಿಕೊಳ್ಳುವ ದಿನವಾಗಬೇಕು, ಹಾಗೆಯೇ ಸಾಧ್ಯವಾದರೆ ಮುನ್ನಡೆಯ ಕಾರ್ಯವನ್ನು ಕೊಂಡೊಯ್ಯುವ ವಿಶೇಷ ಸಾಮರ್ಥ್ಯಕ್ಕೆ ಎಡೆ ಮಾಡಿಕೊಡುವ ದಿನವಾಗಬೇಕು.

ಮನುಷ್ಯ ಸರಿಯಾದ ಮನೋಭಾವವನ್ನು ಇರಿಸಿಕೊಂಡಿದ್ದರೆ ಮತ್ತು ಆ ದಿನದಂದು ಸರಿಯಾದ ಪರಿಸ್ಥಿತಿಗಳಲ್ಲಿ ಜೀವಿಸಿದರೆ ಮಾತ್ರ ಅವನಲ್ಲಿ ವೈಯಕ್ತಿಕವಾಗಿ ಇದನ್ನು ಕೈಕೊಳ್ಳಲು ಸಾಧ್ಯವಾಗುವುದು.

ಇನ್ನೊಂದು ದಿನ ನಾನು ಮಾತನಾಡಿದುದರ ಅರ್ಥ ಇದೇ ಆಗಿತ್ತು. ಈ ಅರ್ಥದಲ್ಲಿ ನಾವು ಅದನ್ನು ನಿರ್ಧಾರಕ ದಿನವನ್ನಾಗಿ ಮಾಡಬಹುದು, ಮತ್ತು ನಾವೇ ಅದು ನೆರವೇರಿಕೆ ಕಂಡುಕೊಳ್ಳುವುದಕ್ಕೆ ಸಹಾಯ ಮಾಡಬಲ್ಲೆವು.

ಮೊದಲಿನಿಂದಲೇ ಮುಡಿಪಾಗಿರಿಸಿಕೊಳ್ಳುವಿಕೆ ಇರಬೇಕು, ಗತಕಾಲದಲ್ಲಿ ಇಣುಕಿ ನೋಡಿ ನಾವೆಷ್ಟು ದೂರ ಸಾಗಿ ಬಂದಿದ್ದೇವೆ, ನಮ್ಮಲ್ಲಿ ತಯಾರಾಗಿರುವುದು ಏನು, ನಮ್ಮಲ್ಲಿ ಬದಲಾಗದೆ ಇದ್ದುದು ಏನು, ಪರಿಪೂರ್ಣ ಪರಿವರ್ತನೆಗಾಗಿ ಯಾವುದು ಕಾದುಕೊಂಡಿದೆ, ಇನ್ನೂ ಪ್ರತಿರೋಧ ಒಡ್ಡುತ್ತಿರುವುದು ಯಾವುದು, ಇನ್ನೂ ಮಬ್ಬಾಗಿರುವುದು ಯಾವುದು ಇದನ್ನೆಲ್ಲ ನೋಡಬೇಕು. ಅಲ್ಲಿ ಅಭೀಪ್ಸೆಯಿರಬೇಕು, ನಮಗೆ ಅವಶ್ಯವಾಗಿದೆ ಎಂದು ಕಂಡುಬರುವ ಬದಲಾವಣೆಯನ್ನು ಪರಿಣಾಮಕಾರಿಯಾಗಿಸುವ ದೈವೀ ಸಾಮರ್ಥ್ಯಕ್ಕೆ ಕರೆ ಕೊಡುವುದಿರಬೇಕು.

ಇದೆಲ್ಲವನ್ನೂ ಕೈಕೊಳ್ಳಲು ನಾವು ಶಕ್ತರಾಗಬೇಕಾದರೆ ನಮ್ಮನ್ನು, ಈ ದಿನ ಹೊರಗೆ ಚೆಲ್ಲಿಕೊಂಡಿರಬಾರದು, ಗಾಢವಾದ ಏಕಾಗ್ರತೆಯಲ್ಲಿರಬೇಕು, ಅದರಿಂದಾಗಿ ಆಂತರಿಕ ಸತ್ತೆ ತಯಾರಾಗುತ್ತದೆ ಮತ್ತು ದೈವೀ ಪ್ರಕಾಶವನ್ನು ಸ್ವೀಕರಿಸುವುದಕ್ಕಾಗಿ ಮೇಲ್ಗಡೆ ಹೊರಳಿಕೊಂಡಿರುತ್ತದೆ. ಬಾಹ್ಯೀಕರಣಗೊಳಿಸುವ ಚಲನೆಯನ್ನು ನಾವು ಒಪ್ಪಿಕೊಳ್ಳುವ ಪ್ರಮಾಣದಲ್ಲಿ ಉಚ್ಚತರ ಕಾರ್ಯಗತಿಗೆ ಕ್ಷೋಭೆಯನ್ನುಂಟು ಮಾಡುತ್ತೇವೆ ಮತ್ತು ಆಂತರಿಕ ಬದಲಾವಣೆಗಾಗಿ ಅವಶ್ಯವಿರುವ ಚೈತನ್ಯವನ್ನು ಹಾಳುಮಾಡುತ್ತೇವೆ. ಸಾಮಾನ್ಯ ದಿನಗಳಲ್ಲದ ಸಮಯದಲ್ಲಿ ನಾವು ಕೈಕೊಳ್ಳುವುದೆಲ್ಲವನ್ನು ಆ ಚಲನೆಯದೇ ಒಂದು ಭಾಗವೆಂದು ಇಲ್ಲವೆ ಸತ್ತೆಯ ಅಂಚಿನಲ್ಲಿ ಹಿಡಿದಿಟ್ಟ ರೀತಿಯದೆಂದು, ಆಂತರಿಕ ಚಲನೆಗೆ ಕ್ಷೋಭೆ ಮಾಡದ ಹಾಗೆ ಕೈಕೊಳ್ಳಬೇಕು. ಮತ್ತು ದಿನದ ಎಲ್ಲ ರೂಢಿಗತ ಪರಿಸ್ಥಿತಿಗಳನ್ನು ಮುನ್ನಡೆಗೆ ಉಪಯೋಗಿಸಬೇಕು.

ಬೆಳಗಿನ ಜಾವದಲ್ಲಿ ನೀವು ನನ್ನ ಬಳಿ ಬರುವಾಗ ಅದು ರೂಢಿಗತ ವ್ರತಾಚರಣೆಯ ನೆರವೇರಿಕೆಗಾಗಿರಬಾರದು, ಆದರೆ ನಿಮ್ಮ ಆತ್ಮ ಮತ್ತು ಮನಸ್ಸು ಇವು ಸ್ವೀಕರಿಸಲು ತಯಾರು ಮಾಡಿಕೊಂಡಿರಬೇಕು. ಈಗ ನೀವು ನನ್ನ ಮಾತನ್ನು ಕೇಳುತ್ತಿದ್ದರೆ ಮತ್ತು ಅದು ಕೇವಲ ನಿಮ್ಮ ಮಾನಸಿಕ ಆಸಕ್ತಿಯನ್ನು ಸ್ಪರ್ಶಿಸುವ ಏನೋ ಒಂದಾಗಿದ್ದರೆ, ಮಾನಸಿಕ ಅಭಿರುಚಿಯನ್ನು ಸಮಾಧಾನ–ಗೊಳಿಸುತ್ತಿದ್ದರೆ ನಾನು ಹೆಚ್ಚಾಗಿ ಮೌನದಲ್ಲಿ ಉಳಿದುಕೊಳ್ಳುವುದು ಒಳ್ಳೆಯದು. ಆದರೆ ಅದು ಎಲ್ಲಿಯೋ ಒಂದೆಡೆ ಆಂತರಿಕ ಸತ್ತೆಯನ್ನು ಸ್ಪರ್ಶಿಸುತ್ತಿದ್ದರೆ ಆಗ ಮಾತ್ರ ಈ ದಿನಕ್ಕೆ ಪ್ರಯೋಜನವಿದೆ, ಇಲ್ಲವೆ ಒಂದು ಉದ್ದೇಶವಿದೆ. ಧ್ಯಾನವನ್ನೂ ಕೂಡ ಅಂತಹ ಪರಿಸ್ಥಿತಿಗಳಡಿಯಲ್ಲಿ ಕೈಕೊಳ್ಳಬೇಕು, ಅದರಿಂದಾಗಿ

ನಿರ್ಧಾರಕವಾದ ಏನೂ ಕೆಳಗಿಳಿದು ಬರದಿದ್ದರೂ ಅಲ್ಲಿ ಒಂದು ಬಗೆಯ ಒಳಸೇರುವಿಕೆ ಇರುತ್ತದೆ, ಅದರ ಪರಿಣಾಮಗಳು ನಂತರ ಬರುತ್ತವೆ.

ನಮ್ಮ ಯೋಗದ ದೃಷ್ಟಿಕೋನದಿಂದ ಅಗಸ್ಟ 15 ರ ದಿನಕ್ಕೆ ಅದು ಒಂದು ಅರ್ಥ ಕೊಡುತ್ತದೆ.

*

**ಕಾರ್ಯ ಕುರಿತು ವಿಮರ್ಶೆ**

ನೀವೆಲ್ಲಿದ್ದೀರಿ, ಕಾರ್ಯ ಎಲ್ಲಿದೆ, ಎಷ್ಟರ ಮಟ್ಟಿಗೆ ಅದನ್ನು ಕೈಕೊಳ್ಳಲಾಗಿದೆ ಎಂಬುದನ್ನು ಕುರಿತು ವಿಮರ್ಶೆ ಮಾಡಬೇಕು, ಕೆಲವೊಂದು ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅವುಗಳನ್ನು ಮನಸ್ಸಿನಿಂದ ತಿಳಿದುಕೊಂಡಿರುತ್ತೀರಿ. ಮೊದಲನೆಯದಾಗಿ ಇತರ ಯೋಗಗಳ ಉದ್ದೇಶಗಳು ನಮಗೆ ಮೊದಲ ಹಂತದವುಗಳೆಂದು ಇಲ್ಲವೆ ಮೊದಲ ಷರತ್ತುಗಳು ಆಗಿವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಮೊದಲಿನ ಯೋಗದ ರೀತಿಗಳಲ್ಲಿ ಬ್ರಾಹ್ಮಿಕ ಪ್ರಜ್ಞೆ ಇಲ್ಲವೆ ವಿಶ್ವವ್ಯಾಪಿ ಪ್ರಜ್ಞೆ, ಇಲ್ಲವೆ ದೈವೀ ಪ್ರಕಾಶ ಹಾಗೂ ಸಾಮರ್ಥ್ಯ ಇವುಗಳ ಒಂದಿಷ್ಟು ಅವರೋಹಣ, ಅನಂತ ಕುರಿತು ಒಂದಿಷ್ಟು ತಿಳಿವಳಿಕೆ ಪಡೆದ ಜನರಿಗೆ ತೃಪ್ತಿಯಾಗುತ್ತಿತ್ತು.

ಮನಸ್ಸಿಗೆ ಕೆಲವೊಂದು ಆಧ್ಯಾತ್ಮಿಕ ಅನುಭವಗಳಾದರೆ, ಮತ್ತು ಅದು ಭಾಗಶಃ ಪರಿವರ್ತನೆಗೆ ಒಳಗಾದರೆ, ಪ್ರಾಣಿಕ ಸತ್ತೆಯೊಂದಿಗೆ ಸಂಪರ್ಕ ಪಡೆದರೆ ಸಾಕಷ್ಟಾಗುವುದೆಂದು ಯೋಚಿಸಲಾಗುತ್ತಿತ್ತು.

ಅವರು ಸ್ಥಿರಗೊಂಡ ಸ್ಥಿತಿಯನ್ನು ಅರಸಿದರು ಮತ್ತು ಮುಕ್ತಿ ಕೊನೆಯ ಗುರಿ ಎಂದು ಪರಿಗಣಿಸಿದರು.

ಇದೆಲ್ಲವನ್ನೂ ಸಿದ್ಧಿಸಿಕೊಳ್ಳುವುದು, ಅನಂತ ಹಾಗೂ ವಿಶ್ವಂಭರ ದೈವೀ ಸಾಮರ್ಥ್ಯಕ್ಕೆ ತೆರೆದಿರಿಸಿಕೊಳ್ಳುವುದು, ಅದರ ತಿಳಿವಳಿಕೆಯನ್ನು ಸ್ವೀಕರಿಸುವುದು ಮತ್ತು ಅನುಭವಗಳನ್ನು ಪಡೆಯುವುದು, ಅಹಂಕಾರದಾಚೆಗೆ ಸಂಪೂರ್ಣವಾಗಿ ಸಾಗಿ ಹೋಗುವುದು, ವಿಶ್ವಂಭರ ದೈವೀ ಮನಸ್ಸು, ವಿಶ್ವಂಭರ ಆತ್ಮ, ವಿಶ್ವಂಭರ ದಿವ್ಯಾತ್ಮ ಇವುಗಳನ್ನು ಸಿದ್ಧಿಸಿಕೊಳ್ಳುವುದು ಇದೇ ಮೊದಲ ನಿಬಂಧನೆ.

ನೇರವಾಗಿ ನಮ್ಮ ಪ್ರಾಣಿಕ ಸತ್ತೆಯಲ್ಲಿ ಹಾಗೂ ಭೌತಿಕ ಸತ್ತೆಯಲ್ಲಿ ಇಳಿದು ಬರುವುದಕ್ಕೆ ಈ ಶ್ರೇಷ್ಠತರ ದೈವೀ ಪ್ರಜ್ಞೆಗೆ ಕರೆ ಕೊಡಬೇಕು, ಅದರಿಂದಾಗಿ

ಪರಮೋಚ್ಚ ಶಾಂತಿ ಹಾಗೂ ವಿಶ್ವಂಭರತೆ ಇವುಗಳೆಲ್ಲದರ ಪೂರ್ಣತೆಯೊಂದಿಗೆ, ತುದಿಯಿಂದ ಹಿಡಿದು ತಳದವರೆಗೆ ಅಲ್ಲಿ ಇದ್ದುಬಿಡುವವು.

ಇದನ್ನು ಕೈಕೊಳ್ಳಲಾಗದಿದ್ದರೆ ಆಗ ಪರಿವರ್ತನೆಗಾಗಿ ಇರುವ ಮೊದಲನೆಯ ನಿಬಂಧನೆ ನೆರವೇರಿಕೆ ಕಂಡುಕೊಳ್ಳುವುದಿಲ್ಲ.

ಎಲ್ಲವನ್ನೂ ಪರಿಪೂರ್ಣವಾಗಿ ಕೈಕೊಳ್ಳದಿದ್ದರೆ ಯಾವುದನ್ನೂ ಪರಿಪೂರ್ಣ–ವಾಗಿ ಕೈಕೊಳ್ಳಲಾಗಿರುವುದಿಲ್ಲ ಎಂಬುದು ನಾವು ತಿಳಿದುಕೊಳ್ಳಬೇಕಾದ ಹಾಗೂ ನೆನಪಿನಲ್ಲಿಟ್ಟುಕೊಳ್ಳಬೇಕಾದ ಎರಡನೆಯ ವಿಷಯ. ಮಾನಸಿಕ ಹಾಗೂ ಪ್ರಾಣಿಕ ಸತ್ತೆಗಳನ್ನು ತೆರೆದಿರಿಸಿ ಭೌತಿಕ ಸತ್ತೆಯನ್ನು ಅದರ ಮಬ್ಬು ಸ್ಥಿತಿಯಲ್ಲಿರಲು ಬಿಟ್ಟುಕೊಟ್ಟರೆ ಅದು ಸಾಕಾಗದು.

ಹಾಗಾಗಿ ಪರಿವರ್ತನೆಯಲ್ಲಿಯೂ ಕೂಡ ಪ್ರಾಣಿಕ ಸತ್ತೆ ಪರಿವರ್ತನೆ–ಗೊಳಗಾಗದಿದ್ದರೆ ಮನಸ್ಸನ್ನು ಪರಿವರ್ತನೆಗೆ ಒಳಪಡಿಸಲಾಗುವುದಿಲ್ಲ, ಪ್ರಾಣಿಕ ಸತ್ತೆಯನ್ನು ಪರಿವರ್ತನೆಗೆ ಒಳಪಡಿಸದಿದ್ದರೆ ಏನನ್ನೂ ಸಿದ್ಧಿಸಿಕೊಳ್ಳಲಾಗುವುದಿಲ್ಲ, ಏಕೆಂದರೆ ಸಿದ್ಧಿಸಿಕೊಳ್ಳುವುದು ಪ್ರಾಣಿಕ ಸತ್ತೆಯೇ ಆಗಿರುತ್ತದೆ. ಹಾಗಾಗಿ ಮನಸ್ಸು ಕೇವಲ ಭಾಗಶಃ ಬದಲಾದರೆ ಪ್ರಾಣಿಕ ತೆರೆದಿರಿಸಿಕೊಂಡಾಗ್ಯೂ ಭಾಗಶಃ ಬದಲಾದರೆ ಅದು ನಮ್ಮ ಉದ್ದೇಶಕ್ಕೆ ಸಾಕಾಗದು. ಏಕೆಂದರೆ ಪ್ರಾಣಿಕ ಸತ್ತೆಯ ಇಡೀ ವ್ಯಾಪ್ತಿ ಪರಿವರ್ತನೆಗೆ ಒಳಗಾಗಬೇಕಾದರೆ ಭೌತಿಕ ಸತ್ತೆಯೂ ತೆರೆದಿರಿಸಿಕೊಂಡಿರಬೇಕು ಮತ್ತು ಬದಲಾಗಬೇಕು, ಏಕೆಂದರೆ ಜೀವನದ ಯೋಗ್ಯವಲ್ಲದ ಪರಿಸರದಲ್ಲಿ ದೈವೀ ಪ್ರಾಣಿಕ ತನ್ನನ್ನು ಸಿದ್ಧಿಸಿಕೊಳ್ಳಲು ಶಕ್ತವಾಗುವುದಿಲ್ಲ.

ಮನುಷ್ಯ ಬಾಹ್ಯದಲ್ಲಿ ಬದಲಾಗದೆ ಇದ್ದರೆ ಆಂತರಿಕ ಭೌತಿಕವನ್ನು ಬದಲಾವಣೆಗೆ ಒಳಪಡಿಸುವುದಷ್ಟೇ ಸಾಕಾಗುವುದಿಲ್ಲ. ಯೋಗದ ವಿಧಾನದಲ್ಲಿ ಇಡಿಯಾದ ಪೂರ್ಣತೆ ಇದೆ ಮತ್ತು ಒಂದು ಇನ್ನೊಂದರ ಮೇಲೆ ಅವಲಂಬಿಸಿ–ರುತ್ತದೆ. ಹಾಗಾಗಿ ಅರ್ಧದಾರಿಯಲ್ಲಿ ನಿಂತುಬಿಡುವುದೆಂದರೆ ಇನ್ನೊಂದು ಜೀವನಕ್ಕೆ ತಯಾರು ಮಾಡಿಕೊಳ್ಳುವಂತಾಗಬಹುದು, ಆದರೆ ಅದು ವಿಜಯವಲ್ಲ. ಯಾವುದನ್ನಾದರೂ ಶಾಶ್ವತವಾಗಿ ಬದಲು ಮಾಡುವುದಕ್ಕಿಂತ ಮೊದಲು ಎಲ್ಲವನ್ನೂ ಬದಲು ಮಾಡಬೇಕು. ಪ್ರತಿಯೊಂದನ್ನು ಬದಲು ಮಾಡಬೇಕಾದರೆ, ಬದಲಾವಣೆಯನ್ನು ಕಾರ್ಯಗತಗೊಳಿಸಬೇಕಾದರೆ ಸಂಪೂರ್ಣ ಶರಣಾಗತಿ ಇರಲೇಬೇಕು, ಇದು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಮೂರನೆಯ ವಿಷಯ. ಅದರರ್ಥ ಸತ್ತೆಯ ಯಾವುದೇ ಭಾಗದಲ್ಲಿ ಕಾದಿರಿಸಿಕೊಳ್ಳುವಿಕೆ ಇರಬಾರದು,

ಹಳೆಯ ರೂಢಿಗತ ಯೋಚನೆಗಳು, ಕಾರ್ಯಕೈಕೊಳ್ಳುವ ಮಾನವ ರೀತಿಗಳು ಇವುಗಳೊಂದಿಗೆ ಯಾವುದೇ ಬಗೆಯ ರಾಜೀ ಮಾಡಿಕೊಳ್ಳುವಿಕೆ ಇರಬಾರದು. ಯಾವುದನ್ನಾದರೂ ಕಾದಿರಿಸಿಕೊಂಡಿದ್ದರೆ ಅದರರ್ಥ ದೈವೀ ಸತ್ಯವನ್ನು ಒಪ್ಪಿಕೊಳ್ಳ–ಲಾಗಿರುವುದಿಲ್ಲ, ಮತ್ತು ನಾವು ಭಾಗಶಃ ಸಿದ್ಧಿಪಡೆಯುವಂತಹ, ಭಾಗಶಃ ಪರಿವರ್ತನೆಗೆ ಒಳಪಡಿಸಿಕೊಳ್ಳುವಂತಹ ಹಳೆಯ ತಪ್ಪನ್ನು ಮತ್ತೆ ಮಾಡುತ್ತೇವೆ, ನಾವು ಅಜ್ಞಾನದ ಲೋಲುಪತೆಗೆ ಯಾವ ಕ್ಷೇತ್ರವನ್ನೂ ಬಿಟ್ಟುಕೊಡಬಾರದು.

ನಮಗಾಗಿ ಇಂತಹ ಸಿದ್ಧಾಂತಗಳಿರುವುದಿಲ್ಲ, ಮಿಥ್ಯೆ ಹಾಗೂ ಸತ್ಯ, ಪರಮೋಚ್ಚ ಹಾಗೂ ನಿಮ್ನತರ ಪ್ರಕೃತಿ ಇವುಗಳ ನಡುವೆ ಇಂತಹ ರಾಜೀಮಾಡಿಕೊಳ್ಳುವಿಕೆ ಇರುವುದಿಲ್ಲ.

ನಾವು ವಿಮರ್ಶೆ ಮಾಡಬೇಕಾದ ಕಾರ್ಯ ಈ ವಿಷಯಗಳನ್ನು ನೆನಪಿನಲ್ಲಿ ಇರಿಸಿಕೊಳ್ಳುವುದನ್ನು ಕುರಿತಾಗಿದೆ. ಎಷ್ಟೊಂದನ್ನು ಕೈಕೊಳ್ಳಬೇಕು ಎಂಬುದನ್ನು ನೋಡುವುದು ನಿರಾಶಾವಾದದ ಮನೋಭಾವದಿಂದಲ್ಲ, ಏಕೆಂದರೆ ಮಾರ್ಗ ದೀರ್ಘವಾಗಿದೆ ಹಾಗೂ ಕಠಿಣವಾಗಿದೆ, ಅದನ್ನು ಪವಾಡದ ರೀತಿಯಲ್ಲಿ ಮಾಡಲಿಕ್ಕಾಗುವುದಿಲ್ಲ. ವಿಶಾಲವಾದ, ಬಹಳ ಜಾಗರೂಕತೆಯಿಂದ ಸಂಪೂರ್ಣ–ವಾಗಿ ಮಾಡಿದ ಚಲನೆಯ ಮೂಲಕ ಮಾತ್ರ ಅದನ್ನು ಸಿದ್ಧಿಸಿಕೊಳ್ಳಬಹುದು. ಪ್ರತಿಯೊಂದು ಹೆಜ್ಜೆ ಒಂದು ಗುರುತೆಂದು, ಪ್ರೋತ್ಸಾಹದ್ದೆಂದು, ದೈವೀ ಆಚೆಗಿರುವುದರತ್ತ ಒಂದು ಹೆಜ್ಜೆ ಎಂದು ಭಾವಿಸಬೇಕು. ಒಂದು ಬದಿಯಲ್ಲಿ ಜಯ ಗಳಿಸಲು ನಿರ್ಧಾರ ಹಾಗೂ ಹುರುಪು ಇವುಗಳ ಕೊರತೆ ಇಲ್ಲದೆ ಇರಬೇಕು, ಇನ್ನೊಂದು ಬದಿಯಲ್ಲಿ ಅವಸರ ಮಾಡುವ ತಾಳ್ಮೆ ಕಳೆದುಕೊಳ್ಳುವಿಕೆ ಮತ್ತು ನಿರಾಶೆ ಇರಕೂಡದು. ಆದರೆ ದೈವೀ ಸಂಕಲ್ಪಕ್ಕಾಗಿ ಸ್ಥಿರ ನಿಶ್ಚಿತತೆ ಇರಬೇಕು – "ನಮ್ಮಲ್ಲಿ ಅದನ್ನು ಕೈಕೊಳ್ಳಲಾಗುವುದು" ಎಂಬ ಸಂಕಲ್ಪ ಮತ್ತು "ಅದನ್ನು ನಮಗಾಗಿ ಕೈಕೊಳ್ಳಬಹುದು, ಅದರಿಂದಾಗಿ ಜಗತ್ತಿಗಾಗಿ ಅದನ್ನು ಕೈಕೊಳ್ಳುವಂತಾಗಬಹುದು" ಎಂಬ ಅಭೀಪ್ಸೆ ಹೊಂದಿರಬೇಕು.

**ಅದೇ ಗ್ರಂಥ, ಪು. 326, 15–8–1925**

*

**ಭೌತಿಕ ಜಗತ್ತಿನ ಪ್ರತಿರೋಧ**

**ಅನುಯಾಯಿ :** *ನಮ್ಮ ಪ್ರಯತ್ನಗಳ ಯಶಸ್ಸನ್ನು ಕುರಿತು ನೀವು ಏನು ಹೇಳುವಿರಿ?*

**ಶ್ರೀ ಅ :** ನಾನು ನೈತಿಕವಾಗಿ ನಿಶ್ಚಿತತೆಯಿಂದಿದ್ದೇನೆ, ಆದರೆ ಕಾರ್ಯತಃ (practically) ನನಗೆ ನಿಶ್ಚಿತತೆ ಇಲ್ಲ. ಏಕೆಂದರೆ ಭೌತಿಕ ಜಗತ್ತು ಪಶ್ಚಾತ್ತಾಪ–ಪಡದಂತಹದು. ಮುಖ್ಯ ಅಡೆತಡೆಯೊಂದಿದೆ, ಅದು ಭೌತಿಕ ಜಗತ್ತಿನ ದುಸ್ತರವಾದ ಪ್ರತಿರೋಧ.

**ಅನುಯಾಯಿ :** *ಪಶ್ಚಾತ್ತಾಪಪಡದಂತಹದು ಎಂದು ನೀವು ಹೇಳುವುದರ ಅರ್ಥವೇನು?*

**ಶ್ರೀ ಅ :** ಭಗವಂತನಿಗಾಗಿ ಇಲ್ಲವೆ ದೈವೀ ಜೀವನಕ್ಕಾಗಿ ಭೌತಿಕ ಜಗತ್ತು ಎಳ್ಳಷ್ಟೂ ಕಾಳಜಿ ಮಾಡುವುದಿಲ್ಲ.

**ಅನುಯಾಯಿ :** *ಭೌತಿಕ ಜಗತ್ತಿನ ಪ್ರತಿರೋಧ ಎಂದು ನೀವು ಹೇಳುವುದರ ಅರ್ಥವೇನು?*


**ಶ್ರೀ ಅ :** ಉಚ್ಚತರವಾದ ಏನೋ ಒಂದಕ್ಕೆ ತೆರೆದುಕೊಳ್ಳಲು ಮತ್ತು ರೂಢಿಗತ–ವಾದದ್ದಕ್ಕಿಂತ ಭಿನ್ನವಾದ ಏನನ್ನಾದರೂ ಕಲ್ಪಿಸಿಕೊಳ್ಳಲು ಅದಕ್ಕೆ ಅಸಾಧ್ಯವಾಗಿ–ರುತ್ತದೆ. ನಾನು ಮಾನವ ಸತ್ತೆಯ ಮಬ್ಬುತನ ಮತ್ತು ಹೆಡ್ಡತನ ಇವುಗಳನ್ನು ಕುರಿತು ಹೇಳುತ್ತಿದ್ದೇನೆ. ಭೌತಿಕ ಜಗತ್ತಿನ ಪ್ರತಿರೋಧ ಕುರಿತು ಹೇಳಿದಾಗ ಬಾಹ್ಯ ಭೌತದ್ರವ್ಯವನ್ನು ಕುರಿತು ಹೇಳಿರಲಿಲ್ಲ, ಆದರೆ ಸೂಕ್ಷ್ಮ ಭೌತದ್ರವ್ಯ ಕುರಿತು ನಾನು ಹೇಳಿದ್ದೆ. ಸೂಕ್ಷ್ಮ ಹಾಗೂ ಬಾಹ್ಯ ಭೌತದ್ರವ್ಯಗಳಿವೆ, ನಾನು ಭೌತದ್ರವ್ಯದಲ್ಲಿ ಒಳನುಗ್ಗಲಾಗುವುದಿಲ್ಲ ಎಂದು ನಾನು ಹೇಳಿದಾಗ ಅದರರ್ಥ ಸೂಕ್ಷ್ಮ ಭೌತದ್ರವ್ಯ ದೈವೀ ಸತ್ಯವನ್ನು ಒಪ್ಪಿಕೊಂಡಿಲ್ಲ, ಭೌತಿಕ ಮನಸ್ಸು ಉಚ್ಚತರ ಸತ್ಯವನ್ನು ಒಪ್ಪಿಕೊಂಡಿಲ್ಲ ಎಂದಾಗಿರುತ್ತದೆ. ಭೌತಿಕ ದೇಹದ ಜೀವಕೋಶಗಳಲ್ಲಿ ಅವುಗಳದೇ ಒಂದು ಪ್ರಜ್ಞೆಯಿದೆ ಮತ್ತು ಆ ಪ್ರಜ್ಞೆ ದೈವೀ ಸತ್ಯಕ್ಕೆ ತೆರೆದುಕೊಳ್ಳಬೇಕಾಗಿದೆ. ಆದರೆ ಭೌತಿಕ ಮನಸ್ಸು ಪರಿವರ್ತನೆಯ ದೈವೀ ಸಾಧ್ಯತೆಯನ್ನು ನೆಚ್ಚಿಕೊಳ್ಳುವುದಿಲ್ಲ. ಮತ್ತು ನಾನು ಈಗಾಗಲೆ ಹೇಳಿದ ಹಾಗೆ ಪ್ರತಿಯೊಂದನ್ನೂ ಕೈಕೊಳ್ಳದೆ ಇರುವವರೆಗೆ ಏನನ್ನೂ ಕೈಕೊಳ್ಳಲಾಗಿರುವುದಿಲ್ಲ.

**ಅನುಯಾಯಿ :** *ನೈತಿಕವಾಗಿ ನೀವು ನಿಶ್ಚಿತತೆಯನ್ನು ಹೊಂದಿದ್ದು ಹೇಗೆ?*

**ಶ್ರೀ ಅ :** ಏಕೆಂದರೆ ಭೌತಿಕದಲ್ಲಿ ಹೆಚ್ಚಿನ ಸಾಮರ್ಥ್ಯ ಕೆಳಗಿಳಿದು ಬರುವುದನ್ನು ನಾನು ನೋಡುತ್ತಿದ್ದೇನೆ ಮತ್ತು ಭೌತಿಕ ಸತ್ತೆ ಎಚ್ಚತ್ತುಕೊಳ್ಳುವ ಕುರುಹುಗಳನ್ನು ತೋರಿಸುತ್ತಿದೆ.

**ಅದೇ ಗ್ರಂಥ, ಪು. 328–29** **– ಶ್ರೀ ಅರವಿಂದರು**

*



**ಯೋಗದ ಗುರಿ ಜೀವನವನ್ನು ತಿರಸ್ಕರಿಸುವುದಾಗಿರುವುದಿಲ್ಲ, ಆದರೆ ನೆರವೇರಿಕೆ ಕಂಡುಕೊಳ್ಳುವುದಾಗಿರುತ್ತದೆ**

(ಸಾಧಕ, ಮೋತಿಬಾಬು ಅವರಿಗೆ ಶ್ರೀ ಅರವಿಂದರು ಶಂಕರಾಚಾರ್ಯರಿಗೆ ಹತ್ತಿರವಾಗುತ್ತಿದ್ದಾರೆ ಎಂದು ತೋರಿಬರುತ್ತಿರುವ ಹಾಗಿದೆ ಎಂದು ಹೇಳಿದ್ದ. 15–8–1923 ರಂದು ಆ ಸಾಧಕ ಶ್ರೀ ಅರವಿಂದರನ್ನು ಭೇಟಿ ಮಾಡಿದಾಗ ಅವರು ಸಾಧಾರಣ ಜೀವನ ಅಜ್ಞಾನದಿಂದ ತುಂಬಿಕೊಂಡಿರುವುದರಿಂದ ಅದನ್ನು ಒಪ್ಪಿಕೊಳ್ಳಬಾರದು ಮತ್ತು ಇದಕ್ಕೆ ಇದ್ದ ಏಕೈಕ ಪರಿಹಾರ ಸಾಮಾನ್ಯ ಜೀವನವನ್ನು ತಿರಸ್ಕರಿಸುವುದಾಗಿದೆ ಎಂದು ಹೇಳಿದ್ದರು. ಈ ಸಿದ್ಧಾಂತವನ್ನು ಶಂಕರಾಚಾರ್ಯರು ಬೋಧಿಸಿದ್ದರು. ಹಾಗಾಗಿ ಆ ಸಾಧಕನ ಪ್ರಕಾರ ಶ್ರೀ ಅರವಿಂದರು ಶಂಕರಾಚಾರ್ಯರಿಗೆ ಹತ್ತಿರವಾಗಿದ್ದಾರೆ ಮತ್ತು ಅವರಿಂದ ಕಲಿತುಕೊಳ್ಳಬಹುದಾದುದು ಅತ್ಯಲ್ಪವಾಗಿದೆ.)

**ಶ್ರೀ ಅರವಿಂದರು :** ಅದು ನನ್ನ ಯೋಗವನ್ನು ಪೂರ್ತಿ ತಪ್ಪಾಗಿ ಓದಿದ ಹಾಗಿದೆ, ಆ ಯೋಗದ ಗುರಿ ಜೀವನವನ್ನು ತಿರಸ್ಕರಿಸುವುದಾಗಿಲ್ಲ, ಆದರೆ ಅದರ ನೆರವೇರಿಕೆ ಕಂಡುಕೊಳ್ಳುವುದಾಗಿದೆ. ಸಾಧಾರಣ ಜೀವನ ಅಜ್ಞಾನದಿಂದ ತುಂಬಿಕೊಂಡಿದೆ, ಆದರೆ ಅಜ್ಞಾನವಿಲ್ಲದೆ ಜೀವಿಸುವುದು ಅಸಾಧ್ಯವಾದದ್ದೇನಲ್ಲ.

ವಾಸ್ತವದಲ್ಲಿ ಪೂರ್ಣ ಪ್ರಜ್ಞೆಯಿರುವ ಜೀವನ ಉತ್ಕ್ರಾಂತಿಯ ಅರ್ಥವಾಗಿದೆ. ಭೌತದ್ರವ್ಯದಲ್ಲಿ ಮತ್ತು ಪ್ರಾಣದಲ್ಲಿ ಅಚೇತನವಿದೆ, ನಾವು ಪ್ರಜ್ಞಾಪೂರ್ಣ ಜೀವನದತ್ತ ಪ್ರಗತಿ ಸಾಧಿಸುತ್ತಿದ್ದಾಗ ಅದು ದೊಡ್ಡ ಅಡೆತಡೆಗಳನ್ನುಂಟು ಮಾಡುತ್ತದೆ, ಈ ಅಡೆತಡೆಗಳನ್ನು ಅತಿಮನಸ್ಸಿನ ಮೂಲಕ ಜಯಿಸಬೇಕು. ಅಲ್ಲಿ ಹಲವಾರು ವಕ್ರ ರೇಖೆಗಳು ವರ್ತುಲಗಳು ಮೇಲೆ, ಕೆಳಗೆ ಬರುತ್ತಿರುತ್ತವೆ. ಅವುಗಳನ್ನು ತಿಳಿದುಕೊಳ್ಳಬೇಕು ಮತ್ತು ಸಾಧಾರಣ ಜೀವನವನ್ನು ಪರಿವರ್ತಿಸುವುದಕ್ಕೆ ಉಪಯೋಗಿಸಬೇಕು. ವಿಜ್ಞಾನ ಉಚ್ಚತರ ಮಾನಸಿಕ ಜ್ಞಾನ ಎಂದು ಶಂಕರಾಚಾರ್ಯರು ತಿಳಿದುಕೊಂಡಿದ್ದರು, ಆದರೆ ಇದು ಇನ್ನೂ ಮನಸ್ಸಿಗೆ ಸೇರಿದ ವಿಷಯವಾದದ್ದರಿಂದ ಅವರು ವಿಜ್ಞಾನವನ್ನು ತಿರಸ್ಕರಿಸಿದರು. ಪ್ರಕಟಣೆ ಮಾಯೆ ಎಂದು ತಿಳಿದುಕೊಂಡಿದ್ದ ಅವರು ಅದರಲ್ಲಿ ನಂಬಿಕೆಯನ್ನಿರಿಸಿರಲಿಲ್ಲ. ಪ್ರಕಟಣೆ ದೈವೀ ಸಾಮರ್ಥ್ಯದ ಸತ್ಯವಾಗಿರುವುದರಿಂದ ಅದನ್ನು ಒಪ್ಪಿಕೊಳ್ಳಬೇಕು. ಆ ಸಾಮರ್ಥ್ಯ ನಮ್ಮಲ್ಲಿ ಕಾರ್ಯಕೈಕೊಳ್ಳುತ್ತಿದೆ ಮತ್ತು ನಾವು ಆ ಸಾಮರ್ಥ್ಯದೊಡನೆ ನಮ್ಮನ್ನು ಗುರುತಿಸಿಕೊಳ್ಳಬಹುದು, ಮತ್ತು ಹೀಗೆ ಪೃಥ್ವಿಯ ಮೇಲೆ ಭಗವಂತನ ಪ್ರಕಟಣೆಯಲ್ಲಿ ಭಾಗವಹಿಸಬಹುದು. ಕೆಲಕಾಲದವರೆಗೆ ನನಗೂ ಕೂಡ ವಿಜ್ಞಾನವನ್ನು ಅರ್ಥಮಾಡಿಕೊಳ್ಳಲಾಗಿರಲಿಲ್ಲ. ಉಚ್ಚತರ ಮಾನಸಿಕ ಪ್ರಜ್ಞೆಯೆಂದು ವಿಜ್ಞಾನವನ್ನು ತಪ್ಪಾಗಿ ತಿಳಿದುಕೊಂಡಿದ್ದೆ.

ಧ್ಯಾನದಲ್ಲಿರುವಾಗ ಉಚ್ಚ ಪ್ರಜ್ಞೆಯನ್ನು ಸಿದ್ಧಿಸಿಕೊಂಡರೆ ಅದಷ್ಟೇ ಸಾಕಾಗದು, ಆದರೆ ಸಾಮಾನ್ಯ ಕಾರ್ಯಕೈಕೊಳ್ಳುತ್ತಿರುವಾಗ ಆ ಪ್ರಜ್ಞೆ ಕಾರ್ಯ ಮಾಡುತ್ತಿರುವುದರ ಸಾನ್ನಿಧ್ಯದ ಭಾವನೆ ಬರುವಂತಾಗಬೇಕು. ಆದರೆ ಅತಿಮನಸ್ಸು ಸ್ವತಃ ದೈವೀ ಪ್ರಜ್ಞೆಯಾಗಿರುತ್ತದೆ, ಅದು ವಿಶ್ವದ ಚಲನೆಗಳನ್ನು ವ್ಯವಸ್ಥೆಗೆ ಒಳಪಡಿಸುತ್ತದೆ ಮತ್ತು ಅವುಗಳಿಗೆ ಮಾರ್ಗದರ್ಶನ ಮಾಡುತ್ತದೆ. ಈ ಪ್ರಜ್ಞೆ ನಮ್ಮ ಸಾಮಾನ್ಯ ಸ್ವಭಾವದ್ದಾಗುವಂತೆ ಮಾಡಬೇಕು ಮತ್ತು ಮನಸ್ಸು, ಪ್ರಾಣ ಹಾಗೂ ದೇಹ ಇವುಗಳಲ್ಲಿಳಿದು ಬರಲು ಹಾಗೂ ಇವುಗಳನ್ನು ಪರಿವರ್ತನೆಗೆ ಒಳಪಡಿಸಲು ಅನುವು ಮಾಡಿಕೊಡಬೇಕು.

ಮಾನವ ಪ್ರಯತ್ನ ಯಾವ ಉಪಯೋಗಕ್ಕೂ ಬರುವುದಿಲ್ಲ. ಸಂಪೂರ್ಣ ಶರಣಾಗತಿ ಇರಬೇಕು, ಅದರಿಂದಾಗಿ ಉಚ್ಚತರ ಸಾಮರ್ಥ್ಯ ಕೆಳಗಿಳಿದು ಬರುವುದು ಮತ್ತು ಕಾರ್ಯಕೈಕೊಳ್ಳುವುದು. ಅತಿಮಾನಸ ಪ್ರಜ್ಞೆಯನ್ನು ಸಿದ್ಧಿಸಿಕೊಳ್ಳುವುದು ಕಷ್ಟಕರವಾಗಿರುವುದಿಲ್ಲ, ಆದರೆ ಅದು ಕಾರ್ಯಕೈಕೊಳ್ಳುವಂತೆ

ಮಾಡುವುದು ಬಹಳ ಕಠಿಣವಾಗಿರುತ್ತದೆ. ಹಾಗಾಗಿ ಹಲವಾರು ಶ್ರೇಷ್ಠ ಆತ್ಮಗಳು ಈ ಪ್ರಜ್ಞೆಯನ್ನು ಸಿದ್ಧಿಸಿಕೊಂಡ ನಂತರ ಮನಸ್ಸಿನ ಮೂಲಕ ಕಾರ್ಯ ಕೈಕೊಂಡರು ಮತ್ತು ಅದನ್ನು ಮನಸ್ಸಿನ ಭಾಷೆಯಾಗುವಂತೆ ಮಾಡಿದರು. ಹಾಗಾಗಿ ಅತಿಮಾನಸ ಪ್ರಜ್ಞೆ ಅದರ ನಿಜವಾದ ಸ್ವಭಾವದಲ್ಲಿ ಕಾರ್ಯ ಕೈಕೊಳ್ಳುತ್ತಿರುವುದರ ಅನುಭವ ಪಡೆಯಲು ಶಕ್ತರಾಗಲಿಲ್ಲ. ಇಲ್ಲಿಯವರೆಗೆ ಯಾರೂ ಈ ವಿಧಾನವನ್ನು ಕುರಿತು ಪ್ರಯತ್ನ ಕೈಕೊಂಡಿಲ್ಲ. ...

**ಚಂಪಕಲಾಲ ಮಾತನಾಡುತ್ತಾರೆ. (Champaklal Speaks, pp. 220-21)**

*

ಶ್ರೀಕೃಷ್ಣ ಅಧಿಮಾನಸದ ಸಾಧ್ಯತೆಯನ್ನು ಅದರ ಸ್ಥಿರ ಹಾಗೂ ಕ್ರಿಯಾಶೀಲ ಬದಿಗಳೊಂದಿಗೆ ತೆರೆದಿರಿಸಿದ. ಬುದ್ಧ ಪರಮೋಚ್ಚನಲ್ಲಿ ಮನಸ್ಸಿನಿಂದ ನಿರ್ವಾಣದತ್ತ ವೇಗದಿಂದ ಸಾಗಲು ಪ್ರಯತ್ನಿಸಿದ, ಅವನ ನಂತರ ಶಂಕರಾಚಾರ್ಯರು ಅದನ್ನು ಇನ್ನೊಂದು ರೀತಿಯಲ್ಲಿ ಕೈಕೊಂಡರು. ಇತರ ಹಂತಗಳ ಮೇಲೆ ಜಿಗಿದು ಸಾಗಿಹೋಗುವುದನ್ನು ಕುರಿತು ಮತ್ತು ನಾಮರಹಿತ ಆಕಾರರಹಿತ ಪರಿಪೂರ್ಣತೆಯನ್ನು ತಲುಪುವುದರ ಬಗ್ಗೆ ಅವರಿಬ್ಬರಲ್ಲಿ ಸಹಮತವಿದೆ. ಇನ್ನೊಂದೆಡೆಯಲ್ಲಿ ಶ್ರೀಕೃಷ್ಣ ಉತ್ಕ್ರಾಂತಿಯ ಸಾಮಾನ್ಯ ಪದ್ಧತಿಯ ಪ್ರಕಾರ ಕರೆದೊಯ್ಯುತ್ತಿದ್ದ. ಮುಂದಿನ ಸಾಮಾನ್ಯ ಹೆಜ್ಜೆ ಆಕಾರರಹಿತ ದೈವೀ ಪರಿಪೂರ್ಣತೆಯತ್ತ ಅಲ್ಲ, ಆದರೆ ಅತಿಮಾನಸದತ್ತ ಇದೆ. ವೇಗವಾಗಿ ಜಿಗಿದು ಹೋಗುವುದರಲ್ಲಿ ಬುದ್ಧ ಮತ್ತು ಶಂಕರಾಚಾರ್ಯ ಇವರು ಮುಕ್ತಿಯ ಕ್ರಿಯಾಶೀಲ ಬದಿಯನ್ನು ಕತ್ತರಿಸಿ ತೆಗೆದು ತಪ್ಪು ಮಾಡಿದರು. ಹಾಗಾಗಿ ಕಲ್ಕಿಯಿಂದ ತಿದ್ದುಪಡೆಯಾಗಬೇಕಾಗಿದೆ.

**CWSA, 28/488** **– ಶ್ರೀ ಅರವಿಂದರು**

*

## ಅಗಸ್ಟ 15, 1947: ಭಾರತಕ್ಕೆ ಒಂದು ಸಂದೇಶ

### ಹಳೆಯ ಯುಗದ ಕೊನೆ, ಹೊಸ ಯುಗದ ಪ್ರಾರಂಭ

ಅಗಸ್ಟ 15 ಸ್ವತಂತ್ರ ಭಾರತದ ಜನ್ಮದಿನ. ಅದು ಹಳೆಯ ಯುಗದ ಕೊನೆಯನ್ನು ಮತ್ತು ಹೊಸ ಯುಗದ ಪ್ರಾರಂಭವನ್ನು ಸೂಚಿಸುತ್ತದೆ. ಆದರೆ ಅದಕ್ಕಿರುವ ಪ್ರಾಮುಖ್ಯತೆ ಕೇವಲ ನಮಗಾಗಿ ಇಲ್ಲ, ಆದರೆ ಏಶಿಯಾ ಮತ್ತು

ಇಡೀ ಜಗತ್ತಿಗಾಗಿ ಇದೆ, ಏಕೆಂದರೆ ಅಪರಿಮಿತ ಸಾಧ್ಯಗೊಳಿಸುವ ಹೊಸ ಸಾಮರ್ಥ್ಯವಿರುವ ದೇಶಗಳ ಸೌಹಾರ್ದತೆಯಲ್ಲಿ ಪ್ರವೇಶ ಪಡೆಯುವುದನ್ನು ಅದು ಸೂಚಿಸುತ್ತದೆ, ಈ ಪ್ರವೇಶ ಮನುಕುಲದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಭವಿಷ್ಯತ್ತನ್ನು ನಿರ್ಧರಿಸುವುದರಲ್ಲಿ ಶ್ರೇಷ್ಠ ಪಾತ್ರ ವಹಿಸುತ್ತದೆ. ವೈಯಕ್ತಿಕವಾಗಿ ನನಗೆ ಅದು, ಸ್ವಾಭಾವಿಕವಾಗಿ, ಸಂತೋಷಗೊಳಿಸುವಂತಹದು, ಏಕೆಂದರೆ ಅದು ನನ್ನದೇ ಜನ್ಮದಿನವಾಗಿತ್ತು, ಜೀವನ ಕುರಿತು ನನ್ನ ಪರಮ ಸತ್ಯ(gospel)ವನ್ನು ಒಪ್ಪಿಕೊಂಡವರು ಪ್ರತಿವರ್ಷ ವಿಧಿವತ್ತಾಗಿ ಜನ್ಮ-ದಿನಾಚರಣೆಯನ್ನು ಆಚರಿಸುತ್ತಾರೆ. ಆದ್ದರಿಂದ ಈ ವಿಶಾಲ ಪ್ರಾಮುಖ್ಯತೆಯನ್ನು ಅದು ಹೊಂದಿರಬೇಕು. ಅನುಭಾವಿಯೆಂದಾಗಿ ನಾನು ಈ ಗುರುತಿಸುವಿಕೆಯನ್ನು ಏಕಕಾಲೀನತೆ ಎಂದಾಗಲಿ ಇಲ್ಲವೆ ಅದೃಷ್ಟದ ಆಕಸ್ಮಿಕ ಎಂದಾಗಲಿ ಭಾವಿಸುವುದಿಲ್ಲ, ಆದರೆ ಅದನ್ನು ದೈವೀ ಸಾಮರ್ಥ್ಯದ ಅನುಮತಿ ಮತ್ತು ಮುದ್ರೆ ಎಂದು ಭಾವಿಸುತ್ತೇನೆ. ನಾನು ಯಾವ ಕಾರ್ಯದಿಂದ ಜೀವನವನ್ನು ಪ್ರಾರಂಭಿಸಿದೆನೋ ಅದನ್ನು ಅನುಸರಿಸುವ ನನ್ನ ಹೆಜ್ಜೆಗಳಿಗೆ ಅ ದೈವೀ ಸಾಮರ್ಥ್ಯ ಮಾರ್ಗದರ್ಶನ ಮಾಡುತ್ತ ಬಂದಿದೆ. ನನ್ನ ಜೀವನ ಕಾಲದಲ್ಲಿ ನೆರವೇರಿಕೆ ಕಂಡುಕೊಳ್ಳುವವು ಎಂದು ಭರವಸೆ ತಾಳಿದ್ದ ಜಗತ್ತಿನ ಚಲನೆಗಳಿದ್ದವು, ನಾನು ಭರವಸೆ ತಳೆದ ಕಾಲದಲ್ಲಿ ಅವು ಅಸಾಧ್ಯ ಕನಸುಗಳ ಹಾಗೆ ಕಂಡುಬರುತ್ತಿದ್ದವು, ಈ ದಿನ ನನ್ನ ಅವಲೋಕನಕ್ಕೆ ಬಂದುದೆಂದರೆ ಅವು ಫಲಪ್ರದತೆಯನ್ನು ಸಮೀಪಿಸುತ್ತಿವೆ ಇಲ್ಲವೆ ಸಿದ್ಧಿಯನ್ನು ಪಡೆಯುವ ಮಾರ್ಗದಲ್ಲಿ ಆರಂಭಗೊಂಡಿವೆ ಎಂಬುದಾಗಿದೆ. ಈ ಶ್ರೇಷ್ಠ ಸಂದರ್ಭದಲ್ಲಿ ನನ್ನಿಂದ ಸಂದೇಶವೊಂದನ್ನು ಕೇಳಲಾಗಿದೆ, ಅದರೆ ಬಹುಶಃ ನಾನು ಅದನ್ನು ಕೊಡುವುದಕ್ಕೆ ಹೆಚ್ಚು ಕಡಿಮೆ ಸೂಕ್ತವಲ್ಲದ ಸ್ಥಾನದಲ್ಲಿರುವೆ. ನನ್ನ ಬಾಲ್ಯ ಕಾಲದಲ್ಲಿ ಹಾಗೂ ತಾರುಣ್ಯದಲ್ಲಿ ಕಲ್ಪನೆ ಮಾಡಿಕೊಂಡಿದ್ದ ಗುರಿಗಳನ್ನು ಹಾಗೂ ಆದರ್ಶಗಳನ್ನು ಕುರಿತು ಮಾತ್ರ ಸಾರಿ ಹೇಳಬಲ್ಲೆ. ಅವು ಈಗ ಈಡೇರಿಕೆ ಕಂಡುಕೊಳ್ಳಲು ಪ್ರಾರಂಭಿಸಿವೆ, ಅವು ಭಾರತದ ಸ್ವಾತಂತ್ರಕ್ಕೆ ಪ್ರಸ್ತುತ(relevent)ವಾಗಿವೆ, ಏಕೆಂದರೆ ನನ್ನ ನಂಬಿಕೆಯ ಪ್ರಕಾರ ಅವು ಭಾರತ ಭವಿಷ್ಯತ್ತಿನಲ್ಲಿ ಕೈಕೊಳ್ಳಬೇಕಾದ ಕಾರ್ಯದ ಭಾಗಗಳಾಗಿವೆ, ಅವುಗಳಲ್ಲಿ ಭಾರತ ಮುಂದಾಳುತನ ವಹಿಸುವ ಸ್ಥಾನದಲ್ಲಿ ಇರಲೇಬೇಕು. ಭಾರತ ಮೇಲಕ್ಕೇಳುತ್ತಿದೆ, ಅದು ತನ್ನದೇ ಪ್ರಾಪಂಚಿಕ ಆಸಕ್ತಿಗಳನ್ನು ಎಂದರೆ ವಿಸ್ತರಿಸಿಕೊಳ್ಳುವಿಕೆ, ಶ್ರೇಷ್ಠತೆ ಪಡೆಯುವಿಕೆ ಸಾಮರ್ಥ್ಯ ಹಾಗೂ ಸಮೃದ್ಧಿ ಪಡೆಯುವಿಕೆ ಇವುಗಳ ಸೇವೆಗಾಗಿ

ಮಾತ್ರವಲ್ಲ, ಇತರರ ಮೇಲೆ ಪ್ರಾಬಲ್ಯ ಸಾಧಿಸುವುದಕ್ಕಾಗಿ ಅಲ್ಲ, ಆದರೆ ಜಗತ್ತಿಗಾಗಿ ಹಾಗೂ ಭಗವಂತನಿಗಾಗಿ ಸಹಾಯಕವೆಂದು, ಇಡೀ ಮನುಕುಲಕ್ಕೆ ನೇತಾರನ ರೀತಿಯಲ್ಲಿ ಇರುವುದಕ್ಕಾಗಿ ಎಂದು ಜೀವಿಸುವುದಾಗಿದೆ. ಆ ಗುರಿಗಳು ಹಾಗೂ ಆದರ್ಶಗಳು ಅವುಗಳ ಸ್ವಾಭಾವಿಕ ಕ್ರಮದಲ್ಲಿ ಇದ್ದುದು ಹೀಗೆ: ಭಾರತದ ಸ್ವಾತಂತ್ರ್ಯವನ್ನು ಹಾಗೂ ಏಕತೆಯನ್ನು ಸಿದ್ಧಿಸಿಕೊಳ್ಳುವುದಕ್ಕೆ ಒಂದು ಕ್ರಾಂತಿ, ಏಶಿಯಾದ ಸ್ವಾತಂತ್ರ್ಯ ಹಾಗೂ ಪುನರ್ಜಾಗೃತಿ, ಮಾನವ ನಾಗರಿಕತೆಯ ಪ್ರಗತಿಗಾಗಿ ವಹಿಸಿದ ಶ್ರೇಷ್ಠ ಪಾತ್ರದತ್ತ ಮರಳಿ ಹೋಗುವಿಕೆ; ಮನುಕುಲದ ಒಂದು ಹೊಸ, ಶ್ರೇಷ್ಠತರ, ಉಜ್ವಲವಾದ ಹಾಗೂ ಉದಾರವಾದ ಜೀವನದ ಉದಯ, ಅದನ್ನು ಪೂರ್ತಿಯಾಗಿ ಸಿದ್ಧಿಸಿಕೊಳ್ಳುವುದು ಬಾಹ್ಯದಲ್ಲಿ ಜನರ ಪ್ರತ್ಯೇಕ ಅಸ್ತಿತ್ವವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಏಕತ್ರಗೊಳಿಸುವುದರ ಮೇಲೆ ಅವಲಂಬಿಸಿರುತ್ತದೆ, ಹೀಗೆ ಏಕತ್ರಗೊಳಿಸುವಾಗ ಅವರ ರಾಷ್ಟ್ರೀಯ ಜೀವನವನ್ನು ರಕ್ಷಿಸಬೇಕು, ಭದ್ರಗೊಳಿಸಬೇಕು, ಆದರೆ ಅವರನ್ನು ಎಲ್ಲದಕ್ಕಿಂತಲೂ ಮುಖ್ಯವಾಗಿರುವ ಮತ್ತು ಪರಾಕಾಷ್ಠೆ ತಲುಪುವ ಏಕತೆಯಲ್ಲಿ ಒಟ್ಟಿಗೆ ಎಳೆದು ತರಬೇಕು; ಇಡೀ ಮನುಕುಲಕ್ಕೆ ಭಾರತ ತನ್ನ ಆಧ್ಯಾತ್ಮ ಜ್ಞಾನವನ್ನು ಹಾಗೂ ಆಧ್ಯಾತ್ಮೀಕರಣಕ್ಕೆ ಸಾಧನವನ್ನು ಕಾಣಿಕೆ ರೂಪದಲ್ಲಿ ಕೊಡಬೇಕು; ಕೊನೆಯದಾಗಿ ಉತ್ಕ್ರಾಂತಿಯಲ್ಲಿ ಹೊಸ ಹೆಜ್ಜೆ ಇರಿಸಬೇಕು. ಪ್ರಜ್ಞೆಯನ್ನು ಉಚ್ಚ ಸ್ತರಕ್ಕೆ ಮೇಲಕ್ಕೆತ್ತುವುದರ ಮೂಲಕ ಆ ಉತ್ಕ್ರಾಂತಿ ಅಸ್ತಿತ್ವದ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದನ್ನು ಪ್ರಾರಂಭಿಸುತ್ತದೆ, ಮನುಷ್ಯರು ಯೋಚಿಸಲು ಮತ್ತು ವೈಯಕ್ತಿಕ ಪರಿಪೂರ್ಣತೆ ಮತ್ತು ಪರಿಪೂರ್ಣ ಸಮಾಜ ಇವುಗಳನ್ನು ಕುರಿತು ಕನಸು ಕಾಣಲು ಪ್ರಾರಂಭಿಸಿದಂದಿನಿಂದ ಆ ಸಮಸ್ಯೆಗಳು ಅವರನ್ನು ಗೋಜಲಾಗಿಸಿವೆ ಹಾಗೂ ಕೆರಳಿಸಿವೆ.

*

## ಭಾರತ ಸ್ವತಂತ್ರವಾಗಿದೆ ಆದರೆ ಇನ್ನೂ ಏಕತ್ರಗೊಂಡಿಲ್ಲ

ಭಾರತ ಸ್ವತಂತ್ರವಾಗಿದೆ, ಆದರೆ ಇನ್ನೂ ಏಕತೆಯನ್ನು ಸಿದ್ಧಿಸಿಕೊಂಡಿಲ್ಲ, ಆ ಸ್ವಾತಂತ್ರ್ಯ ಸೀಳಿ ಹೋದದ್ದು, ಮುರಿದು ಬಿದ್ದದ್ದು ಆಗಿದೆ. ಒಂದು ಕಾಲವಿತ್ತು ಆಗ ಬ್ರಿಟಿಷರ ಆಡಳಿತದ ಮೊದಲಿದ್ದ, ಪ್ರತ್ಯೇಕ ಸಂಸ್ಥಾನಗಳುಳ್ಳ ಅಸ್ತವ್ಯಸ್ತತೆಯ ಸ್ಥಿತಿಗೆ ಮರಳಿ ಬೀಳುವುದೇನೋ ಎಂದು ಬಹುಮಟ್ಟಿಗೆ ತೋರಿಬರುತ್ತಿತ್ತು. ಸುದೈವದಿಂದ ಈಗ ಈ ಹಾನಿಕಾರಕ ಹಿಂದಿನ ಸ್ಥಿತಿಗೆ ಬಿದ್ದುಬಿಡುವುದನ್ನು ತಪ್ಪಿಸಿಕೊಳ್ಳುವ ಬಲವತ್ತರವಾದ ಸಾಧ್ಯತೆ ಅಭಿವೃದ್ಧಿಗೊಂಡಿದೆ.

ಸಂವಿಧಾನ ಮಂಡಳಿಯ ಜಾಣತನ ಮತ್ತು ಪರಿಣಾಮ ಬೀರುವ ರಾಜ್ಯನೀತಿ ಇವುಗಳಿಂದಾಗಿ ದಲಿತ ವರ್ಗದವರ ಸಮಸ್ಯೆ, ಒಡಕಿಗೆ ಉತ್ತೇಜನ ನೀಡದೆ, ಬಿರುಕು ಬಿಡುವಂತೆ ಮಾಡದೆ ಪರಿಹಾರ ಕಂಡುಕೊಳ್ಳುವುದು. ಆದರೆ ಹಿಂದುಗಳು ಮತ್ತು ಮುಸ್ಲಿಮರು ಇವರ ನಡುವಿರುವ ಹಳೆಯ ಜಾತೀಯ ವಿಭಜನೆ ದೇಶದ ಶಾಶ್ವತ ರಾಜಕೀಯ ವಿಭಜನೆಯ ಆಕಾರದಲ್ಲಿ ಗಟ್ಟಿಗೊಂಡಿದೆ. ಕಾಂಗ್ರೆಸ್ ಹಾಗೂ ರಾಷ್ಟ್ರ ನಿರ್ಣಯ ತೆಗೆದುಕೊಂಡ ವಾಸ್ತವತೆಯನ್ನು ಎಂದೆಂದಿಗೂ ನಿರ್ಣಯಿಸಲಾದ ವಾಸ್ತವತೆ ಎಂದು ಒಪ್ಪಿಕೊಳ್ಳುವುದಿಲ್ಲ ಮತ್ತು ಅದು ತಾತ್ಕಾಲಿಕ ಅನುಕೂಲಕ್ಕಾಗಿದೆಯಷ್ಟೆ ಎಂಬ ಭರವಸೆಯನ್ನು ಹೊಂದಲಾಗಿದೆ. ಅದು ಉಳಿದುಕೊಂಡರೆ ಭಾರತ ಗಂಭೀರವಾಗಿ ದುರ್ಬಲವಾಗಬಹುದು, ಕುಂಟುವಂತಾಗಬಹುದು, ಪ್ರಜಾಜೀವನದ ಹೋರಾಟ ಯಾವಾಗಲೂ ಸಾಧ್ಯವಾಗುವ ರೀತಿಯಲ್ಲಿ ಉಳಿದುಕೊಳ್ಳಬಹುದು, ಹೊಸ ಮುತ್ತಿಗೆಗೆ ಒಳಗಾಗಿ ವಿದೇಶಿಯರು ವಿಜಯಿಗಳಾಗಬಹುದು. ದೇಶದ ವಿಭಜನೆ ಹೊರಟು ಹೋಗಬೇಕು. ಅದನ್ನು ಕುರಿತು ಇರುವ ಉದ್ವಿಗ್ನತೆಯನ್ನು ನಿಧಾನಗೊಳಿಸು–ವುದರ ಮೂಲಕ, ಶಾಂತಿ ಹಾಗೂ ಸಾಮರಸ್ಯ ಇವುಗಳ ಆವಶ್ಯಕತೆಯನ್ನು ಪ್ರಗತಿಪರವಾಗಿ ಅರಿತುಕೊಳ್ಳುವುದರ ಮೂಲಕ, ಸರ್ವಸಾಮಾನ್ಯ ಹಾಗೂ ಒಟ್ಟುಗೂಡಿ ಯೋಜಿಸಿದ ಕಾರ್ಯದ ಸತತ ಆವಶ್ಯಕತೆಯ ಮೂಲಕ, ಆ ಉದ್ದೇಶಕ್ಕಾಗಿ ಏಕತೆಯು ಉಪಕರಣವಾಗುವುದರ ಮೂಲಕ ಭರವಸೆ ಹೊಂದಬಹುದು. ಈ ರೀತಿಯಲ್ಲಿ ಏಕತೆ ಯಾವುದೇ ರೂಪದಡಿಯಲ್ಲಿ ಉಂಟಾಗಬಹುದು – ನಿಖರವಾದ ರೂಪಕ್ಕೆ ವ್ಯಾವಹಾರಿಕ ಮೌಲ್ಯವಿರಬಹುದು, ಆದರೆ ಅದಕ್ಕೆ ಮೂಲಭೂತ ಮಹತ್ವವಿರುವುದಿಲ್ಲ, ಆದರೆ ಯಾವುದೇ ಸಾಧನದ ಮೂಲಕ ವಿಭಜನೆ ಹೊರಟು ಹೋಗಬೇಕು, ಅದು ಹೊರಟು ಹೋಗುವುದು. ಏಕೆಂದರೆ ಆ ಏಕತೆಯಿಲ್ಲದೆ ಭಾರತದ ಅದೃಷ್ಟಕ್ಕೆ ಗಂಭೀರವಾದ ಧಕ್ಕೆಯುಂಟಾಗಬಹುದು, ಅಡ್ಡಿ ಉಂಟಾಗಬಹುದು. ಆದರೆ ಆದಾಗಕೂಡದು.

*

**ಏಶಿಯಾದಲ್ಲಿ ಭಾರತದ ಪಾತ್ರ ಮತ್ತು ಮನುಕುಲದ ಏಕೀಕರಣ**

ಏಶಿಯಾ ಮೇಲಕ್ಕೆದ್ದು ಬಂದಿದೆ, ಅದರ ಬಹಳಷ್ಟು ಭಾಗಗಳು ಸ್ವತಂತ್ರವಾಗಿವೆ ಇಲ್ಲವೆ ಸದ್ಯದ ಸಮಯದಲ್ಲಿ ಸ್ವತಂತ್ರಗೊಳ್ಳುತ್ತಿವೆ. ಇನ್ನೂ ಅಧೀನಕ್ಕೊಳಪಟ್ಟ ಭಾಗಗಳು ಸರ್ವ ಪ್ರಯತ್ನ ಮಾಡಿ ಸ್ವಾತಂತ್ರ್ಯಗಳಿಸುವತ್ತ ಹೋರಾಡುತ್ತಿವೆ. ಸ್ವಲ್ಪ ಮಾತ್ರದ್ದಷ್ಟನ್ನು ಕೈಕೊಳ್ಳಬೇಕಾಗಿದೆ, ಅಲ್ಪ ಮಾತ್ರವಾದಷ್ಟನ್ನು

ಕೈಕೊಳ್ಳಬೇಕಾಗಿದೆ ಮತ್ತು ಅದನ್ನು ಇಂದೇ ಆಗಲಿ ನಾಳಿನ ದಿನದಲ್ಲಾಗಲಿ ಕೈಕೊಳ್ಳಲಾಗುವುದು. ಅದರಲ್ಲಿ ಭಾರತ ವಹಿಸಬೇಕಾದ ಪಾತ್ರವಿದೆ ಮತ್ತು ಅದನ್ನು ಎಂತಹ ಚೈತನ್ಯ ಹಾಗೂ ಅರ್ಹತೆಗಳೊಂದಿಗೆ ಭಾಗ ವಹಿಸುತ್ತಿದೆ ಎಂದರೆ ಅದು ತನ್ನ ಸಾಧ್ಯತೆಗಳ ಪರಿಮಾಣ(measure)ವನ್ನು ಹಾಗೂ ರಾಷ್ಟ್ರಗಳ ಸಲಹಾ ಸಮಿತಿಯಲ್ಲಿ ದೊರಕಿಸಬಹುದಾದ ಸ್ಥಾನವನ್ನು ಸೂಚಿಸುತ್ತದೆ.

ಮನುಕುಲದ ಏಕೀಕರಣ ಮಾರ್ಗದಡಿಯಲ್ಲಿದೆ, ಆದಾಗ್ಯೂ ಕೇವಲ ಅಪರಿಪೂರ್ಣ ಪ್ರಾರಂಭದ ಹೆಜ್ಜೆಯಿದೆ, ಸಂಘಟಿತವಾಗಿದ್ದರೂ ಅತ್ಯಂತ ಪ್ರಬಲ ತೊಂದರೆಗಳ ವಿರುದ್ಧ ಹೋರಾಡುತ್ತಿದೆ. ಆದರೆ ಆ ವೇಗ ಅಲ್ಲಿದೆ ಮತ್ತು ಐತಿಹಾಸಿಕ ಅನುಭವವನ್ನು ಮಾರ್ಗದರ್ಶಿ ಎಂದು ತೆಗೆದುಕೊಳ್ಳಬಹುದಾದರೆ, ಅದು ಜಯಗಳಿಸುವವರೆಗೆ ಅನಿವಾರ್ಯವಾಗಿ ಹೆಚ್ಚುತ್ತ ಹೋಗಬೇಕು. ಇಲ್ಲಿಯೂ ಕೂಡ ಭಾರತ ಪ್ರಧಾನ ರೀತಿಯಲ್ಲಿ ಭಾಗವಹಿಸಲು ಪ್ರಾರಂಭಿಸಿದೆ, ಸದ್ಯದ ವಾಸ್ತವತೆಗಳಿಗೆ ಮತ್ತು ಕೂಡಲೆ ಕಂಡುಬರುವ ಸಾಧ್ಯತೆಗಳಿಗೆ ಸೀಮಿತವಾಗದೆ ಭವಿಷ್ಯತ್ತಿನತ್ತ, ನೋಡಿ, ಅದನ್ನು ಹತ್ತಿರ ತರುವಂತಾದರೆ ಅದರ ಸಾನ್ನಿಧ್ಯ ಎಲ್ಲ ಬಗೆಯ ವ್ಯತ್ಯಾಸವನ್ನುಂಟು ಮಾಡಬಹುದು; ಆ ವ್ಯತ್ಯಾಸ ನಿಧಾನಗತಿಯ, ಅಂಜುಬುರುಕ ಅಭಿವೃದ್ಧಿ ಮತ್ತು ದಿಟ್ಟತನದಿಂದ ಸಾಧಿಸುವ ಹಾಗೂ ತೀವ್ರಗತಿಯ ಅಭಿವೃದ್ಧಿ ಇವುಗಳ ನಡುವಿರುತ್ತದೆ. ಅನಾಹುತವೊಂದು ಮಧ್ಯೆ ಪ್ರವೇಶಿಸಬಹುದು ಇಲ್ಲವೆ ಕೈಕೊಂಡದ್ದನ್ನು ಹಾಳು ಮಾಡಬಹುದು, ಹಾಗಿದ್ದಾಗ್ಯೂ ಕೊನೆಯ ಪರಿಣಾಮ ಸುನಿಶ್ಚಿತ. ಸಂದರ್ಭ ಏನೇ ಇರಲಿ, ಏಕೀಕರಣ ಪ್ರಕೃತಿಯ ಮುನ್ನಡೆಯಲ್ಲಿ ಒಂದು ಆವಶ್ಯಕತೆ, ಅನಿವಾರ್ಯ ಚಲನೆ ಮತ್ತು ಅದರ ಸಿದ್ಧಿಯನ್ನು ಕುರಿತು ಸುರಕ್ಷಿತವಾಗಿ ಭವಿಷ್ಯ ನುಡಿಯಬಹುದು. ರಾಷ್ಟ್ರಗಳಿಗೆ ಅದರ ಆವಶ್ಯಕತೆ ಸ್ಪಷ್ಟವಿದೆ, ಏಕೆಂದರೆ ಅದಿಲ್ಲದೆ ಚಿಕ್ಕ ಜನಾಂಗಗಳ ಸ್ವಾತಂತ್ರ್ಯ, ಈ ನಂತರ, ಎಂದಿಗೂ ಸುರಕ್ಷಿತವಾಗಿ ಉಳಿಯಲಾರದು. ದೊಡ್ಡ ಹಾಗೂ ಸಾಮರ್ಥ್ಯಪೂರ್ಣ ರಾಷ್ಟ್ರಗಳು ಕೂಡ ನಿಜವಾಗಿ ಸುರಕ್ಷಿತವಾಗಿರ–ಲಾರವು. ಭಾರತ ವಿಭಜನೆಗೊಂಡೇ ಉಳಿದುಕೊಂಡರೆ ತನ್ನ ಸುರಕ್ಷಿತತೆಯ ಬಗ್ಗೆ ತಾನು ನಿಶ್ಚಿತತೆಯಿಂದ ಉಳಿದುಕೊಳ್ಳಲಾರದು. ಹಾಗಾಗಿ ಎಲ್ಲರ ಹಿತದ ದೃಷ್ಟಿಯಿಂದ ಏಕೀಕರಣ ಉಂಟಾಗಬೇಕು. ಕೇವಲ ಮಾನವ ಬುದ್ಧಿ ದೌರ್ಬಲ್ಯ ಮತ್ತು ಹೆಡ್ಡತನದ ಸ್ವಾರ್ಥ ಅದನ್ನು ತಡೆಯಬಹುದು. ಅದರ ವಿರುದ್ಧ ದೇವತೆಗಳೂ ಕೂಡ ವ್ಯರ್ಥ ಹೋರಾಟ ನಡೆಸಬೇಕಾಗುವುದು ಎಂದು ಹೇಳಲಾಗಿದೆ. ಆದರೆ ಪ್ರಕೃತಿಯ ಆವಶ್ಯಕತೆ ಮತ್ತು ದೈವೀ ಸಂಕಲ್ಪ ಇವುಗಳ

ಆವಶ್ಯಕತೆಯ ವಿರುದ್ಧ ತಡೆದು ನಿಲ್ಲಲಾರದು. ಆಗ ರಾಷ್ಟ್ರೀಯತೆ ತನ್ನ ನೆರವೇರಿಕೆ ಕಂಡುಕೊಳ್ಳುವುದು, ಅಂತಾರಾಷ್ಟ್ರೀಯ ಮನೋಭಾವ ಮತ್ತು ದೃಷ್ಟಿಕೋನ ಬೆಳೆದು ಬರಬೇಕು ಹಾಗೆಯೇ ಅಂತಾರಾಷ್ಟ್ರೀಯ ರೂಪಗಳು ಹಾಗೂ ಸಂಸ್ಥೆಗಳು ಬೆಳೆಯಬೇಕು; ಆ ಅಭಿವೃದ್ಧಿ ಹೊಂದುವ ರೀತಿ ಎರಡು ಅಥವಾ ಹಲವಾರು ರಾಷ್ಟ್ರಗಳ ಪೌರತ್ವ (citizenship) ಪಡೆಯುವುದಾಗಿರಬಹುದು ಮತ್ತು ಸ್ವ–ಇಚ್ಛೆಯಿಂದ ಕೈಕೊಂಡ ಸಂಸ್ಕೃತಿಗಳ ಒಂದುಗೂಡಿಸುವಿಕೆ ಆಗಿರಬಹುದು. ಇವು ಬದಲಾವಣೆಯ ವಿಧಾನದಲ್ಲಿ ತೋರಿಬರಬಹುದು, ಮತ್ತು ರಾಷ್ಟ್ರೀಯತೆಯ ಉತ್ಸಾಹ ಅದರ ಸಮರಸ್ಥಿತಿ(militancy)ಯನ್ನು ಕಳೆದು–ಕೊಂಡಾಗ ಈ ವಿಷಯಗಳು ತನ್ನದೇ ದೃಷ್ಟಿಕೋನದ ಸಮಗ್ರತೆಗೆ ಪರಿಪೂರ್ಣವಾಗಿ ಹೊಂದಿಕೊಳ್ಳುವಂತಾಗಬಹುದು. ಏಕತೆಯ ಹೊಸ ಮನೋಭಾವ ಮನುಕುಲವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವುದು.

ಜಗತ್ತಿಗೆ ಭಾರತದ ಆಧ್ಯಾತ್ಮಿಕ ಕಾಣಿಕೆ ಈಗಾಗಲೆ ಪ್ರಾರಂಭವಾಗಿದೆ. ಭಾರತದ ಆಧ್ಯಾತ್ಮಿಕತೆ ಎಂದೆಂದಿಗೂ ಹೆಚ್ಚುತ್ತಿರುವ ಪರಿಮಾಣದಲ್ಲಿ ಯುರೋಪ ಮತ್ತು ಅಮೇರಿಕಾ ದೇಶಗಳಲ್ಲಿ ಪ್ರವೇಶ ಪಡೆಯುತ್ತಿದೆ. ಆ ಚಲನೆ ಬೆಳೆಯುವುದು; ಕಾಲದ ಅನರ್ಥಕಾರಕಗಳ ನಡುವೆ ಹೆಚ್ಚು ಹೆಚ್ಚಾಗಿ ಜನರ ಕಣ್ಣುಗಳು ಭಾರತದತ್ತ ನಿರೀಕ್ಷೆಯೊಂದಿಗೆ ಹೊರಳುತ್ತಿವೆ ಮತ್ತು ಅಲ್ಲಿ ಭಾರತದ ಬೋಧನೆಗಳಿಗಾಗಿ ಅಷ್ಟೇ ಅಲ್ಲ, ಆದರೆ ಅದರ ಚೈತ್ಯಾತ್ಮಿಕ ಮತ್ತು ಆಧ್ಯಾತ್ಮಿಕ ಆಚರಣೆಗಳಿಗಾಗಿಯೂ ಕೂಡ ಆಶ್ರಯ ಕಂಡುಕೊಳ್ಳುತ್ತಿರುವುದು ಹೆಚ್ಚಾಗ–ತೊಡಗಿದೆ. ಉಳಿದದ್ದೆಲ್ಲ ಇನ್ನೂ ವೈಯಕ್ತಿಕ ನಿರೀಕ್ಷೆ, ವಿಚಾರ ಹಾಗೂ ಆದರ್ಶ, ಅದು ಭಾರತದಲ್ಲಿ, ಪಾಶ್ಚಿಮಾತ್ಯ ದೇಶಗಳಲ್ಲಿ ಮುಂದುವರಿದ ಮನಸ್ಸುಳ್ಳ ಜನರನ್ನು ಹಿಡಿದುಕೊಳ್ಳುತ್ತಿದೆ. ಆ ಮಾರ್ಗದಲ್ಲಿ ತೊಂದರೆಗಳು ಇನ್ನಾವುದೇ ಕ್ಷೇತ್ರದಲ್ಲಿರುವುದಕ್ಕಿಂತ ಹೆಚ್ಚು ದಿಗಿಲು ಹುಟ್ಟಿಸುವಂತಹವಾಗಿವೆ, ಆದರೆ ತೊಂದರೆಗಳು ಇರುವಂತೆ ಮಾಡಿದ್ದು ಅವುಗಳ ಮೇಲೆ ಜಯ ಸಾಧಿಸುವುದ–ಕ್ಕಾಗಿಯೇ ಇರುತ್ತದೆ, ಅಲ್ಲಿ ಪರಮೋಚ್ಚನ ದೈವೀ ಸಂಕಲ್ಪವಿದ್ದರೆ ಅವುಗಳ ಮೇಲೆ ಜಯ ಸಾಧಿಸಲಾಗುವುದು. ಇಲ್ಲಿಯೂ ಕೂಡ ಉತ್ಕ್ರಾಂತಿ ಸಂಭವಿಸಬೇಕಾದರೆ, ಏಕೆಂದರೆ ಅದು ಆತ್ಮದ ಹಾಗೂ ಆಂತರಿಕ ಪ್ರಜ್ಞೆ ಇವುಗಳ ಬೆಳವಣಿಗೆಯ ಮೂಲಕ ಬರಬೇಕಾದುದರಿಂದ, ಅದರ ಪ್ರಾರಂಭಗೊಳ್ಳುವಿಕೆ ಭಾರತದಿಂದ ಬರಬೇಕು, ಹಾಗಿದ್ದಾಗ್ಯೂ ಅದರ ವ್ಯಾಪ್ತಿ ವಿಶ್ವಂಭರವಾಗಿರಬೇಕು; ಕೇಂದ್ರೀಯ ಚಲನೆ ಭಾರತದ್ದಾಗಿರಬಹುದು.

ಭಾರತದ ಸ್ವಾತಂತ್ತ್ರ್ಯದ ದಿನದಂದು ನಾನು ಮುಂದಿರಿಸಿದ ವಿಷಯ ಹೀಗಿದೆ. ಎಷ್ಟರಮಟ್ಟಿಗೆ, ಎಷ್ಟು ಬೇಗ ಈ ಸಂಪರ್ಕ ನೆರವೇರಿಕೆ ಕಂಡುಕೊಳ್ಳಬಹುದು ಎಂಬುದು ಈ ಹೊಸ ಹಾಗೂ ಸ್ವತಂತ್ರ ಭಾರತದ ಮೇಲೆ ಅವಲಂಬಿಸಿದೆ.

**CWSA, 36/474–77** **– ಶ್ರೀ ಅರವಿಂದರು**

*

**ಅಡಿ ಟಿಪ್ಪಣಿ:** ಆಕಾಶವಾಣಿ ತಿರುಚಿನಾಪಳ್ಳಿ ಭಾರತ ಸ್ವಾತಂತ್ರ್ಯವನ್ನು ಸಿದ್ಧಿಸಿಕೊಂಡ ದಿನ 15–8–1947 ರ ದಿನದಂದು ಸಾಯಂಕಾಲ ಬಿತ್ತರಿಸಲು ಸಂದೇಶವೊಂದನ್ನು ಕೊಡಬೇಕೆಂದು ಶ್ರೀ ಅರವಿಂದರಿಗೆ ವಿನಂತಿಸಿಕೊಂಡಿತ್ತು. ಆಗ ಅವರು ಬರೆದುಕೊಟ್ಟದ್ದನ್ನು ಇಲ್ಲಿ ಕೊಡಲಾಗಿದೆ.

## ಭಾರತಮಾತೆಗೆ ಆವಾಹನೆ

ಓ ನಮ್ಮ ಮಾತೆಯೆ, ಓ ಭಾರತದ ಆತ್ಮವೆ, ನಿನ್ನ ಮಕ್ಕಳನ್ನು, ಅತ್ಯಂತ ನಿರಾಶೆಯ ಅಂಧಕಾರವಿರುವ ದಿನಗಳಲ್ಲಿಯೂ ಕೂಡ, ಅವರು ನಿನ್ನ ದನಿಯಿಂದ ದೂರ ಹೊರಳಿಕೊಂಡಿದ್ದಾಗಲೂ ಕೂಡ, ಇತರ ಪ್ರಭುಗಳ ಸೇವೆ ಸಲ್ಲಿಸುತ್ತ ನಿನ್ನನ್ನು ನಿರಾಕರಿಸಿದಾಗಲೂ ಕೂಡ ಎಂದಿಗೂ ಅವರನ್ನು ಕೈಬಿಟ್ಟಿರದ ಮಾತೆಯೆ, ಅವರು ಮೇಲೆದ್ದು ಬಂದ ಈ ಸಮಯದಲ್ಲಿ ಮತ್ತು ನಿನ್ನ ಸ್ವಾತಂತ್ರ್ಯದ ಅರುಣೋದಯದ ಪ್ರಕಾಶ ನಿನ್ನ ಮುಖದ ಮೇಲಿದ್ದಾಗ, ನಾವು ನಿನಗೆ ನಮಸ್ಕರಿಸುತ್ತೇವೆ. ನಮಗೆ ಮಾರ್ಗದರ್ಶನ ಮಾಡು, ಅದರಿಂದಾಗಿ ನಮ್ಮೆದುರಿಗೆ ತೆರೆದುಕೊಳ್ಳುತ್ತಿರುವ ಸ್ವಾತಂತ್ರ್ಯದ ಕ್ಷಿತಿಜ ರಾಷ್ಟ್ರಗಳ ಸಮುದಾಯದಲ್ಲಿ ನಿನ್ನ ನಿಜವಾದ ಜೀವನದ, ನಿಜವಾದ ಶ್ರೇಷ್ಠತೆಯ ಕ್ಷಿತಿಜ ಕೂಡ ಆಗಲಿ. ನಮಗೆ ಮಾರ್ಗದರ್ಶನ ಮಾಡು, ಅದರಿಂದಾಗಿ ನಾವು ಯಾವಾಗಲೂ ಶ್ರೇಷ್ಠ ಆದರ್ಶಗಳ ಬದಿಯಲ್ಲಿರುವಂತಾಗಲಿ ಮತ್ತು ಜನರಿಗೆ ನೀನು ನೇತಾರಳಾಗಿರುವಿ ಎಂಬ ಗುಣಲಕ್ಷಣವನ್ನು ಮತ್ತು ಎಲ್ಲ ಜನರಿಗೆ ಒಬ್ಬ ಸ್ನೇಹಿತೆ, ಸಹಾಯಕಳು ಆಗಿರುವಿ ಎಂಬುದನ್ನು ತೋರಿಸಿಕೊಡು.

**CWM, 13/352** **– ಶ್ರೀಮಾತೆ**

*

ನಾನು ಅತಿಮನಸ್ಸಿನ ಸ್ತರದಲ್ಲಿ ನಿಂತುಕೊಂಡಿದ್ದರೆ ಮತ್ತು ಜಗತ್ತಿನ ಮೇಲೆ ಅತಿಮನಸ್ಸಿನ ಉಪಕರಣದ ಮೂಲಕ ಕಾರ್ಯಕೈಕೊಳ್ಳುತ್ತಿದ್ದರೆ, ಜಗತ್ತು ಹೆಚ್ಚು

ತೀವ್ರಗತಿಯಿಂದ ಮತ್ತು ಈಗ ಸಂಭವಿಸುತ್ತಿರುವುದಕ್ಕಿಂತ ಭಿನ್ನ ರೀತಿಯಲ್ಲಿ ಬದಲಾಗಿರುತ್ತಿತ್ತು ಇಲ್ಲವೆ ಬದಲಾಗತೊಡಗುತ್ತಿತ್ತು. ನನ್ನ ಸದ್ಯದ ಪ್ರಯತ್ನ ಉಚ್ಚ ಸ್ತರದಲ್ಲಿರುವ ಹಾಗೂ ದೂರದಲ್ಲಿರುವ ಅತಿ ಮನಸ್ಸಿನ ಮೇಲೆ ನಿಲ್ಲುವುದಕ್ಕಲ್ಲ, ಅಲ್ಲಿಂದ ಜಗತ್ತನ್ನು ಬದಲಾಯಿಸುವುದಕ್ಕಲ್ಲ. ಆದರೆ ಇಲ್ಲಿ ಅದರ ಒಂದಿಷ್ಟನ್ನು ಕೆಳಗಿಳಿಸಿ ತಂದು ಅದರ ಮೇಲೆ ನಿಂತುಕೊಂಡು ಹಾಗೂ ಅದರ ಮೂಲಕ ಕಾರ್ಯಕೈಕೊಳ್ಳುವುದಕ್ಕಾಗಿದೆ, ಆದರೆ ಸದ್ಯದ ಹಂತದಲ್ಲಿ ಅಧಿಮಾನಸದ ಅತಿಮಾನಸೀಕರಣ ಕೂಡಲೆ ಕೈಕೊಳ್ಳಬೇಕಾದ ಪ್ರಥಮ ಕರ್ತವ್ಯವಾಗಿದೆ. ಮತ್ತು ಎರಡನೆಯದಾಗಿ ಮಾನವ ಅಜ್ಞಾನಕ್ಕೆ ಆಧಾರ ನೀಡುವ ಅಚೇತನದ ಭಾರವಾದ ಪ್ರತಿರೋಧವನ್ನು ಹಗುರುಗೊಳಿಸುವುದಾಗಿದೆ; ಜಗತ್ತನ್ನು ಇಲ್ಲವೆ ಮನುಷ್ಯ ತನ್ನನ್ನು ಬದಲು ಮಾಡುವ ಪ್ರಯತ್ನದಲ್ಲಿ ಆ ಅಜ್ಞಾನ ಮುಖ್ಯ ಅಡೆತಡೆಯಾಗಿದೆ.

ಯುದ್ಧದಂತಹ ಮಾನವ ಸಂಗತಿಗಳ ಮೇಲೆ ನಾನಿರಿಸುವ ಆಧ್ಯಾತ್ಮಿಕ ಶಕ್ತಿ ಅತಿಮಾನಸದ್ದಲ್ಲ, ಆದರೆ ಅಧಿಮಾನಸದ್ದೆಂದು ಯಾವಾಗಲೂ ಹೇಳಿದ್ದೇನೆ. ಮತ್ತು ಅಧಿಮಾನಸ ಶಕ್ತಿ ಜಗತ್ತಿನ ಮೇಲೆ ಕಾರ್ಯಕೈಕೊಂಡಾಗ ಅದೆಷ್ಟು ಬಿಡಿಸಿಕೊಳ್ಳಲಾಗದಂತೆ ನಿಮ್ನತರ ಜಗತ್ತಿನ ಶಕ್ತಿಗಳೊಡನೆ ಸಿಕ್ಕಿಹಾಕಿಕೊಂಡಿರುತ್ತದೆ ಎಂದರೆ ಅದರ ಪರಿಣಾಮಗಳು ನೇರವಾದ ಉದ್ದೇಶಕ್ಕೆ ಎಷ್ಟೇ ಬಲವತ್ತರವಾಗಿರಲಿ ಇಲ್ಲವೆ ಎಷ್ಟೇ ಯಥಾಯೋಗ್ಯವಾಗಿರಲಿ ಅವಶ್ಯವಾಗಿ ಭಾಗಶಃ ಆಗಿರಲೇಬೇಕು. ಆ ಕಾರಣದಿಂದಾಗಿಯೇ ನನ್ನ ಜನ್ಮದಿನ ಅಗಸ್ಟ 15ರಂದು ಜನ್ಮದಿನದ ಕಾಣಿಕೆಯ ರೂಪದಲ್ಲಿ ಸ್ವತಂತ್ರ ಇಂಡಿಯಾ ನನಗೆ ದೊರೆತಿದೆ, ಆದರೆ ಅದನ್ನು ಎರಡು ಸ್ವತಂತ್ರ ಇಂಡಿಯಾಗಳೆಂದು ಎರಡು ಪಾಕೀಟುಗಳಲ್ಲಿ ಕೊಡಲಾಗಿದೆ, ಈ ಔದಾರ್ಯವಿಲ್ಲದಿದ್ದರೆ ಒಳಿತಾಗುತ್ತಿತ್ತು, ಒಂದೇ ಒಂದು ವಿಭಜಿತಗೊಂಡಿರದ ಸ್ವತಂತ್ರ ಇಂಡಿಯಾ ಸಾಕಾಗುತ್ತಿತ್ತು.

**CWSA, 35/367–68** **– ಶ್ರೀ ಅರವಿಂದರು**

*

**ಆಧ್ಯಾತ್ಮಿಕ ನಿಶಾನೆಯ ಚಿತ್ರ**

(ಶ್ರೀಮಾತೆಯವರ ನಿಶಾನೆ ಬೆಳ್ಳಿಬಣ್ಣ ಮಿಶ್ರಿತ ನೀಲಿ ಬಣ್ಣದ ಹಿಂಭಾಗವಿರುವ ಹಾಗೂ ಕೇಂದ್ರದಲ್ಲಿ ಬಂಗಾರ ಬಣ್ಣದ್ದಿರುವ ಸಂಕೇತವನ್ನು ಒಳಗೊಂಡಿದೆ.) ಅದು ಇಂಡಿಯಾದ ಆಧ್ಯಾತ್ಮಿಕ ಮಣಿಹವನ್ನು ಸೂಚಿಸುವ

ನಿಶಾನೆ. ಈ ಮಣಿಹವನ್ನು ಸಿದ್ಧಿಸಿಕೊಳ್ಳುವುದರಲ್ಲಿ ಇಂಡಿಯಾದ ಏಕತೆಯನ್ನೂ ಸಿದ್ಧಿಸಿಕೊಳ್ಳಲಾಗುವುದು.

**CWM, 13/360** **– ಶ್ರೀಮಾತೆ**

*

ಏಕಗೊಂಡ ಇಂಡಿಯಾದ ಆಧ್ಯಾತ್ಮಿಕ ನಿಶಾನೆ ಎಂದು ಶ್ರೀ ಅರವಿಂದರು ಕರೆದಿದ್ದ ನಿಶಾನೆ ನಮ್ಮ ಬಳಿ ಇದೆ. ಅದರ ರೂಪ ಚಚ್ಚೌಕಾಗಿದೆ, ಅದರ ಬಣ್ಣ ಮತ್ತು ಅದರ ರೇಖಾಚಿತ್ರ (design)ದ ಪ್ರತಿಯೊಂದು ವಿವರ ಇವುಗಳಿಗೆ ಸಾಂಕೇತಿಕ ಅರ್ಥವಿದೆ. ಇಂಡಿಯಾ ಸ್ವತಂತ್ರವಾದ ದಿನ ಅಗಸ್ಟ 15ರಂದು ಅದನ್ನು ಹಾರಿಸಲಾಗಿತ್ತು. ಈ ಎಲ್ಲ ವಸಾಹತುಗಳು ಇಂಡಿಯಾದೊಂದಿಗೆ ಕೂಡಿಕೊಳ್ಳಲಿರುವ ದಿನ ನವ್ಹೆಂಬರ 1 1954ರಂದು ಈ ಬಾವುಟವನ್ನು ಹಾರಿಸಲಾಗುವುದು. ಮತ್ತು ಭವಿಷ್ಯತ್ತಿನಲ್ಲಿ ತನ್ನ ಭಾಗಗಳನ್ನು ಮರಳಿ ಪಡೆದ ದಿನದಂದು ಅದನ್ನು ಹಾರಿಸಲಾಗುವುದು. ಏಕಗೊಂಡ ಇಂಡಿಯಾಕ್ಕೆ ಜಗತ್ತಿನಲ್ಲಿ ನೆರವೇರಿಕೆ ಕಂಡುಕೊಳ್ಳಬೇಕಾದ ವಿಶಿಷ್ಟ ಮಣಿಹವಿದೆ. ಅದಕ್ಕಾಗಿ ಶ್ರೀ ಅರವಿಂದರು ತಮ್ಮ ಪ್ರಾಣದ ಆಹುತಿ ಕೊಟ್ಟಿದ್ದಾರೆ ಮತ್ತು ಅದನ್ನು ಕೈಕೊಳ್ಳಲು ನಾವು ಕೂಡ ತಯಾರಾಗಿದ್ದೇವೆ.

**– ಶ್ರೀಮಾತೆ**

*

ಬುಲೆಟಿನ್ (Bulletin of Sri Aurobindo International Centre of Education)ದ ಮುಖಪುಟದ ಮೇಲೆ ತೋರಿಸಲಾದ ಬಾವುಟ ಪೂರ್ತಿ ಅರಳಿಕೊಂಡ ಬಂಗಾರ ಬಣ್ಣದ ಕಮಲದ ಹೂವನ್ನು ಪ್ರತಿನಿಧಿಸುತ್ತದೆ. ಅದರಲ್ಲಿ ದಳಗಳಿರುವ ಎರಡು ಸಾಲುಗಳಿವೆ: ನಾಲ್ಕು ಒಳಭಾಗದಲ್ಲಿವೆ, ಹನ್ನೆರಡು ಹೊರ ಭಾಗದಲ್ಲಿವೆ. ಈ ಕಮಲದ ಹೂವು ಬೆಳ್ಳಿ ಬಣ್ಣ ಮಿಶ್ರಿತ ನೀಲಿ ಬಣ್ಣದ ಚಚ್ಚೌಕಿನ ನಿಖರ ಕೇಂದ್ರದಲ್ಲಿದೆ. ನೀಲಿ ಬಣ್ಣ ಆತ್ಮದ ಬಣ್ಣ, ಬಂಗಾರದ ಬಣ್ಣ ಪರಮೋಚ್ಚ ಮಾತೆಯ ಬಣ್ಣ. ಆ ಬಾವುಟವನ್ನು ಸುತ್ತುವರಿದ ಕೆಂಪು ಬಣ್ಣ ಜ್ಞಾನೋದಯ ಪಡೆದ ಭೌತಿಕ ಪ್ರಜ್ಞೆಯ ಬಣ್ಣ.

**– ಶ್ರೀ ಅರವಿಂದರು**



*My rival's downfall is my own disgrace,*
*I look on my enemy and see Krishna's face.*

- Sri Aurobindo

**RNI No. 22511/1971**
No. of Pages **52 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.